# ನಮ್ಮ ವಿಮೋಚನೆ



ಆಶಿಷ್ ರಾಯ್‌ಚೂರ್

ಉಚಿತವಾದ ಹಂಚಿಕೆಗಾಗಿ ಮಾತ್ರ
ಮುದ್ರಣ ಮತ್ತು ಹಂಚಿಕೆ : **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್,** ಬೆಂಗಳೂರು
ಪ್ರಥಮ ಪ್ರತಿ : ಡಿಜಿಟಲ್ ಬಿಡುಗಡೆ ಸೆಪ್ಟೆಂಬರ್ 2020

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬೈಫೈಯ್ಡ್ ಡಿಸೈನ್ಸ್

**Contact Information:**

All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: bookrequest@apcwo.org
Website: apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.

Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.

Scriptures marked as "(GNB)" are taken from the GNB – Second Edition © 1992 by American Bible Society. Used by permission.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

**ಮೇಲಿಂಗ್ ಪಟ್ಟಿ ಮತ್ತು ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ**

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book - Our Redemption)

# ನವ್ಯ ವಿಮೋಚನೆ

# ಪರಿವಿಡಿ


1. ನಮ್ಮ ವಿಮೋಚನಗಾರನು ಜೀವಿಸುವವನು! 1

2. ನಮ್ಮ ವಿಮೋಚನೆ 14

3. ನಮ್ಮ ವಿಮೋಚನೆಯ ಪ್ರಯೋಜನಗಳು 26

4. ನಮ್ಮ ವಿಮೋಚನೆಯ ಪ್ರಯೋಜನಗಳನ್ನು ಸ್ವಾಧೀನಪಡಿಸಿಕೊಳ್ಳುವುದು 40

# 1

# ನಮ್ಮ ವಿಮೋಚನಗಾರನು ಜೀವಿಸುವವನು!

ಪ್ರಪಂಚವನ್ನು ಸತ್ಯವೇದ ಇಲ್ಲದೆ-ಈ ವಿಶ್ವವನ್ನು ಯಾವುದೇ ಬರೆಯಲ್ಪಟ್ಟಂತಹ ದೇವರ ಪ್ರಕಟನೆಗಳಿಲ್ಲದೇ ಇರುವುದನ್ನು ಕಲ್ಪಿಸಿಕೊಳ್ಳಿರಿ. ದೇವರ ಬಗ್ಗೆ ನಮ್ಮ ತಿಳುವಳಿಕೆ ಹೇಗಿರುತ್ತಿತ್ತು? ಪ್ರಪಂಚವು ಸತ್ಯವೇದವಿಲ್ಲದಿದ್ದರೆ, ನಾವು ಸಾರ್ವಭೌಮನಾದ ದೇವರನ್ನು ನಂಬುತ್ತಿದ್ದೇವಾ, ಒಬ್ಬ ರಕ್ಷಕನು, ಒಬ್ಬ ವಿಮೋಚಕನು-ಪಾಪದಿಂದ ಮತ್ತು ಅದರ ಪ್ರಾಯಶ್ಚಿತ್ತಗಳಿಂದ ನಮ್ಮ ಸ್ವತಂತ್ರತೆಯನ್ನು ಖರೀದಿಸಲು ''ಬೆಲೆಯನ್ನು ಕಟ್ಟಿದ'' ಆತನ ಅಗತ್ಯತೆಯನ್ನು ನಾವು ಅರ್ಥ ಮಾಡಿಕೊಳ್ಳುತ್ತಿದ್ದೇವಾ?

## ಯೋಬನ ಪುಸ್ತಕ-ಒಂದು ಐತಿಹಾಸಿಕ ದೃಷ್ಟಿಕೋನ

ಯೋಬನು 1:1

**ಊಚ್ ದೇಶದಲ್ಲಿ ಯೋಬನೆಂಬ ಒಬ್ಬ ಮನುಷ್ಯನಿದ್ದನು ಅವನು ದೇವರಲ್ಲಿ ಭಯಭಕ್ತಿಯುಳ್ಳವನಾಗಿ ಕೆಟ್ಟದ್ದನ್ನು ನಿರಾಕರಿಸುತ್ತಾ ನಿರಾಕರಿಸುತ್ತಾ ನಿರ್ದೋಷಿಯೂ ಯಥಾರ್ಥ ಚಿತ್ತನೂ ಆಗಿದ್ದನು.**

ಮೋಶೆಯ ಮೂಲಕವಾಗಿ ಧರ್ಮಶಾಸ್ತ್ರವು ಅಥವಾ ಕಟ್ಟಳೆಯು ಕೊಡಲ್ಪಡುವುದಕ್ಕೆ ಮುಂಚಿನ ಸಮಯದಲ್ಲಿ ಬಹುಶಃ ಜೀವಿಸಿದಂತಹ ವ್ಯಕ್ತಿಯು ಯೋಬನಾಗಿದ್ದಾನೆ. ಸತ್ಯವೇದ ವಿದ್ವಾಂಸರು ಮತ್ತು ಇತಿಹಾಸಗಾರರು, ಯೋಬನು ವಾಸಿಸುತ್ತಿದ್ದಂತಹ ಸಮಯ ಇಲ್ಲವೇ ಯೋಬನ ಪುಸ್ತಕದ ರಚನೆಯ ದಿನಾಂಕವು ಯಾವುದೇ ನಿಶ್ಚಿತತೆಯೊಂದಿಗೆ ನಿರ್ಧರಿಸಲಾಗುವುದಿಲ್ಲ ಎಂಬುದಾಗಿ ನಮಗೆ ಹೇಳುತ್ತಾರೆ. ಯೆಹೂದ್ಯರ ವಿಧಿಗಳು, ಹಬ್ಬಗಳು, ಮೋಶೆಯ ನಿಯಮ ಮುಂತಾದವುಗಳ ಉಲ್ಲೇಖನದ ಕೊರತೆಯಿಂದಾಗಿ, ಮೋಶೆಯ ಕಾನೂನು ಅಥವಾ ನಿಯಮವು ಕೊಡುವುದಕ್ಕಿಂತ ಮೊದಲು ಯೋಬನು ವಾಸಿಸುತ್ತಿದ್ದನು ಎಂಬುದಾಗಿ ತೋರುತ್ತದೆ. ಯೇಸುಕ್ರಿಸ್ತನು ಈ ಲೋಕಕ್ಕೆ ಬರುವ 2000 ವರ್ಷಗಳ ಹಿಂದೆಯೇ ಯೋಬನು ಜೀವಿಸಿದ್ದನು ಎಂಬುದಾಗಿ ನಾವು ಊಹಿಸಿಕೊಳ್ಳಬಹುದು.''ಯೋಬನು'' – ಯೋಬನ ಪುಸ್ತಕದಲ್ಲಿನ ವ್ಯಕ್ತಿಯು ಆದಿಕಾಂಡ 46:13ರಲ್ಲಿ ಉಲ್ಲೇಖಿಸಿದಂತಹ

ಯಾಕೋಬನ ಮೂರನೇ ಮಗನಾದ ಇಸ್ಸಾಕಾರನ ಮಕ್ಕಳ ಪಟ್ಟಿಯಲ್ಲಿ ಇರುವ ಹೆಸರು ಆಗಿದ್ದರೆ, ಫಿನಿಸ್‌ಡೇಕ್‌ನ (ಡೇಕ್ಸ್ ಟಿಪ್ಪಣಿ ಉಲ್ಲೇಖ ಸತ್ಯವೇದ) ಪ್ರಕಾರವಾಗಿ ಐಗುಪ್ತ್ಯದಿಂದ ನಿರ್ಗಮಿಸುವ 15 ವರ್ಷಗಳ ಮೊದಲು ಯೋಬನು ಬಹುಶಃ ಮರಣ ಹೊಂದಿರಬಹುದು. ಡೇಕ್‌ನು ಯೋಬನ ಅನುಭವಗಳ ಘಟನೆಗಳ ಸಮಯವು ಕ್ರಿ.ಪೂ 1845 ಎಂಬುದಾಗಿ ಹೇಳುತ್ತಾನೆ. ನಿಶ್ಚಿತವಾದ ಸಮಯವನ್ನು ಗಣನೆಗೆ ತೆಗೆದುಕೊಳ್ಳದೆ, ಮೋಶೆಗೆ ನಿಬಂಧನ ಗ್ರಂಥವೆಂಬ ಧರ್ಮಶಾಸ್ತ್ರವು ಕೊಡುವುದಕ್ಕೆ ಮೊದಲು, ಆದಿಕಾಂಡ, ವಿಮೋಚನಕಾಂಡ, ಯಾಜಕಕಾಂಡ, ಅರಣ್ಯಕಾಂಡ ಧರ್ಮೋಪದೇಶಕಾಂಡ ಪುಸ್ತಕಗಳು ಬರೆಯುವುದಕ್ಕೆ ಮೊದಲು ಯೋಬನು ಜೀವಿಸಿದನೆಂದು ನಾವು ಊಹಿಸಿಕೊಳ್ಳುವುದು ಸುರಕ್ಷಿತವೆಂದು ತೋರುತ್ತದೆ.

ಬರೆಯಲ್ಪಟ್ಟ ದೇವರ ವಾಕ್ಯಗಳಿಲ್ಲದೇ, ಯೋಬನು ಮತ್ತು ಅವನ ಸ್ನೇಹಿತರು ದೇವರು ಮತ್ತು ನಿತ್ಯತ್ವದ ಕುರಿತು ಯಾವ ರೀತಿಯಾದಂತಹ ತಿಳುವಳಿಕೆಯನ್ನು ಹೊಂದಿದ್ದರು ಎಂಬುದನ್ನು ನೋಡುವಂತದ್ದು ತುಂಬಾ ಆಸಕ್ತಿಕರವಾಗಿದೆ. ನೋಹನು, ಅಬ್ರಹಾಮನು, ಇಸಾಕನು ಮತ್ತು ಯಾಕೋಬನು ತಲೆಮಾರಿನ ಮೂಲಕವಾಗಿ ಮತ್ತು ಸಂಬಂಧಿತ ಶಾಖೆಗಳ ಮೂಲಕವಾಗಿ ಮೌಖಿಕವಾಗಿ ಸಂಪರ್ಕ ಹೊಂದುವ ಮೂಲಕವಾಗಿ ತಿಳುವಳಿಕೆಯನ್ನು ಹೊಂದಿಕೊಂಡರು ಎಂಬುದು ಸಾಧ್ಯಕರವಾಗಿರಬಹುದು. ಸೀಮಿತವಾದ ಮಾಹಿತಿಗಳ ಮೂಲಗಳನ್ನು ಪರಿಗಣಿಸಿದರೆ, ಪ್ರಾಚೀನವಾದ ಯೋಬನ ಕಥೆಯಲ್ಲಿ ನಿರೂಪಿಸಲಾದಂತ ದೇವರ ಶ್ರೀಮಂತ ತಿಳುವಳಿಕೆಯನ್ನು ನಾವು ಕಾಣುವಂತದ್ದು ನಮಗೆ ವಿಸ್ಮಯಗೊಳಿಸುತ್ತದೆ.

## ವಿಮೋಚನೆ – ಪ್ರಾಚೀನ ಸಮಯಗಳಲ್ಲಿ ಅರ್ಥೈಸಲಾಗಿದೆ

ಯೋಬನ ಪುಸ್ತಕವು ದುರಾತ್ಮನ ''ದಾಳಿಯ'' ಅಡಿಯಲ್ಲಿ ಬಂದಂತಹ ಒಬ್ಬ ದೈವಿಕ ಮನುಷ್ಯನ ಅನುಭವಗಳ ದಾಖಲೆಯಾಗಿದೆ. ಸೈತಾನನು ಯೋಬನಿಗೆ ವಿರುದ್ಧವಾಗಿ ಎಲ್ಲ ಕೆಟ್ಟ ಕಾರ್ಯಗಳನ್ನು ಮಾಡಲೂ, ಯೋಬನ ಮಕ್ಕಳ ಜೀವಿತಗಳನ್ನು ನಾಶ ಮಾಡುವ, ಅವನ ಸ್ವಾಸ್ಥ್ಯವನ್ನು ಮತ್ತು ನೋವಿನ ಹುಣ್ಣುಗಳೊಡನೆ ಯೋಬನನ್ನು ಪೀಡಿಸಲು ಅನುಮತಿಯನ್ನು ಹೊಂದಿದ್ದನು. ಈ ಸಮಯದಲ್ಲಿ ಯೋಬನ ಮೂರು ಸ್ನೇಹಿತರುಗಳಾದ ಎಲೀಫಜನು, ಬಿಲ್ದದನು, ಚೋಫರನು – ಯೋಬನ ವಿಪತ್ತುಗಳನ್ನು ನೋಡಿ, ಸಂತೈಸುವುದಕ್ಕೆ ಬಂದರು. ಯೋಬನ ಈ ಬಳಲುವಿಕೆಗೆ ಅವನ ವೈಯಕ್ತಿಕ ಪಾಪವೇ ಕಾರಣ ಎಂಬುದಾಗಿ ಈ ಮೂವರು ತಾರ್ಕಿಕವಾಗಿ ಹೇಳಿದರು. ಹೇಗಾದರೂ ಯೋಬನು ಅವನ ಸ್ವಂತ ನೀತಿವಂತಿಕೆಯನ್ನು ಪ್ರತಿಪಾದಿಸಿಕೊಂಡನು

ಮತ್ತು ಅವರ ದಾರಿಬಿಟ್ಟು ಹೋಗದ ಭರವಸೆಯನ್ನು ವ್ಯಕ್ತಪಡಿಸಿದನು. ಆಮೇಲೆ ನಾಲ್ಕನೇ ವ್ಯಕ್ತಿಯಾದಂತಹ ಎಲೀಹು, ಇವನು ಸಹ ಯೋಬನನ್ನು ಭೇಟಿ ಮಾಡಲೂ ಬಂದಿದ್ದನು ಅವನು ಸಹ ತನ್ನ ತರ್ಕವನ್ನು ಪ್ರಸ್ತುತ ಪಡಿಸಿದನು ಎಲೀಹುವು ಮಾನವನ ನೀತಿವಂತಿಕೆಯು ದೇವರ ಮುಂದೇ ಏನು ಇಲ್ಲಾ ಎಂಬುದಾಗಿ ಮತ್ತು ದೇವರ ಮಾರ್ಗಗಳು ಮಾನವನ ತಿಳುವಳಿಕೆಗಿಂತ ಉನ್ನತವಾದವು ಎಂಬುದಾಗಿ ದೃಢವಾಗಿ ಹೇಳಿದನು ಯೋಬನ ಸ್ನೇಹಿತರುಗಳ ನಂತರ ಯೋಬನು ಮತ್ತು ಎಲೀಹು ಅವರ ಮಾತುಗಳನ್ನು ಪ್ರಸ್ತುತ ಪಡಿಸಿದರು, ದೇವರು ಮಾತಾನಾಡಿದನು ಮತ್ತು ಆತನ ಸಾರ್ವಭೌಮತ್ವ ಮತ್ತು ಶ್ರೇಷ್ಟತೆಗೆ ಯೋಬನ ಗಮನವನ್ನು ಸೆಳೆದನು. ದೇವರು ಯೋಬನ ಸ್ನೇಹಿತರಗಳಾದ ಎಲೀಫಜನು, ಬಿಲ್ದದನು ಮತ್ತು ಚೋಫರನ್ನು ಹೀಗೆ ಹೇಳುವ ಮೂಲಕವಾಗಿ ಗದರಿಸಿದನು. ''ನನ್ನ ದಾಸನಾದ ಯೋಬನು ನನ್ನ ವಿಷಯವಾಗಿ ಸತ್ಯವನ್ನು ನುಡಿದಂತೆ ನೀವು ನುಡಿಯಲಿಲ್ಲ ಎಂದು ಹೇಳಿದನು'' (ಯೋಬನು 42:8ಬಿ). ಆಮೇಲೆ ದೇವರು ಯೋಬನ ಜೀವಿತದಲ್ಲಿ ಮಧ್ಯಪ್ರವೇಶಿಸಿದನು ಮತ್ತು ಪರಿಸ್ಥಿತಿಗಳನ್ನು ಬದಲಾಯಿಸಿದನು ಮತ್ತು ಯೋಬನನ್ನು ಅಧಿಕವಾಗಿ ಆಶೀರ್ವದಿಸಿದನು.

ಯೋಬನ ಪುಸ್ತಕದಲ್ಲಿ ಪ್ರಸ್ತುತಪಡಿಸಲಾದ ಬಾಧೆಗಳಿಗೆ ಮಾನವನ ತರ್ಕದ ಮಧ್ಯೆ ಆತ್ಮಿಕ ಸತ್ಯದ ಅಮೂಲ್ಯವಾದ ಉಪಯುಕ್ತ ಮಾಹಿತಿಗಳನ್ನು ನೋಡುತ್ತೇವೆ. ಉಳಿದ ವಚನ ಭಾಗಗಳಲ್ಲಿ ಪ್ರಸ್ತುತಪಡಿಸಲಾದ ತಿಳುವಳಿಕೆಯೊಡನೆ ಮೌಲ್ಯಮಾಪಿಸುವಾಗ ಈ ಪುರುಷರು ಮಾತಾನಾಡಿದಂತಹ ಎಲ್ಲವೂ ಸರಿಯಾಗಿರಲಿಲ್ಲ ಆದಾಗ್ಯೂ ಅವರು ಹೇಳಿದಂತಹ ಎಲ್ಲವೂ ತಪ್ಪಾಗಿಯೂ ಇರಲಿಲ್ಲ ಅವರು ಹೊಂದಿದಂತಹ ಸ್ವಲ್ಪ ಜ್ಞಾನವು ವಾಸ್ತವವಾಗಿ ದೈವಿಕವಾಗಿ ಪ್ರೇರಿತಗೊಂಡಿದ್ದರು ಎಂಬುದು ಸಾಧ್ಯಕರವಾಗಿದೆ.

(ಸೂಚನೆ: ದಿನದಿಂದ ದಿನಕ್ಕೆ ಜೀವನದ ವಿಷಯಗಳನ್ನು ಕುರಿತು ಸಹ ದೇವರು ಮನುಷ್ಯನಿಗೆ ಸೂಕ್ಷ್ಮಜ್ಞಾನವನ್ನು ಮತ್ತು ತಿಳುವಳಿಕೆಯನ್ನು ನೀಡಲು ಶಕ್ತನು ಎಂಬುದಾಗಿ ವಚನ ಭಾಗಗಳು ನಮಗೆ ಸೂಚಿಸುತ್ತವೆ. ಉದಾಹರಣೆಗೆ ಯೆಶಾಯ 28:23–29ರಲ್ಲಿನ ವಚನ ಭಾಗವು ದೇವರು ಮನುಷ್ಯನಿಗೆ ವ್ಯವಸಾಯ ಮಾಡುವುದು ಎಂಬುದನ್ನು ಕಲಿಸಿಕೊಟ್ಟನು ಎಂಬುದಾಗಿ ತೋರಿಸುತ್ತದೆ.)

ಜೀವನದ ವಿಪತ್ತುಗಳಿಗೆ ಉತ್ತರವಾಗಿ ಒಬ್ಬ ''ವಿಮೋಚಕನ'' ಅಗತ್ಯತೆಗೆ ಸಂಬಂಧಿಸಿದಂತೆ ಈ ಪುರುಷರು ಹೇಗೆ ಅರಿವುಳ್ಳವರಾಗಿದ್ದರು ಎಂಬುದನ್ನು

ಗಮನಿಸುವುದು ಆಸಕ್ತಿಕರವಾಗಿದೆ. ಯೋಬನು ಮತ್ತು ಎಲೀಹು ಇಬ್ಬರು ವಿಮೋಚನೆಯ ವಿಷಯದ ಮೇಲೆ ಕೆಲವು ಅಸಾಧಾರಣ ಒಳನೋಟಗಳನ್ನು ಪ್ರಸ್ತುತ ಪಡಿಸಿದರು. ಯೋಬನ ಪುಸ್ತಕದಲ್ಲಿ ಪ್ರಸ್ತುತಪಡಿಸಲಾದ ವಿಮೋಚನೆಯ ತಿಳುವಳಿಕೆಯ ಮೇಲೆ ನಮ್ಮ ದೃಷ್ಟಿಯನ್ನು ಕೇಂದ್ರಿಕರಿಸೋಣ.

## ಎಲೀಹುವಿನ ತಿಳುವಳಿಕೆ

ಯೋಬನು 33:14–30

**ದೇವರು ಮಾತಾಡುವ ರೀತಿ ಒಂದುಂಟು ಹೌದು ಎರಡೂ ಉಂಟು, ಮನುಷ್ಯನಾದರೋ ಲಕ್ಷಿಸುವುದಿಲ್ಲ ಮನುಷ್ಯರಿಗೆ ಗಾಢನಿದ್ರೆಯುಂಟಾದಾಗಲೂ ಹಾಸಿಗೆಯ ಮೇಲೆ ಜಂಪುಹತ್ತಿದಾಗಲೂ ಆತನು ಸ್ವಪ್ನದಲ್ಲಿ ರಾತ್ರಿಯ ಕನಸಿನಲ್ಲಿ ಅವರ ಕಿವಿಗಳನ್ನು ತೆರೆದು ಅವರಿಗೆ ಶಿಕ್ಷಾ ವಚನವನ್ನು ಉಪದೇಶಿಸಿ ಅದಕ್ಕೆ ಮುದ್ರೆ ಹಾಕುವನು ಹೀಗೆ ಮನುಷ್ಯನನ್ನು ಅವನ ದುಷ್ಕಾರ್ಯದಿಂದ ತಪ್ಪಿಸುವನು ಮಾನವನಿಗೆ ಗರ್ವವನ್ನು ಮರೆ ಮಾಡುವನು. ಅವನ ಆತ್ಮವನ್ನು ಅಧೋಲೋಕಕ್ಕೆ ಬೀಳದಂತೆ ತಡೆದು ಅವನ ಜೀವವನ್ನು ದೈವಾಸ್ತ್ರದಿಂದ ಅಳಿದು ಹೋಗದ ಹಾಗೆ ನಿಲ್ಲಿಸುವನು ಇದಲ್ಲದೆ ಸಂಕಟದಿಂದಲೂ ನಿತ್ಯವಾದ ಅಸ್ಥಿ ಪೀಡನದಿಂದಲೂ ಮನುಷ್ಯನು ಹಾಸಿಗೆಯ ಮೇಲೆ ಶಿಕ್ಷಿಸಲ್ಪಡುವನು ಅವನ ಜೀವವು ಆಹಾರಕ್ಕೆ ಬೇಸರಗೊಳ್ಳುವದು, ಅವನ ಆತ್ಮವು ಮೃಷ್ಟಾನ್ನಕ್ಕೂ ಅಸಹ್ಯಪಡುವದು ಅವನ ಮಾಂಸವು ಕ್ಷಯಿಸಿ ಕಾಣದೆ ಹೋಗುವದು, ಕಾಣದಿದ್ದ ಅವನ ಎಲುಬುಗಳು ಬಯಲಾಗುವವು ಅವನ ಆತ್ಮವು ಅಧೋಲೋಕವನ್ನು ಸಮೀಪಿಸುವುದು, ಅವನ ಪ್ರಾಣವು ಸಂಹಾರದೂತರಿಗೆ ಹತ್ತಿರವಾಗುವುದು ಮನುಷ್ಯ ಕರ್ತವ್ಯವನ್ನು ತೋರಿಸತಕ್ಕ ಸಹಸ್ರ ದೂತರಲ್ಲಿ ಒಬ್ಬನು ಅವನಿಗೆ ಮಧ್ಯಸ್ಥನಾಗಿ ಬೇಡುವದರಿಂದ ದೇವರು ಒಂದು ವೇಳೆ ಆ ಮನುಷ್ಯನಿಗೆ ಮೆಚ್ಚಿ ಈಡು ಸಿಕ್ಕಿತು, ಅಧೋಲೋಕಕ್ಕೆ ಇಳಿಯದಂತೆ ಇವನನ್ನು ರಕ್ಷಿಸು ಎಂದು ಅಪ್ಪಣೆಕೊಟ್ಟರೆ ಅವನು ದೇಹವು ಬಾಲ್ಯಕ್ಕಿಂತಲೂ ಕೋಮಲವಾಗುವುದು ಅವನು ಪುನಃ ಎಳೆಯತನದ ದಿನಗಳನ್ನು ಅನುಭವಿಸುವನು. ಅವನು ಪುನಃ ಎಳೆಯತನದ ದಿನಗಳನ್ನು ಅನುಭವಿಸುವನು. ಅವನು ದೇವರನ್ನು ಪ್ರಾರ್ಥಿಸಿ ಆತನ ಒಲುಮೆಗೆ ಪಾತ್ರನಾಗಿ ಆತನ ದರ್ಶನ ಮಾಡಿ ಉತ್ಸಾಹ ಧ್ವನಿಗೈದು ತಿರುಗಿ ಆತನಿಂದ ನೀತಿವಂತನೆನಿಸಿಕೊಳ್ಳುವನು. ಅವನು ಮನುಷ್ಯರ ಮುಂದೆ ನಿಂತು ನಾನು ಪಾಪ ಮಾಡಿ ನ್ಯಾಯವನ್ನು ಕೆಡಿಸಿದ್ದರೂ ಆತನು ಮುಯ್ಯಿತಿರಿಸದೆ ನನ್ನ ಆತ್ಮವನ್ನು ಅಧೋಲೋಕಕ್ಕೆ ಹೋಗದಂತೆ ವಿಮೋಚಿಸಿದ್ದಾನೆ. ನನ್ನ ಜೀವವು ಬೆಳಕನ್ನು ಕಾಣುತ್ತಿರುವುದು ಎಂದು ಕೀರ್ತನೆ ಹಾಡುವೆನು. ನೋಡು ಮನುಷ್ಯನ ಆತ್ಮವು ಅಧೋಲೋಕದಿಂದ ಹಿಂದಿರುಗಿ ಜೀವಲೋಕದ ಬೆಳಕನ್ನು ಅನುಭವಿಸುವಂತೆ ದೇವರು ಎರಡು ಸಾರಿಯಿಲ್ಲದೆ ಮೂರು ಸಾರಿ ಈ ಕಾರ್ಯಗಳನ್ನೆಲ್ಲಾ ಮಾಡುವನು.**

ಎಲೀಹುವು ಯೋಬನೊಂದಿಗೆ ಮಾತಾನಾಡಲೂ ಅವನ ಸರದಿಗಾಗಿ ಕಾಯುತ್ತಿದ್ದನು ಯಾಕೆಂದರೆ ಯೋಬನನ್ನು ಸಂತೈಸಲು ಬಂದಂತಹ ಇತರ ಸ್ನೇಹಿತರುಗಳಿಗಿಂಗ ಇವನು ಕಿರಿಯವನಾಗಿದ್ದನು. ಎಲೀಹುವು ಮಾತಾನಾಡಲೂ ಪ್ರಾರಂಭಿಸಿದಾಗ, ಅವನ ದೈವಿಕ ಸ್ಪೂರ್ತಿಯ ಅವಲಂಬನೆಯ ಕುರಿತು ಅವನು ಒತ್ತಿ ಹೇಳಿದನು. ಉದಾಹರಣೆಗೆ ಅವನ ಪ್ರಾರಂಭದ ವ್ಯಾಖ್ಯಾನಗಳನ್ನು ಈ ಕೆಳಗಿನಂತೆ ನೋಡಿರಿ ''ನಾನು ಯೌವನಸ್ಥನು, ನೀವು ಅತಿವೃದ್ಧರು ಆದದರಿಂದ ಸಂಕೋಚಪಟ್ಟು ನನ್ನ ಅಭಿಪ್ರಾಯವನ್ನು ನಿಮಗೆ ಅರಿಕೆ ಮಾಡಲು ಅಂಜಿದೆನು. ಹೆಚ್ಚು ದಿನಗಳವರು ಮಾತಾಡಲಿ, ಬಹಳ ವರುಷದವರು ಜ್ಞಾನೋಪದೇಶ ಮಾಡಲಿ ಅಂದುಕೊಂಡಿದ್ದೆನು ಆದರೆ ಮನುಷ್ಯರಲ್ಲಿ ಆತ್ಮವೊಂದುಂಟು ಸರ್ವಶಕ್ತನ ಶ್ವಾಸದಿಂದ ಅವರಿಗೆ ವಿವೇಕ ದೊರೆಯುತ್ತದೆ. ವೃದ್ಧರೇ ಜ್ಞಾನಿಗಳಲ್ಲ ಮುದುಕರು ಮಾತ್ರ ನ್ಯಾಯಬಲ್ಲವರಲ್ಲ (ಯೋಬನು 32:6-9). ಆನಂತರ ದೇವರು ಮಾತಾನಾಡಿದಾಗ ಆತನು ಯೋಬನ ಸ್ನೇಹಿತರಾದ-ಎಲೀಫಜನು, ಬಿಲ್ದದನು ಮತ್ತು ಚೋಫರನ್ನು ಗದರಿಸಿದನು ಆದರೆ ಎಲೀಹುವನ್ನು ಗದರಿಸಲಿಲ್ಲ ಎಂಬುದನ್ನು ನಾವು ನೆನಸಿಕೊಳ್ಳಬೇಕು ಎಲೀಹುವು ಯೋಬನೊಂದಿಗೆ ತರ್ಕಿಸಲು ಪ್ರಾರಂಭಿಸಿದಾಗ ಯೋಬನ ಸ್ವ-ನೀತಿವಂತಿಕೆಯ ವರ್ತನೆಯನ್ನು ಆಕ್ಷೇಪಿಸಿದನು ಮತ್ತು ನ್ಯಾಯವನ್ನು ನಿರಾಕರಿಸಿದನೆಂದು ದೇವರನ್ನು ಆರೋಪಿಸಿದ್ದಕ್ಕಾಗಿ ಎಲೀಹುವು ಆಕ್ಷೇಪಣೆ ವ್ಯಕ್ತಪಡಿಸಿದನು. ಮನುಷ್ಯನನ್ನು ಅವನ ದುಷ್ಕಾರ್ಯದಿಂದ ತಿರುಗಿಸಲೂ ಕನಸ್ಸುಗಳು ಮತ್ತು ದರ್ಶನಗಳ ಮೂಲಕವಾಗಿ ಮನುಷ್ಯನೊಂದಿಗೆ ದೇವರು ಮಾತಾನಾಡಲು ಹೇಗೆ ಪ್ರಯತ್ನಿಸುತ್ತಾನೆಂದು ಎಲೀಹುವು ವ್ಯಾಖ್ಯಾನಿಸಿದನು. ದೇವರು ಅನಾರೋಗ್ಯ ಮತ್ತು ನೋವುಗಳ ಮಧ್ಯದಲ್ಲಿ ಮನುಷ್ಯನು ಅನಾರೋಗ್ಯದಿಂದ ಹಾಸಿಗೆಯ ಮೇಲಿರುವಾಗ, ಸಮಾಧಿಗೆ ಸಮೀಪಿಸುವಾಗ, ಸರಿಯಾದದನ್ನು ಮಾಡುವಂತೆ ಬಾಧೆ ಪಡುವವನಿಗೆ ವಿವರಿಸಲು ಮತ್ತು ದೇವರ ಕಡೆಗೆ ಪಶ್ಚಾತ್ತಾಪದಿಂದ ಹಿಂತಿರುಗಲೂ ವಿವರಿಸಲು ಒಬ್ಬ ಸಂದೇಶಕನು ಇದ್ದರೆ ಮತ್ತು ಮನುಷ್ಯನು ಪಶ್ಚಾತ್ತಾಪ ಪಟ್ಟರೆ - ''ದೇವರು ಒಂದು ವೇಳೆ ಆ ಮನುಷ್ಯನಿಗೆ ಮೆಚ್ಚಿ ಈಡು ಸಿಕ್ಕಿತು ಅಧೋಲೋಕಕ್ಕೆ ಇಳಿಯದಂತೆ ಇವನನ್ನು ರಕ್ಷಿಸು ಎಂದು ಅಪ್ಪಣೆ ಕೊಟ್ಟರೆ.'' (ಯೋಬನು 33:24) ಇದು ಜರುಗುತ್ತದೆ.

ವಿಮೋಚನೆಗಾಗಿ ಬಿಡುಗಡೆಯ ಶುಲ್ಕವು ಪಾವತಿಸಲ್ಪಟ್ಟಿದೆ. ಯಾರಾದರೂ ಒತ್ತೆಯಾಳುಗಳಾಗಿ ಹಿಡಿದುಕೊಂಡಾಗ ವ್ಯಕ್ತಿಗಳ ಬಿಡುಗಡೆಗಾಗಿ ಪಾವತಿಸಬೇಕಾದ ಬೆಲೆಯ ಮೌಲ್ಯವು ವಿಮೋಚನಾ ಶುಲ್ಕವಾಗಿದೆ ಸೆರೆಯಿಂದ ಅವರ ಸ್ವತಂತ್ರ್ಯೆಯನ್ನು ಪಡೆಯುವ ಪ್ರಕ್ರಿಯೆಯು ವಿಮೋಚನೆಯಾಗಿದೆ. ಯೋಬನು 33:24ರಲ್ಲಿ

''ವಿಮೋಚನಾ ಶುಲ್ಕಕ್ಕೆ'' ಉಪಯೋಗಿಸದ ಪದವು ''ಕೋಫ಼್ರ್'' (ಸ್ಟ್ರಾಂಗ್ಸ್ # 3724), ಆಗಿದ್ದು ಇದು 'ಕಫ಼್ರ್' ಮೂಲ ಪದದಿಂದ ಬಂದಿದ್ದು, ವಿಮೋಚನೆಯ ಬೆಲೆ, ಒಂದು ಸುಲಿಗೆಯ ಶುಲ್ಕ ಪ್ರಾಯಶ್ಚಿತ್ತವನ್ನು ಸೂಚಿಸಲೂ ಈ ಪದವು ಉಪಯೋಗಿಸಲ್ಪಟ್ಟಿದೆ. ಇದು ಪಾಪವನು ಮುಚ್ಚುವುದನ್ನು ಸಹ ಸೂಚಿಸಲೂ ಈ ಪದವು ಉಪಯೋಗಿಸಲ್ಪಟ್ಟಿದೆ. ಇದು ಪಾಪವನ್ನು ಮುಚ್ಚುವುದನ್ನು ಸಹ ಸೂಚಿಸಲೂ ಉಪಯೋಗಿಸಲಾಗಿದೆ ಪಾಪಕ್ಕಾಗಿ ತಿದ್ದುಪಡಿ, ಸಮಾಧಾನಪಡಿಸು ಅಥವಾ ತಣಿಸು ಎಂಬುದಾಗಿ ಪ್ರಾಯಶ್ಚಿತ್ತದ ಪ್ರಜ್ಞೆಯು ಆಗಿದೆ.

'ಒಂದು ಸುಲಿಗೆಯ ಶುಲ್ಕ-ವಿಮೋಚನೆಯ ಹಣವು ಪ್ರಾಚೀನ ಸಮಯದಲ್ಲಿ ಈ ಪರಿಕಲ್ಪನೆಗಳು ಅರ್ಥೈಸಲ್ಪಟ್ಟಿದ್ದವು ಎಂಬುದನ್ನು ತಿಳಿಯುವುದು ಆಸಕ್ತಿಕರವಾಗಿದೆ.

ಜನರನ್ನು ಅನಾರೋಗದಿಂದ ಹೊರತರುವುದು ಮತ್ತು ವಿನಾಶದಿಂದ ಅವರನ್ನು ಸಂರಕ್ಷಿಸುವ ಸಂಪರ್ಕದೊಡನೆ ಇದಕ್ಕೆ ಸಂಬಂಧಿಸಿದಂತೆ ಇದನ್ನು ನಡೆಸಲಾಗಿದೆ ಎಂದು ಗಮನಿಸುವುದು ಆಸಕ್ತಿಕರವಾಗಿದೆ.
''ಗುಂಡಿ'' ಎಂಬುದು ದೈಹಿಕ ಮತ್ತು ನಿತ್ಯತ್ವದ ನಾಶನವನ್ನು ಸೂಚಿಸುತ್ತದೆ.

## ನಾನು ಬಿಡುಗಡೆಯ ಒಂದು ಶುಲ್ಕ ಕಂಡುಕೊಂಡಿದ್ದೇನೆ

ಎಲೀಹುವು ಬಾಧೆಯಲ್ಲಿರುವ ವ್ಯಕ್ತಿಗೆ ಒಂದು ವಿಮೋಚನಾ ಶುಲ್ಕವನ್ನು ದೇವರು ಗುರುತಿಸುವುದರ ಪರಿಣಾಮಗಳನ್ನು ವಿವರಿಸುತ್ತಾನೆ. ನಾವು ''ಬಿಡುಗಡೆಯ ಶುಲ್ಕದ ಆಶೀರ್ವಾದವನ್ನು'' ಈ ಕೆಳಗಿನಂತೆ ಎಣಿಸಬಹುದು.

## ಆಗ ದೇವರು ಅವನಿಗೆ ಕೃಪಾಕರನಾಗಿರುವನು (ವಚನ 24)

ದೇವರು ಒಂದು ಬಿಡುಗಡೆಯ ಶುಲ್ಕವನ್ನು - ಒಂದು ವಿಮೋಚನೆಯ ಬೆಲೆಯನ್ನು ಕಂಡುಹಿಡಿದಿರುವುದರಿಂದ ಬಾಧೆಪಡುತ್ತಿರುವ ವ್ಯಕ್ತಿಯ ಮೇಲೆ ದೇವರು ಕೃಪೆಯನ್ನು ನೀಡುತ್ತಾನೆ. ಹಿಂದೆ ಮುಂದುವರೆದು ಪಾಪದಲ್ಲಿ ಇದ್ದಂತವರನ್ನು ದೇವರು ಅಂಗೀಕರಿಸಲೂ ಶಕ್ತನಾಗಿದ್ದಾನೆ. ಆದರೆ ಅವನನಾವಳ ತಪ್ಪು ಮಾರ್ಗಗಳನ್ನು ಅರಿತುಕೊಳ್ಳಬೇಕು ಮತ್ತು ದೇವರ ಕಡೆಗೆ ತಿರುಗಬೇಕು. ಪಾಪವು ದಂಡಿಸಲ್ಪಡಬೇಕೆಂಬ ಅವಶ್ಯಕತೆಯಿರುವ ದೇವರ ನ್ಯಾಯದ ಬೇಡಿಕೆಯನ್ನು ಬಿಡುಗಡೆಯ ಶುಲ್ಕವು ನೋಡಿಕೊಂಡಿದೆ. ದೇವರ ನ್ಯಾಯವು ತೃಪ್ತಿಕರವಾಗಿರುವುದರಿಂದ, ಆತನ ಕೃಪೆಯು ಈ ವಿಸ್ತರಿಸಲ್ಪಡುತ್ತದೆ. ಬಿಡುಗಡೆಯ ಶುಲ್ಕದ ನಿಮಿತ್ತದಿಂದ ದೇವರ ಕೃಪೆಯು ವಿಸ್ತರಿಸಲ್ಪಟ್ಟಿದೆ.

## ಅಧೋಲೋಕಕ್ಕೆ (ಗುಳಿ) ಇಳಿಯದಂತೆ ಇವನನ್ನು ರಕ್ಷಿಸು (ವಚನ 24)

ಒಂದು ಬಿಡುಗಡೆಯ ಶುಲ್ಕವನ್ನು ಗುರುತಿಸುವುದರ ಒಂದು ಪರಿಣಾಮವಾಗಿ ಮತ್ತು ಆತನ ಕೃಪೆಯನ್ನು ವಿಸ್ತರಿಸುವಾಗ ಆ ವ್ಯಕ್ತಿಯು ದೈಹಿಕ ನಾಶನದಿಂದ ''ರಕ್ಷಿಸುವಂತೆ'' ದೇವರು ಆಜ್ಞಾಪಿಸುತ್ತಾನೆ. ಅನಾರೋಗ್ಯದ ಮೂಲಕವಾಗಿ ಈ ವ್ಯಕ್ತಿಯು ಮರಣಕ್ಕೆ ಸಮೀಪದಲ್ಲಿದ್ದಾನೆ. ಆದರೆ ದೇವರು ಬಿಡುಗಡೆಯ ಶುಲ್ಕವನ್ನು ನೀಡಿದ್ದಾನೆ ಮತ್ತು ಆತನ ಕೃಪೆಯನ್ನು ವಿಸ್ತರಿಸುತ್ತಾನೆ, ಈ ವ್ಯಕ್ತಿಯು ಮರಣಹೊಂದುವ ಅವಶ್ಯಕತೆಯಿಲ್ಲ ಮತ್ತು ಕೀರ್ತನೆಗಾರನು ಈ ಕೆಳಗೆ ಹೇಳಿದಂತೆ ಅವನು ಹೇಳಬಹುದು ''ನಾನು ಸಾಯುವುದಿಲ್ಲ ಜೀವದಿಂದಿದ್ದು ಯಾಹುವಿನ ಕ್ರಿಯೆಗಳನ್ನು ಸಾರುವೆನು'' (ಕೀರ್ತನೆಗಳು 118:17). ''ಬಿಡುಗಡೆಮಾಡು'' ಎಂಬ ಪದವು ಮೂಲ ಪದವಾದ ''ಪದ'' (Pada) (ಸ್ಟ್ರಾಂಗ್ಸ್ # 6308) ಎಂಬ ಇಬ್ರಿಯ ಭಾಷೆಯ ಪದದಿಂದ ಬಂದಿದೆ ಮತ್ತು ಇದರ ಸಾಮಾನ್ಯ ಅರ್ಥವು ''ಬಿಡುಗಡೆ ಮಾಡು'' ವಿಮುಕ್ತಗೊಳಿಸು, ಸಡಿಲಿಸು, ಒಂದು ಬೆಲೆಯೊಡನೆ ಬಿಡುಗಡೆಗೊಳಿಸು'' ಎಂಬುದಾಗಿದೆ. ಅನಾರೋಗ್ಯದಿಂದ ಉಂಟಾದ ದೈಹಿಕ ಮರಣದಿಂದ ಬಿಡುಗಡೆಯು ವಿಮೊಚನಾ ಶುಲ್ಕದ ಆಶೀರ್ವಾದವಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ಸಾಯುವುದು ಪೂರ್ವ ನಿರ್ದಿಷ್ಟವಾದುದಾಗಿದೆ (ಇಬ್ರಿಯರಿಗೆ 6:27) ಹೇಗಾದರೂ, ಆದರ್ಶಪ್ರಾಯವಾಗಿ ನಾವು ''ಸುಗ್ಗೀ ಕಾಲದಲ್ಲಿ ತೆನೆಸಿವುಡು(ಮನೆಗೆ) ಸೇರುವಂತೆ ನೀನು ವೃದ್ಧಾಪ್ಯದಲ್ಲಿ ಸಮಾಧಿಗೆ ಸೇರುವಿ'' (ಯೋಬನು 5:26).

## ಅವನ ದೇಹವು ಚಿಕ್ಕ ಮಗುವಿನಂತೆ ಇರುವುದು, ಅವನು ತನ್ನ ಯೌವ್ವನ ದಿವಸಗಳಿಗೆ ಹಿಂದಿರುಗುವನು (ವಚನ 25)

ದೇಹದಲ್ಲಿ ಸ್ವಸ್ಥತೆ ಮತ್ತು ದೈಹಿಕ ಆರೋಗ್ಯದ ಪುನಃ ಸ್ಥಾಪನೆಯು ವಿಮೋಚನಾ ಶುಲ್ಕದ ಇನ್ನೊಂದು ಆಶೀರ್ವಾದವಾಗಿದೆ. ಅಸ್ವಸ್ಥಗೊಂಡಿದ್ದ ವ್ಯಕ್ತಿಯು ಈಗ ಆರೋಗ್ಯ ಮತ್ತು ಶಕ್ತಿ ಸಾಮರ್ಥ್ಯದಿಂದ ಪುನಃ ಕಟ್ಟಲ್ಪಡುತ್ತಾನೆ. ವಿಮೋಚನೆ ಶುಲ್ಕದ ಬಾಕಿಯಿಂದ ನಮ್ಮ ಪಾಪಗಳನ್ನು ದೇವರು ಕ್ಷಮಿಸುತ್ತಾನೆ ಮತ್ತು ನಮ್ಮ ಎಲ್ಲಾ ಅನಾರೋಗ್ಯಗಳನ್ನು ಸ್ವಸ್ಥಪಡಿಸುತ್ತಾನೆ! ಹಲ್ಲೆಲೂಯ!!

## ಅವನು ದೇವರನ್ನು ಪ್ರಾರ್ಥಿಸುವನು ಮತ್ತು ಆತನ ಮೆಚ್ಚುಗೆಗೆ ಅವನು ಪಾತ್ರನಾಗುವನು (ವಚನ 26)

ಪ್ರಾರ್ಥನೆಗಳು ಉತ್ತರಿಸಲ್ಪಡುವುದು ಬಿಡುಗಡೆಯ ಶುಲ್ಕದ ಇನ್ನೊಂದು ಆಶೀರ್ವಾದವಾಗಿದೆ. ಪಾಪವು ನಮ್ಮ ದೇವರಿಂದ ಬೇರ್ಪಡಿಸಿರುವುದಾಗಿದೆ. ''ಆದರೆ ನಿಮ್ಮ ಅಪರಾಧಗಳೇ ನಿಮ್ಮ ದೇವರಿಂದ ನಿಮ್ಮನ್ನು ಅಗಲಿಸುತ್ತಾ ಬಂದಿವೆ; ನಿಮ್ಮ ಪಾಪಗಳೇ ಆತನು ಕೇಳಲಾರದಂತೆ ಆತನ ಮುಖಕ್ಕೆ ಅಡ್ಡವಾಗಿವೆ'' (ಯೆಶಾಯ 59:2). ನಮ್ಮ ಪ್ರಾರ್ಥನೆ ಕೇಳಲೂ ಮತ್ತು ನಮ್ಮ ಪ್ರಾರ್ಥನೆಗಳನ್ನು ಉತ್ತರಿಸಲೂ ನಮ್ಮ ಪಾಪಗಳು ಅಡ್ಡವಾಗಿವೆ. ಆದರೂ ದೇವರು ವಿಮೋಚನಾ ದಂಡವನ್ನು ಕಂಡುಕೊಂಡಿದ್ದಾನೆ. ಪಶ್ಚಾತ್ತಾಪದಿಂದ ಆತನ ಬಳಿಗೆ ಬರುವಾಗ ನಮ್ಮ ಪಾಪಗಳು ಮಾರ್ಗದಿಂದ ತೆಗೆದು ಹಾಕಲ್ಪಡುತ್ತದೆ. ನಾವು ಈಗ ಪ್ರಾರ್ಥಿಸಬಹುದು ಮತ್ತು ನಮ್ಮ ಪ್ರಾರ್ಥನೆಗಳನ್ನು ಉತ್ತರಿಸುವುದರೊಡನೆ ನಮಗೆ ದಯೆ ತೋರಿಸುತ್ತಾನೆ.

## ಆತನ ಮುಖವನ್ನು ಅವನು ಸಂತೋಷದೊಡನೆ ನೋಡುವನು (ವಚನ 26)

ಒಂದು ಆರೋಗ್ಯಕರ, ಭರವಸೆವುಳ್ಳ, ಸಂತೋಷಭರಿತ, ವೈಯಕ್ತಿಕ ಮತ್ತು ನಿಕಟವಾದ ಸಂಬಂಧವು ಈಗ ದೇವರೊಂದಿಗೆ ಹೊಂದುವುದು ಸಾಧ್ಯವಾಗಿದೆ ಯಾಕೆಂದರೆ ವಿಮೋಚನೆಯ ಬೆಲೆಯು ಪಾವತಿಸಲ್ಪಟ್ಟಿದೆ. ನಾವು ಪಾಪದ ಅಧೀನದಲ್ಲಿ ಭಯಪಡುವ ತಗ್ಗಿಬಗ್ಗುವ ಗುಲಾಮರಲ್ಲ, ಆದರೆ ದೇವರನ್ನು ''ಅಬ್ಬಾ ತಂದೆಯೇ'' ಎಂಬುದಾಗಿ ಕರೆಯುವ ವಿಮೋಚನೆಗೊಂಡ ಪುತ್ರರು ಮತ್ತು ಪುತ್ರಿಯರು ಆಗಿರುತ್ತೇವೆ. ನಾವು ಸಮಾಧಾನ, ಸಹಬಾಳ್ವೆ, ಸ್ನೇಹ ಮತ್ತು ದೇವರೊಂದಿಗೆ ಅನ್ಯೋನ್ಯತೆ ಹೊಂದಿದ್ದೇವೆ.

## ಆತನ ನೀತಿವಂತಿಕೆಯನ್ನು ಮನುಷ್ಯನಿಗೆ ತಿರುಗಿ ಕಟ್ಟಿಕೊಡುವನು (ವಚನ 26)

ಜನರು ದೇವರೊಂದಿಗೆ ನಿಂತುಕೊಳ್ಳಲೂ ಒಂದು ಸರಿಯಾದ ನಿಲ್ಲುವಿಕೆಯನ್ನು ತಿರುಗಿ ಕಟ್ಟಿಕೊಡುವನು. ''ದೇವರ ಮುಂದೆ ಸರಿಯಾಗಿರುವುದು'' ಅಂದರೆ ದೇವರು ನಮ್ಮನ್ನು ಇಂದೆಂದಿಗೂ ತಪ್ಪಿತಸ್ಥರೆಂದು ಪರಿಗಣಿಸುವುದಿಲ್ಲ ಎಂಬುದಾಗಿ ಅರ್ಥವಾಗಿದೆ. ಪರಲೋಕದ ನ್ಯಾಯಸ್ಥಾನದಲ್ಲಿ ನಾವುಗಳು ಎಲ್ಲಾ ಖಂಡನೆಗಳಿಂದ ಸ್ವತಂತ್ರರಾಗಿದ್ದೇವೆ. ನಾವು ಕ್ಷಮಿಸಲ್ಪಟ್ಟಿದ್ದೇವೆ, ಖುಲಾಸೆಗೊಂಡಿದ್ದೇವೆ ಮತ್ತು ಮನ್ನಿಸಲ್ಪಟ್ಟಿದ್ದೇವೆ. ನಾವು ಪಾಪವನ್ನೇ ಮಾಡಿಲ್ಲದವರಂತೆ ದೇವರ ಮುಂದೆ ನಿಂತುಕೊಂಡಿದ್ದೇವೆ. ನಮ್ಮ ತಲೆಗಳನ್ನು ಮೇಲಕ್ಕೆ ಎತ್ತಿ ನಿಲ್ಲಬಹುದು. ನಾವು ದೇವರ

ಬಳಿಗೆ ಭಯ ಅಥವಾ ಖಂಡನೆಯಿಂದ ಬರುವುದಿಲ್ಲ ಆದರೆ ಧೈರ್ಯದಿಂದ ಮತ್ತು ಭರವಸೆಯಿಂದ ಬರುತ್ತೇವೆ. ಪಾಪದ ಪ್ರಾಯಶ್ಚಿತ್ತದ ಬೆಲೆಯ ಮೂಲಕವಾಗಿ ಒದಗಿಸಲಾದಂತಹ ಇನ್ನೊಂದು ಆಶೀರ್ವಾದವು ಇದಾಗಿದೆ.

## ಅವನ ಆತ್ಮವನ್ನು ಅಧೋಲೋಕಕ್ಕೆ ಹೋಗದಂತೆ ವಿಮೋಚಿಸಿದ್ದಾನೆ ಮತ್ತು ಅವನ ಜೀವವು ಬೆಳಕನ್ನು ಕಾಣುತ್ತಿರುವುದು (ವಚನ 28)

ನಿತ್ಯತ್ವದ ನಾಶನದಿಂದ ವಿಮೋಚನೆಯು (ಇಬ್ರಿಯ ಪದ ''ಪಧಾ'' ಸ್ಟ್ರಾಂಗ್ಸ್ #6299) ಕಂಡು ಹಿಡಿಯಲ್ಪಟ್ಟಂತ ಪಾಪ ಬಿಡುಗಡೆಯ ಶುಲ್ಕದ ಮೂಲಕವಾಗಿ ಸಾಧ್ಯಕರವಾಗಿದೆ ಅವನ/ಆಕೆಯ ಗರ್ವದಿಂದ ದಾರಿ ತಪ್ಪಿ ಹೋಗಿದ್ದ ವ್ಯಕ್ತಿಯು ಪಶ್ಚಾತ್ತಾಪ ಪಟ್ಟವನಾಗಿ ಈಗ ಅವನು/ಅವಳು ಬೆಳಕನ್ನು ಆನಂದಿಸಲೂ ಜೀವಿಸುವಂತಹ ನಿತ್ಯತ್ವವನ್ನು ಎದುರು ನೋಡಬಹುದಾಗಿದೆ.

ಯೋಬನ ಪುಸ್ತಕ 33:14–30ರಲ್ಲಿ ಪ್ರಸ್ತುತ ಪಡಿಸಿದಂತಹ ವಿಮೋಚನೆಯ ಬೆಲೆಯ ಆಶೀರ್ವಾದಗಳು ''ಬಿಡುಗಡೆಯ ಶುಲ್ಕದ ಏಳು ಆಶೀರ್ವಾದಗಳು'' ಇವಾಗಿವೆ. ಎಂತಹ ಒಂದು ಪ್ರಕಟನೆ! ಹಳೆ ಒಡಂಬಡಿಕೆಯಲ್ಲಿ ಬಲಿಯಾಗಗಳ ಮೂಲಕವಾಗಿ ಆತನ ಜನರಾದ ಇಸ್ರಾಯೇಲ್ಯರೊಡನೆ ಮಾತಾನಾಡಲೂ ದೇವರು ಪ್ರಾರಂಭಿಸುವ ಮೊದಲೇ, ಪ್ರವಾದಿಯಾದ ಯೆಶಾಯನು ಕ್ರಿಸ್ತನ ಕಾರ್ಯಗಳ ಕುರಿತು ಪ್ರವಾದನೆಯನ್ನು ಹೊರ ತರುವ ಮೊದಲೇ ಎಲೀಹುವು ಇವುಗಳನ್ನು ಅರ್ಥ ಮಾಡಿಕೊಂಡಿದ್ದನು ಅರಿತುಕೊಳ್ಳಿರಿ. (ಯೆಶಾಯ 53) ಇದು ಸತ್ಯವಾಗಿ ಅದ್ಭುತಕರವಾದದು!

## ಎಲ್ಲರಿಗಾಗಿ ಒಂದು ಬಿಡುಗಡೆಯ ಶುಲ್ಕ

1 ತಿಮೊಥೆಯನಿಗೆ 2: 5,6

**ಏಕೆಂದರೆ ದೇವರು ಒಬ್ಬನೇ, ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ ಆತನು ಎಲ್ಲ ವಿಮೇಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು ಇದೇ ತಕ್ಕ ಸಮಯಗಳಲ್ಲಿ ಹೇಳಬೇಕಾದ ಸಾಕ್ಷಿಯು.**

ಸುಮಾರು 2000 ವರ್ಷಗಳ ನಂತರ ''ನಿಗದಿತ ಸಮಯ'' ಬಂದಾಗ ದೇವರು ''ಬಿಡುಗಡೆಯ ಬೆಲೆ'' ಒದಗಿಸಿದನು. ಇದು ಯೇಸು ಕ್ರಿಸ್ತನು, ದೇವರು ಮನುಷ್ಯನಾದನು, ವಿಮೋಚನಾ ಬೆಲೆಗೆ ಅರ್ಹತೆಯುಳ್ಳಂತಹ ಏಕ

ಮಾತ್ರವಾದವನಾದನು. ಆತನು ತನ್ನ ಜೀವನವನ್ನೇ ಬಿಡುಗಡೆಯ ಶುಲ್ಕವಾಗಿ ನೀಡಿದ್ದಾನೆ.ಆತನ ತನ್ನ ಜೀವನವನ್ನೇ ಎಲ್ಲರಿಗೆ ವಿಮೋಚನಾರ್ಥವಾಗಿ ಕೊಟ್ಟಿದ್ದಾನೆ.

ಪ್ರತಿಯೊಂದು ಮಾನವ ಜನಾಂಗವು ಪಾಪ ಮಾಡಿದೆ. ಪಾಪವು ಅದರ ಫಲಗಳನ್ನು ಹೊಂದಿದೆ–ಈ ಒಂದು ಜೀವಿತದಲ್ಲಿ ನಾವು ಅನುಭವಿಸುವಂತಹವುಗಳ ತಕ್ಷಣವೇ ಬರುತ್ತವೆ ಮತ್ತು ಕೆಲವುಗಳು ಭವಿಷ್ಯತ್ತಿನ ಜೀವಿತದಲ್ಲಿ ನಿತ್ಯತ್ವವಾಗಿ ಅನುಭವಿಸುವಂತಹವುಗಳಾಗಿವೆ. ಪಾಪವು ಬಾಧೆಪಡುವುದು ಮತ್ತು ನಾಶನವೆಂಬ ಇದರ ಫಲಿತಾಂಶ ಹೊಂದಿದೆ. ಪಾಪದ ನಿಮಿತ್ತವಾಗಿ, ದುರಾತ್ಮನಿಗೆ ಸಂಪೂರ್ಣವಾದ ಮಾನವ ಕುಲವು ಬಂಧನಕ್ಕೆ ಮಾರಲ್ಪಟ್ಟಿದೆ. ದುರಾತ್ಮನು ಜನರ ಜೀವಿತಗಳನ್ನು ಹಿಂಸಿಸಲೂ ಮತ್ತು ದಬ್ಬಾಳಿಕೆ ಮಾಡಲೂ ಅವನ ದುಷ್ಟ ಕಾರ್ಯಗಳನ್ನು ನಿರ್ವಹಿಸುತ್ತಾನೆ. ಶುಭ ಸಂದೇಶವು ಬಂಧನದ ಬಿಡುಗಡೆಯ ಬೆಲೆ – ನಮ್ಮ ವಿಮೋಚನೆಯ ಬೆಲೆಯು ಪಾಪದಿಂದ ಮತ್ತು ಸೈತಾನದಿಂದ ಪಾವತಿಸಲ್ಪಟ್ಟಿದೆ. ಇಂದು ಭೂಮಿಯ ಮೇಲೆ ವಾಸಿಸುತ್ತಿರುವ ಪ್ರತಿಯೊಬ್ಬರು ಇದನ್ನು ತಿಳಿಯಬೇಕು ''ವಿಮೋಚನಾ ಶುಲ್ಕದ ಆಶೀರ್ವಾದಗಳನ್ನು'' ಆನಂದಿಸಬೇಕು.

## ಯೋಬನ ತಿಳುವಳಿಕೆ

ಯೋಬನು 19:25–27

**ನಾನಂತು ನನ್ನ ವಿಮೋಚಕನು ಜೀವಸ್ವರೂಪನೆಂದು ಬಲ್ಲೆನು ಆತನು ಕಡೆಗೆ ದೂಳಿನ ಮೇಲೆ (ಸಾಕ್ಷಿಯಾಗಿ) ನಿಂತುಕೊಳ್ಳುವನು ನನ್ನ ಚರ್ಮವು ಹೀಗೆ ಬಿರಿದು ಹಾಳಾದ ಬಳಿಕ ನಿರ್ದೇಹನಾಗಿ ದೇವರನ್ನು ನೋಡುವೆನು ಕಣ್ಣಾರೆ ಕಾಣುವೆನು ನಾನೇ ನಾನಾಗಿ ನೋಡುವೆನು ಮತ್ತೊಬ್ಬನಾಗಿ ಅಲ್ಲ ನನ್ನ ಹೃದಯವು (ಹಂಬಲಿಕೆಯಿಂದ) ನನ್ನಲ್ಲಿ ಕುಂದಿದೆ.**

ಯೋಬನು 19:25–27ರಲ್ಲಿ ವ್ಯಾಖ್ಯಾನಿಸಲ್ಪಟ್ಟಂತಹ ವಚನಗಳು ಯೋಬನ ಪುಸ್ತಕದಲ್ಲಿನ ವಚನ ಭಾಗದ ಅತ್ಯಂತ ಮಹತ್ವದ ಭಾಗವಾಗಿದೆ. ಅವನ ಅತೀವ ಬಾಧೆಯ ಮಧ್ಯದಲ್ಲಿಯು, ಅವನು ಬಾಧೆಗಳನ್ನು ಅನುಭವಿಸುವುದು ''ಎಷ್ಟು ಸಮಯ'' ಮತ್ತು ''ಏಕೆ'' ''ಹೇಗೆ'' ಎಂಬುದಕ್ಕೆ ಉತ್ತರವು ಅವನಿಗೆ ತಿಳಿಯದಿದ್ದಾಗಲೂ ಯೋಬನು ಇಂತಹ ಮಾತುಗಳನ್ನು ಉಚ್ಚರಿಸಲಾಗಿದ್ದು ಗಮನಾರ್ಹವಾದದ್ದು. ಯಾವುದೇ ಸತ್ಯವೇದವು ಅವನ ಸುತ್ತಲೂ ಇಲ್ಲದಿರುವಾಗಲೂ ಇಂತಹ ಆತ್ಮಿಕ ಸತ್ಯವನ್ನು ತಿಳಿದುಕೊಂಡಿದ್ದು, ಈ ಪ್ರಕಟನೆಗಳನ್ನು ಯೋಬನು ಹೊಂದಿದ್ದನ್ನು ಪರಿಗಣಿಸಿದರೆ, ಇದು ಸತ್ಯವಾಗಿಯೂ ಅದ್ಭುತಕರವಾದದು!

ಯೋಬನ ವಿಮೋಚಕನು-ಅವನನ್ನು ಬಿಡುಗಡೆಗೊಳಿಸುವವನ್ನು - ಜೀವಂತವಾಗಿರುವಾತನು ಎಂಬುದಾಗಿ ಅವನ ನಂಬಿಕೆಯನ್ನು ದೃಢೀಕರಿಸುತ್ತಾನೆ. ಭವಿಷ್ಯತ್ತಿನ ಸ್ವಲ್ಪ ಸಮಯದವರೆಗೂ ಅವನ ವಿಮೋಚಕನು ನಿಂತುಕೊಳ್ಳುತ್ತಾನೆ ಎಂಬುದಾಗಿ ಅವನ ನಂಬಿಕೆಯಲ್ಲಿ ಅವನು ದೃಢೀಕರಿಸುತ್ತಾನೆ ಅವನ ದೇಹವು ನಾಶವಾಗುವುದಾದರೂ ಮತ್ತು ಕೊಳೆತು ಹೋದಾಗಲೂ ಅವನ ಸ್ವಂತ ಕಣ್ಣುಗಳಿಂದ ಒಂದು ದೇಹವಾಗಿ ದೇವರನ್ನು ನೋಡುವೆನು ಎಂಬುದಾಗಿ ಅವನು ನಂಬಿದ್ದನು. ಯೋಬನು ನಿತ್ಯತ್ವದ ಸಂಗತಿಗಳ ತಿಳುವಳಿಕೆಯ ಬಗ್ಗೆ ಯೋಬನು ಹೇಗೆ ನಿಖರವಾಗಿದ್ದನು! ತುಂಬಾ ಅದ್ಭುತಕರವಾದದು!

ವಿಮೋಚನೆ-ಒಂದು ಬಿಡುಗಡೆಯ ಶುಲ್ಕವನ್ನು ಪಾವತಿಸುವ ಮೂಲಕ ಬರುವಂತಹ ಸ್ವಾತಂತ್ರ್ಯ - ಅದತ ತಕ್ಷಣದ ಆಶೀರ್ವಾದಗಳನ್ನು ಹೊಂದಿರುವುದು ಮಾತ್ರವಲ್ಲದೇ ಇನ್ನೂ ಅನುಭವಿಸಬೇಕಾಗಿರುವಂತಹ ಆಶೀರ್ವಾದಗಳು ಮತ್ತು ನಿತ್ಯತ್ವವಾಗಿರುವ ಆಶೀರ್ವಾದಗಳನ್ನು ಹೊಂದಿರುವುದಾಗಿದೆ. ''ವಿಮೋಚಕ'' ಎಂಬುದಕ್ಕೆ ಉಪಯೋಗಿಸಿದ ಇಬ್ರಿಯ ಪದವನ್ನು ಗಮನಿಸುವುದು ಆಸಕ್ತಿಕರವಾಗಿದೆ. ಯೋಬನು 19:25-27ರಲ್ಲಿ ''ಗಾಲ್'' (Gaal) ಎಂಬ ಪದವು ವಿಮೋಚಕ ಎಂಬುದಕ್ಕೆ ಉಪಯೋಗಿಸಿದೆ (ಸ್ಟ್ರಾಂಗ್ಸ್ #1350) ''ರಕ್ತ ಸಂಬಂಧಿ-ವಿಮೋಚಕ'' ಎಂಬುದಾಗಿ ಉಲ್ಲೇಖ ಹೊಂದಿದೆ ಒಬ್ಬ ಬಂಧುವು ಯಾವುದೇ ರಕ್ತ ಸಂಬಂಧಿ, ಸೋದರ ಸಂಬಂಧಿ. ಪೌರಸ್ತ್ಯ ರಕ್ತ ಸಂಬಂಧಿಯ ಕಾನೂನಿನಲ್ಲಿ ಸೋದರನ ಸಂಬಂಧಿ (ಹತ್ತಿರದ ಸಂಬಂಧಿ) ಅವನ ಯಾವುದೇ ಸಂಬಂಧಿಕರ ಆಸ್ತಿಯನ್ನು ವಿಮೋಚಿಸಲು (ಒಂದು ಬೆಲೆಯನ್ನು ಪಾವತಿಸಿ ಹಿಂದಿರುಗಿ ಕೊಂಡುಕೊಳ್ಳುವುದು) ಹಕ್ಕು ಜವಾಬ್ದಾರಿಯನ್ನು ಹೊಂದಿರುತ್ತಾರೆ. ''ರಕ್ತ ಸಂಬಂಧಿ-ವಿಮೋಚಕನ'' ಜವಾಬ್ದಾರಿಯು ಮೃತ ಸಂಬಂಧಿಯ ವಿಧವೆಯನ್ನು ಮದುವೆಯಾಗುವಂತಹ ಇತರ ಕ್ಷೇತ್ರಕ್ಕೂ ಸಹ ನೀಡಲ್ಪಟ್ಟಿತು. ಆದುದರಿಂದ ಯೋಬನು ಸರ್ವಶಕ್ತನಾದ ದೇವರನ್ನು ''ರಕ್ತ ಸಂಬಂಧಿ-ವಿಮೋಚಕ'' ಎಂಬುದಾಗಿ ಉಲ್ಲೇಖಿಸುತ್ತಾನೆ.

## ನಮ್ಮ ರಕ್ತ ಸಂಬಂಧಿ-ವಿಮೋಚಕ

ಯಾಜಕಕಾಂಡ 25:47-50

**ನಿಮ್ಮ ಸಹೋದರರಲ್ಲಿ ಒಬ್ಬನು ಬಡವನಾಗಿ ನಿಮ್ಮ ನಡುವೆ ಮನೆ ಮಾಡಿಕೊಂಡ ಧನವಂತನಾದ ಅನ್ಯ ದೇಶದವನಿಗಾಗಲಿ ಅವನಿಗೆ ಸೇರಿದವನಿಗಾಗಲಿ ತನ್ನನ್ನು ಮಾರಿಕೊಂಡಿದ್ದರೂ ಅವನಿಗೆ ಬಿಡುಗಡೆಯಾಗಬಹುದು. ಅವನ ಬಂಧುಗಳಲ್ಲಿ**

**ಯಾರಾದರೂ ಈಡುಕೊಟ್ಟು ಅವನನ್ನು ಬಿಡಿಸಬಹುದು. ಅವನ ದೊಡ್ಡಪ್ಪ ಚಿಕ್ಕಪ್ಪಂದಿರಾಗಲಿ ಇವರ ಮಕ್ಕಳಾಗಲಿ ಅಥವಾ ಸಮೀಪ ಬಂಧುಗಳಲ್ಲಿ ಯಾರೇಯಾಗಲಿ ಈಡುಕೊಟ್ಟು ಅವನನ್ನು ಬಿಡಿಸಬಹುದು. ಬೇಕಾದಷ್ಟು ಹಣವು ದೊರೆತರೆ ತನ್ನನ್ನು ತಾನೇ ಬಿಡಿಸಿಕೊಳ್ಳಬಹುದು. ಅವನು ತನ್ನನ್ನು ಮಾರಿಕೊಂಡ ವರುಷ ಮೊದಲುಗೊಂಡು ಮುಂದಣ ಜೂಬಿಲಿ ಸಂವತ್ಸರದ ತನಕ ದಣಿಯ ಸಂಗಡ ವರುಷಗಳ ಲೆಕ್ಕವನ್ನು ಮಾಡಿ ಈ ಲೆಕ್ಕದ ಮೇರೆಗೆ ಬಿಡುಗಡೆಯ ಕ್ರಯವನ್ನು ಕೊಡಬೇಕು ಕೂಲಿಯವನ ವಿಷಯದಲ್ಲಿ ಲೆಕ್ಕಿಸುವಂತೆ ಅವನ ವಿಷಯದಲ್ಲಿಯೂ ಲೆಕ್ಕಿಸಬೇಕು.**

ರಕ್ತಸಂಬಂಧಿ –ವಿಮೋಚಕನ ಪಾತ್ರವು ತದನಂತರದಲ್ಲಿ ಇಸ್ರಾಯೇಲ್ಯರಲ್ಲಿ ಒಂದು ಶಾಸನ ಅಥವಾ ನಿರ್ದೇಶವಾಗಿ ಕಂಡು ಬಂದಿತು. ಉದಾಹರಣೆಗೆ, ಯಾಜಕಕಾಂಡ 25:47–50ರಲ್ಲಿ ಕೊಡಲ್ಪಟ್ಟ ಸಲಹೆಗಳನ್ನು ನಾವು ವಿವರಿಸಿದ್ದೇವೆ. ವೈನ್ಸ್ ಕಂಪ್ಲೀಟ್ ಡಿಕ್ಷನರಿಯು ಈ ಕೆಳಕಂಡ ಟಿಪ್ಪಣಿಗಳನ್ನು ಒಳಗೊಂಡಿದೆ: ಒಬ್ಬ ಬಡ ಮನುಷ್ಯನು ತನ್ನನ್ನೇ ಜೊತೆ–ಇಸ್ರಾಯೇಲ್ಯನಿಗೆ ಮಾರಿಕೊಂಡರೆ (ಯಾಜಕಕಾಂಡ 25:39) ಅಥವಾ ಇಸ್ರಾಯೇಲ್ಯರಲ್ಲಿ ವಾಸಿಸುವ ಅನ್ಯ ದೇಶದವನಿಗಾಗಲಿ ಅವನಿಗೆ ಸೇರಿದವನಿಗಾಗಲಿ ತನ್ನನ್ನು ಮಾರಿಕೊಂಡಿದ್ದರೂ (ಯಾಜಕಕಾಂಡ 25:47). ''ಬಿಡುಗಡೆಗೊಳಿಸುವ ಜವಾಬ್ದಾರಿಯು ಹತ್ತಿರದ ಸಂಬಂಧಿ–ಸಹೋದರ, ಚಿಕ್ಕಪ್ಪ, ಚಿಕ್ಕಪ್ಪನ ಮಗ ಅಥವಾ ಅವನ ಕುಟುಂಬದಿಂದ ಒಬ್ಬ ರಕ್ತ ಸಂಬಂಧಿಯ ಜವಾಬ್ದಾರಿಯಾಗಿರುತ್ತದೆ (ಯಾಜಕಕಾಂಡ 25:25, 48, 49). ವ್ಯಕ್ತಿಯು (ಬಂಧುವು) ಹಣಕಾಸಿನ ಸಂಕಷ್ಟದಲ್ಲಿದ್ದವನನ್ನು ''ಬಿಡುಗಡೆಗೊಳಿಸಿದವನು'' ರೂತಳು 2:20ರಲ್ಲಿ ಎನ್.ಐ.ವಿ. ಸತ್ಯವೇದವು ಭಾಷಾಂತರಿಸಿದಂತೆ ಒಬ್ಬ ಸಂಬಂಧಿಕ–ವಿಮೋಚಕ ಎಂಬುದಾಗಿ ತಿಳಿದವನಾಗಿರುತ್ತಾನೆ. ಧರ್ಮೋಪದೇಶಕಾಂಡ 19:6ರಲ್ಲಿ ವಿಮೋಚಕನು, ಅವನ ಸಂಬಂಧಿಯ ಕೊಲೆಗಾರನನ್ನು ಮರಣದಂಡನೆ ಮಾಡುವಂತಹ ಕರ್ತವ್ಯ ಮಾಡುವವನೂ ''ರಕ್ತದ ಪ್ರತೀಕಾರತಿರಿಸುವವನು'' ಎಂಬುದಾಗಿ ಕರೆಯಲ್ಪಡುತ್ತಾನೆ.

ಯೋಬನು ಹೀಗೆ ಹೇಳಿದನು. ''ನನ್ನ ವಿಮೋಚಕನು (ಸಂಬಂಧಿಕ ವಿಮೋಚಕನು) ಜೀವಸ್ವರೂಪನೆಂದು ಬಲ್ಲೆನು.'' (ಯೋಬನು 19:25) ದೇವರು ಮನುಷ್ಯನನ್ನು ಸೃಷ್ಟಿಸಿದಾಗ, ಆತನ ಸ್ವಂತ ಕುಟುಂಬದ ಭಾಗವಾಗಿ ಅವನನ್ನು ಸೃಷ್ಟಿಸಿದನು (ಲೂಕ 3:38) ಮನುಷ್ಯನು ದೇವರಿಗೆ ಸಂಬಂಧಪಟ್ಟವನು. ಪಾಪದ ಮೂಲಕವಾಗಿ ಮನುಷ್ಯನು ತನ್ನನ್ನೇ ದುರಾತ್ಮನ ಬಂಧನಕ್ಕೆ ಮಾರಿಕೊಂಡನು. ನಮ್ಮ ಮಾನವೀಯತೆಯಲ್ಲಿ ಹಂಚಿಕೊಳ್ಳಲೂ ಮತ್ತು ಎಲ್ಲಾ ರೀತಿಯಲ್ಲಿ ಅವನ

ಸಹೋದರನಾಗಿರುವಂತೆ ಯೇಸುವು ಬಂದನು (ಇಬ್ರಿಯರಿಗೆ 2:14, 17). ಆತನು ನಮ್ಮ ಸಂಬಂಧಿಕ-ವಿಮೋಚಕನಾಗಿ ಬಂದನು. ನಮ್ಮ ಸ್ವಾತಂತ್ರ್ಯವನ್ನು ಖರೀದಿಸಲು-ವಿಮೋಚನೆಯ ಬೆಲೆ-ಬಂಧಿ ಬಿಡುಗಡೆಯ ಶುಲ್ಕಕ್ಕಾಗಿ-ಆತನು ಸ್ವಂತ ಜೀವವನ್ನು ಬೆಲೆಯಾಗಿ ನೀಡಿ ಶಿಲುಬೆಯ ಮೇಲೆ ಪ್ರಾಣಕೊಟ್ಟನು. ಅನೇಕ ಸಹೋದರರುಗಳ ಮಧ್ಯದಲ್ಲಿ ಹಿರಿಯನಾಗಿರಬೇಕೆಂದು ಸಮಾಧಿಯಿಂದ ಆತನು ಎದ್ದನು. (ರೋಮಾಪುರದವರಿಗೆ 8:29). ಇಂದು ಆತನು ಜೀವಿಸುತ್ತಿದ್ದಾನೆ. ನಮ್ಮ ಸಂಬಂಧಿ - ವಿಮೋಚಕನು ಜೀವಿಸುತ್ತಾನೆ!

## ಪ್ರತಿಫಲನ:

1. ಯೋಬನು ಮತ್ತು ಎಲೀಹುವು ದೇವರು ಅವರ ವಿಮೋಚಕನಾಗಿರುವಂತಹ ತಿಳುವಳಿಕೆಯನ್ನು ಪಡೆದುಕೊಳ್ಳಲೂ ಸಾಧ್ಯಕರವಾದಂತ ಕೆಲವು ಮಾರ್ಗಗಳಾವವು?
2. ಹೊಸ ಒಡಂಬಡಿಕೆಯಲ್ಲಿರು ''ಬಂಧಿ ಬಿಡುಗಡೆ ಶುಲ್ಕದ ಏಳು ಆಶೀರ್ವಾದಗಳು'' ಯೇಸು ಕ್ರಿಸ್ತನ ಮೂಲಕವಾಗಿ ನಮಗೆ ದೊರೆಯಲ್ಪಟ್ಟಂತಹವುಗಳನ್ನು ಗುರ್ತಿಸುವಂತ ವಾಕ್ಯ ಭಾಗಗಳನ್ನು ಗುರುತಿಸಿ.
3. ಕರ್ತನಾದ ಯೇಸುವು ನಮ್ಮ ''ರಕ್ತ ಸಂಬಂಧಿ ವಿಮೋಚಕನು'' ಎಂಬುದರ ಕುರಿತು ಚರ್ಚಿಸಿರಿ.

2

# ನಮ್ಮ ವಿಮೋಚನೆ

''ಲೋಕವೆಲ್ಲವು ಕೆಡುಕನ ವಶದಲ್ಲಿ ಬಿದ್ದಿದೆ ಎಂದೂ ನಮಗೆ ಗೊತ್ತಿದೆ'' (1 ಯೋಹಾನನು 5:19) ಎಂಬುದಾಗಿ ಸತ್ಯವೇದವು ನಮಗೆ ಹೇಳುತ್ತದೆ. ಸೈತಾನ ಮತ್ತು ಅವನ ದುರಾತ್ಮ ಸಮೂಹದೊಡನೆ-ಅಂಧಕಾರದ ಬಲಗಳ ಪ್ರಭಾವದ ಅಡಿಯಲ್ಲಿನ ಪರಿಸರದಲ್ಲಿ ನಾವು ಜೀವಿಸುತ್ತಿದ್ದೇವೆ. ಅಂಧಕಾರದ ಕಾರ್ಯಗಳು ಅದರ ವಿವಿಧ ರೂಪಗಳಾದ-ಪಾಪ, ಅನಾರೋಗ್ಯ, ನಾಶನ ಬಡತನ, ಭ್ರಷ್ಟಾಚಾರ ಇನ್ನೂ ಮುಂತಾದವುಗಳು ನಮ್ಮ ಸುತ್ತಲೂ ತೋರ್ಪಡಿಸಲ್ಪಟ್ಟಿವೆ. ನಾವು ಪ್ರಪಂಚದ ಯಾವ ಭಾಗದಲ್ಲಿ ಜೀವಿಸುತ್ತೇವೆ ಎಂಬುದನ್ನು ಪರಿಗಣಿಸದೇ – ನಾವು ಜೀವಿತದಲಿ ಹೊಂದಿರುವ ಯಾವುದೇ ವೃತ್ತಿ-ಮಂತ್ರಿ, ವೈದ್ಯರು, ವ್ಯಾಪಾರಸ್ಥ ವ್ಯಕ್ತಿ, ಗೃಹಿಣಿ, ಶಾಲಾ ಶಿಕ್ಷಕಿ, ವಿದ್ಯಾರ್ಥಿ ಮುಂತಾದ ವೃತ್ತಿಯಲ್ಲಿರಬಹುದು-ನಾವು ದಿನನಿತ್ಯ ದುರಾತ್ಮನ ಕಾರ್ಯಗಳನ್ನು ನಾವು ಮುಖಾಮುಖಿಗೊಳ್ಳುತ್ತೇವೆ. ಪ್ರಪಂಚದಲ್ಲಿನ ಘಟನೆಗಳು ಮತ್ತು ಜನರನ್ನು ದುರಾತ್ಮನ ಮತ್ತು ಅವನ ಸಮಂಜಸತೆಗಳು ಪ್ರಭಾವಿಸುತ್ತವೆ, ನಿಯಂತ್ರಿಸುತ್ತವೆ ಮತ್ತು ದೊರೆತನ ಮಾಡುತ್ತಿವೆ. ಇವೆಲ್ಲವುಗಳ ದೃಷ್ಟಿಯಲ್ಲಿ ಸತ್ಯವೇದವು ತುಂಬಾ ಬಲವಾದ ಸತ್ಯವನ್ನು ಪ್ರಸ್ತುತಪಡಿಸುತ್ತದೆ. ಯೇಸುವಿನಲ್ಲಿ ನಂಬಿಕೆಯಿಡುವ ಮೂಲಕವಾಗಿ ರಕ್ಷಿಸಲ್ಪಟ್ಟಂತಹ ಪ್ರತಿಯೊಬ್ಬ ವ್ಯಕ್ತಿಯು ದುರಾತ್ಮನ ಹತೋಟಿಯಿಂದ ಸ್ವತಂತ್ರಗೊಂಡಿದ್ದಾರೆ. ದುರಾತ್ಮನ ಕಾರ್ಯಗಳ ಮೇಲೆ ಪ್ರತಿಯೊಬ್ಬ ವಿಶ್ವಾಸಿಯು ವಿಜಯಕರವಾದ ಜೀವಿತ ಜೀವಿಸಲು ಸಾಧ್ಯಕರವಾಗುತ್ತದೆ. ವೈಯಕ್ತಿಕವಾಗಿ ''ಕ್ರಿಸ್ತನಲ್ಲಿರುವವರು'' ದುರಾತ್ಮನ ಅಧೀನತೆಯಲ್ಲಿ ಜೀವಿಸುವ ಅಗತ್ಯತೆಯಿಲ್ಲ!

ಇನ್ನೊಂದು ಕಡೆಯಲ್ಲಿ ದೊಡ್ಡದಾದ ಕ್ರಿಸ್ತನ ದೇಹವು ಈ ಸತ್ಯವನ್ನು ಕೇಳಿಲ್ಲ. ಪ್ರಪಂಚದಾದ್ಯಂತ ವಿವಿಧ ಸಭೆಗಳಲ್ಲಿನ ಅನೇಕ ವಿಶ್ವಾಸಿಗಳು ನಿಜಕ್ಕೂ ಜಯಿಸುವ ಜೀವನ ಜೀವಿಸುತ್ತಿದ್ದೇವೆ ಎಂಬುದಾಗಿ ಹೇಳುತ್ತಿಲ್ಲ. ದುರಾತ್ಮನ ಕಾರ್ಯಗಳು ಅಧೀನತೆಯಲ್ಲಿ ಅವರು ಇರುವವರಲ್ಲ ಎಂಬುದಾಗಿ ಅವರಿಗೆ ಉಪದೇಶಿಸಲ್ಪಟ್ಟಿಲ್ಲ.

ದುರಾತ್ಮನ ಕಾರ್ಯಗಳಿಂದ ಹೊರಬರಲೂ ಮತ್ತು ಎದುರಿಸುವುದರಿಂದ ಅವರು ಜೀವನ ಮಾಡುವುದರ ಕುರಿತು ಅವರಿಗೆ ಉಪದೇಶಿಸಲ್ಪಟ್ಟಿಲ್ಲ. ಇನ್ನೊಂದು ಕಡೆಯಲ್ಲಿ ಕ್ರಿಸ್ತನ ಅಂಗದಲ್ಲಿನ ಇನ್ನೊಂದು ದೊಡ್ಡ ಗುಂಪಿನ ಭಾಗವು ಇಂತಹ ಸತ್ಯಗಳನ್ನು ಕೇಳಿದ್ದಾರೆ-ಧ್ವನಿ ಸುರುಳಿಗಳನ್ನು ಕೇಳಿದ್ದಾರೆ ಪುಸ್ತಕಗಳನ್ನು ಓದಿದ್ದಾರೆ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ ಮತ್ತು ''ಪಕಟನೆಗಳನ್ನು ಪಡೆದುಕೊಂಡಿದ್ದಾರೆ'' – ಆದಾಗ್ಯೂ ಇದರ ದಿನನಿತ್ಯದ ಅನುಭವಗಳಿಗೆ ಇಂತಹ ಸತ್ಯಗಳನ್ನು ಸ್ಥಿರವಾಗಿ ಅನುವಾದಿಸಿಕೊಳ್ಳಲೂ ಸಾಧ್ಯವಾಗುತ್ತಿಲ್ಲ ಆತನ ಜನರು ಸತ್ಯಗಳನ್ನು ತಿಳಿಯಲು ದೇವರು ಅಪೇಕ್ಷಿಸುತ್ತಾನೆಂದು ನಾವು ನಂಬುತ್ತೇವೆ. ಆತನ ವಾಕ್ಯದಲ್ಲಿ ಪ್ರಸ್ತುತ ಪಡಿಸಲಾಗಿರುವ ಸತ್ಯಗಳ ಕುರಿತು ಕಲಿಸಲ್ಪಟ್ಟಬೇಕು ಮತ್ತು ಬೋಧಿಸಲ್ಪಡಬೇಕು. ನಮ್ಮ ಪ್ರತಿದಿನದ ಬದುಕಿನಲ್ಲಿ ದೇವರ ವಾಕ್ಯಭಾಗದಲ್ಲಿ ಪ್ರಸ್ತುತಪಡಿಸಲಾದ ಪ್ರತಿಯೊಂದು ಸತ್ಯದ ಪರಿಣಾಮವನ್ನು ಹೊಂದಿದೆ ಎಂಬುದಾಗಿ ನಾವು ನಂಬುತ್ತೇವೆ. ಗ್ರಂಥದಲ್ಲಿ ಪ್ರಸ್ತುತಪಡಿಸಲಾದ ಸತ್ಯಗಳು ಪ್ರಸಂಗಿಸಲ್ಪಡುವುದು ಮಾತ್ರವಲ್ಲದೇ ಕಲಿಸಬೇಕು ಮತ್ತು ಅವುಗಳ ಕುರಿತು ಬರೆಯಲ್ಪಡಬೇಕು. ನಮ್ಮ ದಿನನಿತ್ಯದ ಅನುಭವಗಳ ಭಾಗಗಳಾಗಿ ಕಂಡು ಬರುವಂತಹ ಅರ್ಥ ಕೊಡಬೇಕು.

ಈ ಒಂದು ಅಧ್ಯಾಯದಲ್ಲಿನ ನಮ್ಮ ಉದ್ದೇಶವು ದುರಾತ್ಮನ ನಿಯಂತ್ರಣದಿಂದ ನಮ್ಮ ಸ್ವತಂತ್ರತೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುವುದು ಮತ್ತು ನಮ್ಮ ಜೀವಿತದಲ್ಲಿ ಇವುಗಳನ್ನು ನಮ್ಮ ಅನುಭವಗಳಾಗಿ ಹೇಗೆ ಮಾಡುವುದು ಎಂಬುದನ್ನು ಕಲಿಯಲು ನಮಗೆ ಸಹಾಯ ಮಾಡುತ್ತದೆ.

## ವಿಮೋಚನೆಗೊಂಡಿರುವುದು ಎಂಬುದರ ಅರ್ಥವೇನು?

ಕೊಲೊಸ್ಸೆಯವರಿಗೆ 1:13, 14

**ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು.**

ಕೊಲೊಸ್ಸೆಯವರಿಗೆ 1:13 ವಚನವು ಅಂಧಕಾರದ ದೊರೆತನದಿಂದ ದೇವರು ನಮ್ಮನ್ನು ಬಿಡಿಸಿ ಆತನ ಮಗನಾದ ಯೇಸುವಿನ ರಾಜ್ಯದೊಳಗೆ, ಪರಿಪೂರ್ಣ ಸ್ವಾತಂತ್ರ್ಯ ಆನಂದಿಸುವಂತಹ ರಾಜ್ಯದೊಳಗೆ ಸೇರಿಸಿದ್ದಾನೆ. ನಾವು ಯೇಸುವಿನಲ್ಲಿ ನಂಬಿಕೆಯಿಂದ ರಕ್ಷಿಸಲ್ಪಟ್ಟ ಕ್ಷಣವೇ ದುರಾತ್ಮನ ಅಧಿಕಾರ ಮತ್ತು ಹತೋಟಿಯ

ಅಧೀನತೆಯಲಿರುವುದರಿಂದ ಹೊರ ಬರುತ್ತೇವೆ. ನಾವು ಕ್ರಿಸ್ತನಲ್ಲಿರುವುದರಿಂದ ಸೈತಾನನು ನಮ್ಮ ಜೀವಿತಗಳ ಮೇಲೆ ದೊರೆತನ ಮಾಡಲೂ ಅಧಿಕಾರವಿರುವುದಿಲ್ಲ. ನಮ್ಮ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. ''ಬೆಳಕಿನ ರಾಜ್ಯದೊಳಗೆ ದೇವ ಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವುದಕ್ಕೆ'' (ಕೊಲೊಸ್ಸೆಯವರಿಗೆ 1:12) ಎಂಬುದನ್ನು ನಾವು ಆನಂದಿಸಬಹುದಾದ ಒಂದು ಭಾಗವಾಗಿರುತ್ತದೆ. ಕ್ರಿಸ್ತನಲ್ಲಿರುವ ಒಬ್ಬ ವಿಶ್ವಾಸಿಯು ದುರಾತ್ಮ ಮತ್ತು ಅವನ ಕೆಟ್ಟ ಆತ್ಮಗಳ ಕೆಲಸದ ಬಂಧನದಲ್ಲಿ ಸಿಲುಕಿ ಹಾಕಿಕೊಳ್ಳಲೂ ಅಥವಾ ದಬ್ಬಾಳಿಕೆಗೆ ಒಳಗಾಗುವ ಅವಶ್ಯಕತೆಯಿಲ್ಲ ಕೊಲೊಸ್ಸೆಯವರಿಗೆ 1:14 ಕ್ರಿಸ್ತನಲ್ಲಿ ''ನಾವು ವಿಮೋಚನೆ ಹೊಂದಿದ್ದೇವೆ'' ಎಂಬ ಆಲೋಚನೆಯನ್ನು ಸೇರಿಸಿ ನೀಡಲ್ಪಟ್ಟಿದೆ. ''ವಿಮೋಚನೆ'' ಎಂಬ ಪದಕ್ಕೆ ಸಂಬಂಧಿಸಿದಂತೆ ಹೊಸ ಒಡಂಬಡಿಕೆಯಲ್ಲಿ ವೈವಿಧ್ಯತೆಗಳೊಡನೆ 2 ಮುಖ್ಯ ಗ್ರೀಕ್ ಪದಗಳು ಉಪಯೋಗಿಸಲ್ಪಟ್ಟಿವೆ. ''ಅಗೊರಿಡ್ಜೊ'' (Agoridzo) ಎಂಬ ಪದವು (1 ಕೊರಿಂಥದವರಿಗೆ 6:20; 7:23 ಪ್ರಕಟನೆ 5:9 ರಲ್ಲಿ ಉಪಯೋಗಿಸಿದೆ) ಮತ್ತು ಇದರಿಂದ ತೆಗೆದ ಪದವು ''ಎಕ್ಸಾಗೋರಿದ್ಝೋ'' (Exagoridzo) (ಗಲಾತ್ಯದವರಿಗೆ 3:13; 4:4,5ರಲ್ಲಿ ಉಪಯೋಗಿಸಿದೆ) ಈ ಪದಗಳು ಒಂದು ಗುಲಾಮರ ಮಾರುಕಟ್ಟೆಯನ್ನು ವರ್ಣಿಸುತ್ತದೆ, ಗುಲಾಮರ ಮಾರುಕಟ್ಟೆಯಿಂದ ಒಬ್ಬ ಗುಲಾಮನನ್ನು ಸ್ವತಂತ್ರಗೊಳಿಸುವ ಉದ್ದೇಶದಿಂದ ಖರೀದಿಸುವುದಕ್ಕಾಗಿ ಉಪಯೋಗಿಸಲ್ಪಟ್ಟಂತಹ ಪದಗಳಾಗಿವೆ. ''ಲುಟ್ರೋ'' (Lutro) ಎಂಬ ಪದವು (ತೀತನು 2:14 1 ಪೇತ್ರನು 1:18ರಲ್ಲಿ ಉಪಯೋಗಿಸಿದೆ). ಇದರ ಮೂಲ ಪದವು ''ಅಪೊಲುಟ್ರೋಸಿಸ್'' (Apolutrosis) ಆಗಿದು (ಎಫೆದವರಿಗೆ 1:7, ಕೊಲೊಸ್ಸೆಯವರಿಗೆ 1:14ರಲ್ಲಿ ಉಪಯೋಗಿಸಿದೆ) ಒಂದು ಬಂಧಿ ಬಿಡುಗಡೆಯ ಹಣದಿಂದ ಸೆರೆಯಲ್ಲಿರುವವನನ್ನು ಅವನ ಮೂಲ ರಾಜ್ಯಕ್ಕೆ ಸೆರೆಯಾಳುವು ಹಿಂತಿರುಗುವ/ಪುನಃ ಸ್ಥಾಪಿಸುವ ಕ್ರಮದ ವ್ಯವಸ್ಥೆಯಲ್ಲಿ ಉಲ್ಲೇಖಿಸಲಾಗಿದೆ.

ವಿಮೋಚನೆಯ ಕಲ್ಪನೆಯು ಈ ಕೆಳಗಿನ ಆಲೋಚನೆಗಳನ್ನು ಅದರೊಂದಿಗೆ ಒಯ್ಯುತ್ತದೆ.

- ನಾವೇ ಸ್ವತಂತ್ರಗೊಳ್ಳಲೂ ಸಾಧ್ಯಕರವಾಗದಂತಹ ಬಂಧನದಲ್ಲಿ ಒಮ್ಮೆ ನಾವಿದ್ದೇವು.
- ನಮ್ಮ ಸ್ವಾತಂತ್ರ್ಯವನ್ನು ಖರೀದಿಸಲು ಒಂದು ಬೆಲೆಯು ಪಾವತಿಸಲ್ಪಟ್ಟಿದೆ.

- ನಾನು ಈಗ ''ಕಾನೂನು ಬದ್ಧವಾಗಿ'' ಮುಕ್ತಗೊಳಿಸಲ್ಪಟ್ಟಿದ್ದೇವೆ ಮತ್ತು ನಮ್ಮ ಜೀವಿತದ ಮೇಲೆ ಯಾವುದೇ ಹಕ್ಕು ಹೊಂದಿಲ್ಲ.

ಮೊದಲು ದೇವರು ಸೃಷ್ಟಿಸಿದ ಮನುಷ್ಯರಾದ ಆದಾಮ ಮತ್ತು ಹವ್ವಳಿಗೆ ಭೂಮಿಯ ಮಾಲೀಕತ್ವವು ಕೊಡಲ್ಪಟ್ಟಿತ್ತು. ಅವರು ಭೂಮಿಯಲ್ಲಿ ತುಂಬಿಕೊಂಡು ಅದರ ಮೇಲಿರುವ ಎಲ್ಲದರ ಮೇಲೆ ಆಳ್ವಿಕೆ ಮಾಡಿರಿ ಎಂಬುದಾಗಿ ದೇವರು ಹೇಳಿದನು (ಆದಿಕಾಂಡ 1:26–28). ಆದಾಮ ಮತ್ತು ಹವ್ವಳ ಸಂತಾನದವರೆಲ್ಲರೂ ಅದನ್ನು ಆನಂದಿಸುವ ಮತ್ತು ಅದೇ ಅಧಿಕಾರವನ್ನು ಅಭ್ಯಾಸಿಸುವ ಉದ್ದೇಶವನ್ನು ದೇವರು ಹೊಂದಿದ್ದನೆಂದು ಇದರಲ್ಲಿ ಕಾಣಿಸುತ್ತದೆ. ಹೇಗಾದರೂ ಹಳೇಯ ಸರ್ಪ – ದುರಾತ್ಮನು, ಅವನ ಕುತಂತ್ರ ವಂಚನೆಯೊಡನೆ ಒಳಗೆ ಕಾಲಿಟ್ಟನು ಮತ್ತು ಅದಾಮ ಮತ್ತು ಹವ್ವಳಿಗೆ ಕೊಟ್ಟಂತಹ ಅಧಿಕಾರವನ್ನು ಆಕ್ರಮಿಸಿಕೊಂಡನು. ದುರಾತ್ಮನ ಸ್ವರಕ್ಕೆ ವಿಧೇಯರಾಗುವುದರಿಂದ ಅವರು ತಮ್ಮನ್ನು ಅವನ ಅಧೀನಕ್ಕೆ ಒಪ್ಪಿಸಿದರು. ಮನುಷ್ಯನಿಗೆ ಕೊಟ್ಟಂತಹ ಅಧಿಕಾರವು ಈಗ ಸೈತಾನನಿಗೆ ಹಸ್ತಾಂತರಗೊಂಡಿತು. ಇದರಿಂದಾಗಿ ಧರ್ಮಗ್ರಂಥದಲ್ಲಿನ ಅನೇಕ ಸ್ಥಳಗಳಲ್ಲಿ ಸೈತಾನನು ''ಈ ಯುಗದ ದೇವತೆ'' ಎಂಬುದಾಗಿ (2 ಕೊರಿಂಥದವರಿಗೆ 4:4) ಮತ್ತು ''ವಾಯುಮಂಡಲದ ಅಧಿಪತಿ'' (ಎಫೆಸದವರಿಗೆ 2:2) ಎಂಬುದಾಗಿ ಉಲ್ಲೇಖಿಸಲ್ಪಟ್ಟಿದೆ. ಸೈತಾನನನ್ನು ''ಇಹಲೋಕಾಧಿಪತಿ'' (ಯೋಹನ 12:31, 14:30) ಎಂಬುದಾಗಿ ಯೇಸುವು ಉಲ್ಲೇಖಿಸಿದ್ದಾನೆ. ಯೇಸುವು ಮರುಭೂಮಿಯಲ್ಲಿ ಶೋಧನೆಗೆ ಒಳಗಾದಾಗ ''ಬಳಿಕ ಸೈತಾನನು ಆತನನ್ನು ಮೇಲಕ್ಕೆ ಕರೆದುಕೊಂಡು ಹೋಗಿ ಕ್ಷಣ ಮಾತ್ರದಲ್ಲಿ ಲೋಕದ ಎಲ್ಲಾ ರಾಜ್ಯಗಳನ್ನು ಆತನಿಗೆ ತೋರಿಸಿ–ಇವೆಲ್ಲವುಗಳ ಅಧಿಕಾರವನ್ನೂ ಇವುಗಳ ವೈಭವವನ್ನೂ ನಿನಗೆ ಕೊಡುವೆನು. ಇದೆಲ್ಲಾ ನನಗೆ ಕೊಟ್ಟದೆ. ಇದನ್ನು ನನ್ನ ಮನಸ್ಸು ಬಂದವನಿಗೆ ಕೊಡುತ್ತೇನೆ ನೀನು ನನ್ನ ಮುಂದೆ ಅಡ್ಡ ಬಿದ್ದರೆ ಇದೆಲ್ಲಾ ನಿನ್ನದಾಗುವುದು ಎಂದು ಆತನಿಗೆ ಹೇಳಿದನು'' (ಲೂಕ 4:5–7) ಎಂಬುದಾಗಿ ಸತ್ಯವೇದವು ದಾಖಲಿಸಿದೆ. ಹೀಗೆ ಭೂಲೋಕದ ಮಾಲೀಕತ್ವದ ದುರಾತ್ಮನ ಹಕ್ಕನ್ನು ಯೇಸುವು ನಿರಾಕರಿಸಿದನು.

ದುರಾತ್ಮನು ಈ ಪ್ರಪಂಚದ ಮಾಲೀಕತ್ವವನ್ನು ಸಂಪಾದಿಸಿದನು ಮತ್ತು ಮಾನವ ಜನಾಂಗವನ್ನು ಅವನ ಆದಿಪತ್ಯಕ್ಕೆ ತೆಗೆದುಕೊಂಡಿದ್ದಾನೆ. ಅವನು ಜನರನ್ನು ದಬ್ಬಾಳಿಕೆ ಮಾಡಲೂ ಪ್ರಾರಂಭಿಸಿದರು ಮತ್ತು ಅವನ ದುಷ್ಟತನದೊಡನೆ ಭೂಮಿಯನ್ನು ತುಂಬಿಸಲು ಪ್ರಾರಂಭಿಸಿದನು. ಪಾಪ, ಅನಾರೋಗ್ಯ ಮತ್ತು ಪ್ರಪಂಚದಲೆಲ್ಲಾ ಪ್ರವಾಹದಂತೆ ಪ್ರಾರಂಭಗೊಂಡ ಇತರೆ ರೂಪದ ದುರಾತ್ಮನ ಕಾರ್ಯಗಳು ದೇವರ

ಮೂಲರಚನೆಯ ವಿನ್ಯಾಸದ ಭಾಗಗಳಾಗಿಲ್ಲ. ಇದು ವಿದ್ಯಾವಂತ ಮನಸ್ಸಿಗೆ ಅಸಂಬದ್ಧವೆಂದು ತೋರುತ್ತದೆಯಾದರೂ, ಅನೇಕ ಸಮಯಗಳಲ್ಲಿ ಅನಾರೋಗ್ಯವು ದುರಾತ್ಮನ ಒಂದು ಕಾರ್ಯವಾಗಿದೆ (ಎಲ್ಲಾ ಪ್ರಕರಣವೂ ಅಲ್ಲ-ಯಾಕೆಂದರೆ ದೈಹಿಕ ಕಾಯಿಲೆಗಳು ಇತರೆ ಕಾರಣಗಳಾದ ಅಪಘಾತಗಳು, ನಿರ್ಲಕ್ಷ/ನಿಂದನೆ ಮುಂತಾದವುಗಳಿಂದಲೂ ಸಂಭವಿಸಬಹುದು). ಯೇಸುವಿನ ಭೂಲೋಕದ ಸೇವೆಯ ಕುರಿತ ಉಲ್ಲೇಖನದೊಡನೆ ಆತನು ''ಸೈತಾನನಿಂದ ಬಾಧಿಸಲ್ಪಡುತ್ತಿರುವವರೆಲ್ಲರನ್ನು ಗುಣ ಮಾಡುತ್ತಾ ಸಂಚರಿಸಿದನು'' (ಅಪೊಸ್ತಲರ ಕೃತ್ಯಗಳು 10:38) ಎಂಬುದಾಗಿ ಸತ್ಯವೇದವು ಹೇಳುತ್ತದೆ. ನಡುಬೊಗ್ಗಿ ಹೋಗಿ ಸ್ವಲ್ಪವಾದರೂ ಮೈಯನ್ನು ಮೇಲಕ್ಕೆ ಎತ್ತಲಾರದ ಸ್ತ್ರೀಗೆ ಸ್ವಸ್ಥತೆಯ ಸೇವೆಯಲ್ಲಿ ಯೇಸುವು ''ಸೈತಾನನು ಕಟ್ಟಿಹಾಕಿದ್ದವಳೂ'' (ಲೂಕ 13:16) ಎಂಬುದಾಗಿ ಹೇಳುತ್ತಾನೆ.

ದುರಾತ್ಮನ ಅಧೀನತೆಯಿಂದ ಮತ್ತು ಅವನ ದಬ್ಬಾಳಿಕೆಯ ಕಾರ್ಯಗಳಿಂದ ಮನುಷ್ಯನನ್ನು ವಿಮೋಚನೆಗೊಳಿಸಲು ಯೇಸುವು ಬಂದನು. ''ಸೈತಾನನ ಕೆಲಸಗಳನ್ನು ಲಯ ಮಾಡುವುಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು'' (1 ಯೋಹಾನ 3:8ಬಿ) ಎಂಬುದಾಗಿ ಸತ್ಯವೇದ ಹೇಳುತ್ತದೆ. ಆತನ ವಿಮೋಚನೆಯು ಕೆಲಸದಲ್ಲಿ ಇದನ್ನು ಯೇಸುವು ನೆರವೇರಿಸಿದನು. ದುರಾತ್ಮನಿಗೆ ಬಂಧನದಲ್ಲಿರುವುದರಿಂದ ಹೊರಗಡೆ ಬರುವುದಕ್ಕೆ ಆತನು ಸಾಧ್ಯಕರವಾಗಿ ಮಾಡಿದನು. ಸೈತಾನನ ಅಧಿಕಾರ ಮತ್ತು ಹತೋಟಿಯಿಂದ ಆತನು ವಿಮುಕ್ತಗೊಳಿಸುತ್ತಾನೆ. ದುರಾತ್ಮನ ದಬ್ಬಾಳಿಕೆಯ ಕೆಲಸಗಳಿಗೆ ಒಳಪಟ್ಟಿರುವುದರಿಂದ ಆತನು ನಮ್ಮನ್ನು ಬಿಡುಗಡೆಗೊಳಿಸಿದ್ದಾನೆ.

ಪ್ರತಿಯೊಬ್ಬ ಕ್ರೈಸ್ತರು ವಿಮೋಚನೆ ಹೊಂದಿದವರಾಗಿದ್ದಾರೆ. ದುರಾತ್ಮನ ಬಂಧನದಲ್ಲಿರುವುದರಿಂದ ನಾವು ಹೊರಗೆ ತರಲ್ಪಟ್ಟಿದ್ದೇವೆ ಎಂಬುದು ಇದರ ಅರ್ಥವಾಗಿದೆ. ದುರಾತ್ಮನು ಒಬ್ಬ ವಿಶ್ವಾಸಿಯನ್ನು ಅವನ ದುಷ್ಟ ಕಾರ್ಯಗಳೊಡನೆ ಕಾನೂನು ಬದ್ಧವಾಗಿ ದಬ್ಬಾಳಿಕೆ ಮಾಡಲೂ ಸಾಧ್ಯವಿಲ್ಲ. ನಾವು ಒಮ್ಮೆ ಬಂಧನದಲ್ಲಿದ್ದೇವು ಆದರೆ ಈಗ ಸ್ವತಂತ್ರರಾಗಿದ್ದೇವೆ. ನಾವು ಒಮ್ಮೆ ಕತ್ತಲೆಯ ರಾಜ್ಯದಲ್ಲಿದ್ದೇವು ಆದರೆ ನಾವು ಈಗ ಬೆಳಕಿನ ರಾಜ್ಯದಲ್ಲಿದ್ದೇವೆ.

ನಮ್ಮ ವಿಮೋಚನೆಯು ವರ್ತಮಾನ ಕಾಲದ ನಿಜಸ್ಥಿತಿಯಾಗಿದೆ. ಭವಿಷ್ಯತ್ತಿನಲ್ಲಿ ಯಾವುದೋ ಒಂದು ಸಮಯದಲ್ಲಿ ಸೈತಾನನ ದೊರೆತನದಿಂದ ವಿಮೋಚನ ಹೊಂದುತ್ತೇವೆ ಎಂಬುದಾಗಿ ನಾವು ನಿರೀಕ್ಷಿಸಿಕೊಂಡಿದ್ದೇವೆ ಎಂಬುದಾಗಿ ಅಲ್ಲ. ಅದಕ್ಕಾಗಿ ಈಗಾಗಲೇ ಬೆಲೆಯು ಪಾವತಿಸಲ್ಪಟ್ಟಿದೆ. ನಾವು ಸ್ವತಂತ್ರಗೊಂಡಿದ್ದೇವೆ.

ಇಲ್ಲಿ ಮತ್ತು ಈಗ – ಈ ಜೀವನದ ಮೂಲಕ ನಾವು ಸಂಚರಿಸುತ್ತಿದ್ದೇವೆ – ಕ್ರಿಸ್ತನಲ್ಲಿ ನಾವು ಹೊಂದಿರುವ ವಿಮೋಚನೆಯ ಲಾಭಗಳನ್ನು ನಾವು ಆನಂದಿಸಬಹುದು. ವೈರಿಯು ನಮಗೆ ವಿರುದ್ಧವಾಗಿ ಅವನ ಕಾರ್ಯಗಳೊಡನೆ – ಪಾಪಮಯ ಬಂಧನಗಳು, ಅನಾರೋಗ್ಯಗಳು, ಕೊರತೆ, ವಿರೋಧಗಳು ಮುಂತಾದವುಗಳೊಡನೆ ಪ್ರಯತ್ನಿಸುವಾಗ – ನಮ್ಮ ವಿಮೋಚನೆಯನ್ನು ನಾವು ಸಾರಬಹುದು ಮತ್ತು ಕತ್ತಲೆಯ ಕಾರ್ಯಗಳನ್ನು ಎದುರಿಸಬಹುದು.

ವಿಮೋಚನೆಯು ಬರೀ ಒಂದು ದೈವಶಾಸ್ತ್ರದ ಆಸಕ್ತಿಕರ ವಿಷಯಾಂಶವಲ್ಲ. ಬದಲಿಗೆ, ಪ್ರತಿಯೊಬ್ಬ ದೇವರ ಮಗುವಿನಿಂದ ಅನುಭವಿಸಲ್ಪಡುವ ಒಂದು ಸತ್ಯವು ಇದಾಗಿದೆ. ಮನೆಯಲ್ಲಿ, ಕುಟುಂಬದಲ್ಲಿನ ಸಂಬಂಧಗಳಲ್ಲಿ, ಹಣಕಾಸಿನ ಕ್ಷೇತ್ರಗಳಲ್ಲಿ, ನಮ್ಮ ವೃತ್ತಿಗೆ ಸಂಬಂಧಿಸಿದ ಸಮಸ್ಯೆಗಳಲ್ಲಿ, ಅಪಾಯದಿಂದ ಸಂರಕ್ಷಣೆಯಲ್ಲಿ, ಮುಚ್ಚಿದ ಬಾಗಿಲುಗಳನ್ನು ತೆರೆಯುವುದರಲ್ಲಿ, ಕ್ರಿಸ್ತನ ಸ್ವರೂಪದ ನಡವಳಿಕೆಯನ್ನು ಬೆಳೆಸಿಕೊಳ್ಳುವುದರಲ್ಲಿ, ಇತರರ ಅಗತ್ಯತೆಗಳಿಗಾಗಿ ಸೇವೆ ಸಲ್ಲಿಸುವುದರಲ್ಲಿ, ದೇವರ ರಾಜ್ಯಕ್ಕಾಗಿ ಶೋಷಣೆಗಳನ್ನು ಮಾಡುವುದರಲ್ಲಿ ಇನ್ನೂ ಮುಂತಾದವುಗಳನ್ನು ನಾವು ಎದುರಿಸುವಾಗ ಕ್ರಿಸ್ತನಲ್ಲಿ ನಮ್ಮ ವಿಮೋಚನೆಯ ಅನುಕೂಲವನ್ನು ತೆಗೆದುಕೊಳ್ಳುವುದರಿಂದ ದುರಾತ್ಮನ ಕಾರ್ಯಗಳಿಂದ ಜಯಿಸಬಹುದು.

## ಹಳೆಯ ಒಡಂಬಡಿಕೆಯ ವಿಧ

ವಿಮೋಚನಕಾಂಡ 6:1–8

**ಅದಕ್ಕೆ ಯೆಹೋವನು ನಾನು ಫರೋಹನಿಗೆ ಮಾಡುವುದನ್ನು ನೀನು ಈಗ ನೋಡುವಿ. ಅವನು ನನ್ನ ಭುಜ ಬಲದಿಂದ ಅವರನ್ನು ಹೋಗಗೊಂಡಿಸುವನು ನನ್ನ ಭುಜ ಬಲದಿಂದ ಪೀಡಿತನಾಗಿ ಅವರನ್ನು ತನ್ನ ದೇಶದಿಂದ ಹೊರಡಿಸುವನು ಅಂದನು ಇದಲ್ಲದೆ ದೇವರು ಮೋಶೆಯ ಸಂಗಡ ಮಾತಾಡಿ ಇಂತೆಂದನು ನಾನು ಯೆಹೋವನು ಅಬ್ರಹಾಮ ಇಸಾಕ ಯಾಕೋಬರಿಗೆ ನಾನು ಸರ್ವಶಕ್ತನಾದ ದೇವರೆಂಬ ಹೆಸರುಳ್ಳವನಾಗಿ ಕಾಣಿಸಿಕೊಂಡೆನೇ ಹೊರತು ಯೆಹೋವನು ಎಂಬ ನನ್ನ ಹೆಸರಿನಿಂದ ಅವರಿಗೆ ಗೋಚರವಾಗಲಿಲ್ಲ ನಾನು ಅವರಿಗೆ ನೀವು ಪ್ರವಾಸವಾಗಿರುವ ಕಾನಾನ್ ದೇಶವನ್ನು ನಿಮಗೇ ಕೊಡುವೆನೆಂಬುದಾಗಿ ದೃಢವಾಗಿ ವಾಗ್ದಾನ ಮಾಡಿದೆನಷ್ಟೆ ಐಗುಪ್ತ್ಯರು ದಾಸರನ್ನಾಗಿ ಮಾಡಿಕೊಂಡಿರುವ ಇಸ್ರಾಯೇಲ್ಯರ ಗೋಳು ಈಗ ನನಗೆ ಕೇಳಿಸಿತು. ನಾನು ಮಾಡಿದ ವಾಗ್ದಾನವನ್ನು ನೆನಸಿಕೊಂಡೆನು ಆದದರಿಂದ ನೀನು ಇಸ್ರಾಯೇಲ್ಯರಿಗೆ (ನನ್ನ ಹೆಸರಿನಲ್ಲಿ) ಹೇಳಬೇಕಾದದ್ದೇನೆಂದರೆ ನಾನು ಯೆಹೋವನು ಐಗುಪ್ತ್ಯರು ನಿಮ್ಮಿಂದ ಮಾಡಿಸುವ**

**ಬಿಟ್ಟೀ ಕೆಲಸಗಳನ್ನು ನಾನು ತಪ್ಪಿಸಿ ಅವರಲ್ಲಿ ನಿಮಗಿರುವ ದಾಸತ್ವವನ್ನು ತೊಲಗಿಸಿ ನನ್ನ ಕೈ ಚಾಚಿ ಅವರಿಗೆ ಮಹಾ ಶಿಕ್ಷೆಗಳನ್ನು ವಿಧಿಸಿ ನಿಮ್ಮನ್ನು ರಕ್ಷಿಸುವೆನು. ನಾನು ನಿಮ್ಮನ್ನು ನನ್ನ ಪ್ರಜೆಯೆಂದು ಆರಿಸಿಕೊಂಡು ನಿಮಗೆ ದೇವರಾಗಿರುವೆನು. ಐಗುಪ್ತ್ಯರು ಮಾಡಿಸುವ ಬಿಟ್ಟೀ ಸೇವೆಯನ್ನು ನಾನು ನಿಮಗೆ ತಪ್ಪಿಸಿದಾಗ ಯೆಹೋವನು ಎಂಬ ನಾನೇ ನಿಮ್ಮ ದೇವರಾಗಿದ್ದೇನೆಂಬದು ನಿಮಗೆ ತಿಳಿದು ಬರುವದು. ಇದಲ್ಲದೆ ಅಬ್ರಹಾಮ ಇಸಾಕ ಯಾಕೋಬರಿಗೆ ಕೊಡುವೆನೆಂದು. ನಾನು ಪ್ರಮಾಣವಾಗಿ ಹೇಳಿದ ದೇಶಕ್ಕೆ ನಿಮ್ಮನ್ನು ಸೇರಿಸಿ ಅದನ್ನು ನಿಮಗೆ ಸ್ವದೇಶವನ್ನಾಗಿ ಕೊಡುವೆನು ಯೆಹೋವನೇ ನಾನು.**

ಯಾಜಕಕಾಂಡ 26:13

**ನೀವು ಐಗುಪ್ತ್ಯರಿಗೆ ದಾಸರಾಗಿರಬಾರದೆಂದು ನಿಮ್ಮನ್ನು ಅವರ ದೇಶದೊಳಗಿಂದ ಬರಮಾಡಿದ ನಿಮ್ಮ ದೇವರಾದ ಯೆಹೋವನು ನಾನೇ ನಿಮ್ಮನ್ನು ಕುಗ್ಗಿಸಿದ ನೊಗವನ್ನು ಮುರಿದು ನೀವು ನೆಟ್ಟಗೆ ನಿಂತು ನಡೆಯುವಂತೆ ಮಾಡಿದೆನಲ್ಲವೇ.**

ಹಳೇ ಒಡಂಬಡಿಕೆಯಲ್ಲಿ ಆತನ ಜನರಾದ ಇಸ್ರಾಯೇಲ್ಯರೊಂದಿಗೆ ದೇವರು ವ್ಯವಹರಿಸಿದ ರೀತಿಯು ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನ ಅಂಗಕ್ಕಾಗಿ ಸತ್ಯವನ್ನು ಒಯ್ಯುತ್ತದೆ. ಐಗುಪ್ತ್ಯದಲ್ಲಿ ದಾಸತ್ವದಿಂದ ದೇವರ ಜನರ ಬಿಡುಗಡೆಯು ಅಂಧಕಾರದ ಬಲಗಳ ದೊರೆತನದಿಂದ ನಮ್ಮ ವಿಮೋಚನೆಯ ಒಂದು ಮಾದರಿ ಆಗಿದೆ.

ಐಗುಪ್ತ್ಯರ ದಾಸತ್ವದಿಂದ ಅವರ ವಿಮೋಚನೆಯ ಸಂಬಂಧದಲ್ಲಿ ಕರ್ತನು ಮಾತಾನಾಡಿದ ಕೆಳಗಿನ ವ್ಯಾಖ್ಯಾನಗಳನ್ನು ಪರಿಗಣಿಸಿರಿ.

- ಐಗುಪ್ತ್ಯ ದೇಶದಿಂದ ನಾನು ನಿಮ್ಮನ್ನು ಹೊರಗಡೆ ತಂದೆನು.
- ನೀವು ಅವರ ದಾಸರುಗಳಾಗಿರಬಾರದು.
- ನಿಮ್ಮನ್ನು ಕುಗ್ಗಿಸಿದ ನೊಗವನ್ನು ನಾನು ಮುರಿದು ಹಾಕಿದ್ದೇನೆ.
- ನಾನು ನಿಮ್ಮನ್ನು ನನ್ನ ಜನರಾಗಿ ಆದುಕೊಂಡಿದ್ದೇನೆ ನಾನು ನಿಮ್ಮ ದೇವರಾಗಿರುವೆನು.
- ನೀವು ನೆಟ್ಟಗೆ ನಡೆಯುವಂತೆ ನಾನು ಮಾಡಿದ್ದೇನೆ.
- ದೇವರು ನಮ್ಮನ್ನು ''ಐಗುಪ್ತ್ಯದಿಂದ'' ಹೊರ ತಂದಿದ್ದಾನೆ ಅದು ಸೈತಾನ ಮತ್ತು ಅವನ ದುರಾತ್ಮಗಳ ದೊರೆತನ ಮತ್ತು ಹತೋಟಿಯಿಂದ ನಮ್ಮನ್ನು ಆತನು ಹೊರ ತಂದಿದ್ದಾನೆ.

- ದುರಾತ್ಮನ ಅಧೀನತೆಯಲ್ಲಿ ಇನ್ನು ಮುಂದೆ ನಾವು ಇರಬೇಕಾಗಿಲ್ಲ.
- ನೊಗಗಳು (ಬಂಧನಗಳು) ಒಮ್ಮೆ ನಮ್ಮ ಮೇಲೆ ದುರಾತ್ಮನು ಹೊಂದಿದಂತಹವುಗಳು ನಾಶವಾಗಿವೆ-ದೇವರು ಅವುಗಳನ್ನು ಮುರಿದು ಹಾಕಿದ್ದಾನೆ!
- ದೇವರು ಆತನ ಸ್ವಂತ ಜನರಾಗಿ ನಮ್ಮನ್ನು ತೆಗೆದುಕೊಂಡಿದ್ದಾನೆ ಆತನ ಪ್ರಿಯನಾದ ಸ್ವಂತ ಮಗನ ರಾಜ್ಯದಲ್ಲಿ ನಾವು ಇದ್ದೇವೆ. ಆತನು ನಮ್ಮ ದೇವರು.
- ನಾವು ಈಗ ತಲೆಯನ್ನು ಎತ್ತರಕ್ಕೆ ನೆಟ್ಟಗೆ ಚಾಚಿದವರಾಗಿ ನಡೆಯುತ್ತೇವೆ. ನಮ್ಮ ವಿಮೋಚನೆಯ ಲಾಭಗಳಲ್ಲಿ ನಾವು ನಡೆಯುತ್ತೇವೆಂಬುದು ಇದರ ಅರ್ಥವಾಗಿದೆ. ಒಮ್ಮೆ ನಮ್ಮ ಮೇಲೆ ಪ್ರಭುತ್ವ ನಡೆಸಿದ ದುರಾತ್ಮನ ಮೇಲೆ ಅಧಿಕಾರವನ್ನು ನಾವು ಪ್ರಯೋಗಿಸಬಹುದು.

## ನಮ್ಮ ವಿಮೋಚನೆಗಾಗಿ ಬೆಲೆ

ಎಫೆಸದವರಿಗೆ 1:7

**ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂಡ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ.**

1 ಪೇತ್ರನು 1:18,19

**ನಿಮ್ಮ ಹಿರಿಯರು ಕಲಿಸಿಕೊಟ್ಟ ವ್ಯರ್ಥವಾದ ನಡವಳಿಕೆಯಿಂದ ನಿಮಗೆ ಬಿಡುಗಡೆಯಾದದ್ದು ಬೆಳ್ಳಿ ಬಂಗಾರ ಮೊದಲಾದ ನಶಿಸಿ ಹೋಗುವ ವಸ್ತುಗಳಿಂದಲ್ಲ ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ಎಂದು ಬಲ್ಲಿರಲ್ಲವೇ.**

1 ಕೊರಿಂಥದವರಿಗೆ 6:20ಅ, 7:23

**ಆ ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು.**

ಕ್ರಿಸ್ತನ ರಕ್ತವು ನಮ್ಮ ವಿಮೋಚನೆಯ ಖರೀದಿಗೆ ಪಾವತಿಸಿದ್ದಂತಹ ಬೆಲೆಯಾಗಿದೆ. ರಕ್ತವು ಯಾವುದೇ ಜೀವಿಯ ಜೀವವಾಗಿದೆ (ಯಾಜಕಕಾಂಡ 17:11) ಆದುದರಿಂದ ಯೇಸುಕ್ರಿಸ್ತನ ರಕ್ತವು ದೃಢಪಡಿಸುವ ಸಂಗತಿಯೆಂದರೆ ನಮ್ಮ ವಿಮೋಚನೆಯನ್ನು ಕೊಳ್ಳಲೂ ಕ್ರಿಸ್ತನು ತನ್ನ ಸ್ವಂತ ಜೀವವನ್ನು ಕೊಟ್ಟಿದ್ದಾನೆಂಬುದಾಗಿದೆ.

ನಮ್ಮ ಸ್ವಂತ ಸ್ವಾತಂತ್ರ್ಯವನ್ನು ನಾವು ಕೊಳ್ಳಲಾಗಲಿಲ್ಲ. ಯಾಕೆಂದರೆ ನಮ್ಮ ಜೀವಿತದಲ್ಲಿನ ಪಾಪವು ಸೈತಾನನಿಗೆ ಒಂದು ಕಾನೂನು ಬದ್ಧ ಹಕ್ಕನ್ನು ನಮ್ಮ ಮೇಲೆ ದೊರೆತನ ಮಾಡಲೂ ನೀಡಿರುವಂತದ್ದು ವಾಸ್ತವ ಸಂಗತಿಯಾಗಿದೆ. ಪಾಪವನ್ನು ಮಾಡದೇ ಇರುವ ಯಾರಾದರೊಬ್ಬರು ಮತ್ತು ಆದ್ದರಿಂದ ಸೈತಾನನು ಯಾವುದೇ ಕಾನೂನುಬದ್ಧ ಹಕ್ಕನ್ನು ಹೊಂದಿಲ್ಲದವರೂ ನಮ್ಮ ಸ್ವಾತಂತ್ರ್ಯವನ್ನು ಕೊಂಡುಕೊಳ್ಳಲೂ ನೀಡಬೇಕಾಯಿತು. ಅದು ಕ್ರಿಸ್ತನೇ, ಕಳಂಕವಿಲ್ಲದವನು, ಪಾಪವಿಲ್ಲದವನು ಮತ್ತು ತಪ್ಪಿಲ್ಲದವನು, ಮಾತ್ರವೇ ನಮ್ಮ ವಿಮೋಚಕನಾಗಿದ್ದಾನೆ.

ಪಾಪವು ಅದರ ''ಸಂಬಳಗಳು''=ಇದರ ಪರಿಣಾಮುಗಳನ್ನು ಅಥವಾ ಪ್ರಾಯಶ್ಚಿತ್ತಗಳನ್ನು ಹೊಂದಿದೆ. ನಮ್ಮ ಪಾಪಗಳು ಪಾವತಿಸಲಾಗಿಲ್ಲದವುಗಳಾಗಿ ಉಳಿದಿರುವಾಗ, ಸೈತಾನನು ಕಾನೂನುಬದ್ಧವಾಗಿ ಅವನ ಆಧಿಪತ್ಯವನ್ನು ಮಾನವ ಜನಾಂಗದ ಮೇಲೆ ಜಾರಿಗೊಳಿಸುತ್ತಾನೆ. ಪಾಪವನ್ನು ರಕ್ತದಿಂದ ಪ್ರಾಯಶ್ಚಿತ್ತ (ಪಾವತಿ) ಮಾಡಬೇಕೆಂದು ದೇವರು ನಿರ್ಧರಿಸಿದ್ದನು (ಯಾಜಕಕಾಂಡ 17:11) ಆದುದರಿಂದ, ನಮ್ಮ ಪಾಪಗಳಿಗಾಗಿ ಪ್ರಾಯಶ್ಚಿತವಾಗಿ (ಪಾವತಿ) ಆತನ ರಕ್ತವನ್ನು ಸುರಿಸಿದಾಗ ಅದೇ ರಕ್ತವು ನಮ್ಮ ವಿಮೋಚನೆಯನ್ನು ಖರೀದಿಸಿದ ಬೆಲೆಯಾಗಿ ಕಂಡು ಬಂದಿತು. ಪಾಪಕ್ಕೆ ಬೆಲೆಯು ಪಾವತಿಸಿದಾಗ, ಸೈತಾನನ ಕಾನೂನುಬದ್ಧ ಹಕ್ಕು ರದ್ದುಗೊಂಡಿತು. ಕಲ್ವಾರಿ ಶಿಲುಬೆಯ ಮೇಲೆ ಕ್ರಿಸ್ತನ ಪ್ರಾಯಶ್ಚಿತ್ತದ ಕಾರ್ಯವನ್ನು ನಂಬಿಕೆಯಿಂದ ಅಂಗೀಕರಿಸುವವರೆಲ್ಲರ ಪಾಪಗಳ ಕ್ಷಮಾಪಣೆಯನ್ನು ಪಡೆಯುತ್ತಾರೆ. ನಾವು ಕ್ಷಮಿಸಲ್ಪಟ್ಟ ಕ್ಷಣವೇ, ಅದೇ ತ್ವರಿತವಾಗಿ ಕ್ರಿಸ್ತನಲ್ಲಿ ನಮ್ಮ ವಿಮೋಚನೆಯು ಪರಿಣಾಮಕಾರಿಯಾಗುತ್ತದೆ. ಅದೇ ರಕ್ತವು ನಮ್ಮನ್ನು ತೊಳೆಯುತ್ತದೆ, ಶುದ್ಧೀಕರಿಸುತ್ತದೆ. ಪಾಪಗಳಿಗೆ ಕ್ಷಮಾಪಣೆಯನ್ನು ಒದಗಿಸುತ್ತದೆ ಹಾಗೆಯೇ ಸೈತಾನನ ಹಿಡಿತದಿಂದ ವಿಮೋಚನೆಯನ್ನು ತರುತ್ತದೆ. ಆದುದರಿಂದ ''ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು'' (ಎಫೆಸದವರಿಗೆ 1:7)

ಕ್ರಿಸ್ತನು ಸುರಿಸಿದ ರಕ್ತವು ನಮ್ಮ ಸ್ವಾತಂತ್ರ್ಯವನ್ನು ತರಲು ಬೆಲೆಯಾಗಿದೆ. ಆದ್ದರಿಂದ ಸೈತಾನ ಮತ್ತು ಅವನ ದುರಾತ್ಮಗಳು ಕ್ರಿಸ್ತನ ರಕ್ತದ ಕುರಿತು ಸತ್ಯವನ್ನು ಸಾರುವುದಕ್ಕೆ ಭಯಪಡುತ್ತವೆ. ಕ್ರಿಸ್ತನ ರಕ್ತವು ನಮ್ಮ ಪರಿಪೂರ್ಣ ವಿಮೋಚನೆಗೆ ಬೆಲೆಯು ಪಾವತಿಸಲ್ಪಟ್ಟಿದೆ ಎಂಬುದನ್ನು ಅಂಧಕಾರದ ಬಲಗಳಿಗೆ ನೆನಪಿಸುತ್ತದೆ. ನಾವು ವಿಮೋಚನೆಗೊಂಡಿದ್ದೇವೆ.

## ಇಂದಿನಿಂದ ಮತ್ತು ನಿತ್ಯತ್ವತೆಗೆ

ಇಬ್ರಿಯರಿಗೆ 9:11,12

**ಆದರೆ ಕ್ರಿಸ್ತನು ಈಗ ದೊರೆತಿರುವ ಮೇಲುಗಳನ್ನು ಕುರಿತು ಮಹಾಯಾಜಕನಾಗಿ ಒಂದು ಕೈಯಿಂದ ಕಟ್ಟಲ್ಪಡದಂಥ ಅಂದರೆ ಈ ಸೃಷ್ಟಿಗೆ ಸಂಬಂಧ ಪಡದಂತ ಘನವಾಗಿಯೂ ಉತ್ಕೃಷ್ಟವಾಗಿಯೂ ಇರುವ ಗುಡಾರದಲ್ಲಿ ಸೇವೆಯನ್ನು ಮಾಡುವವನಾಗಿ ಹೋತಗಳ ಮತ್ತು ಹೋರಿಕರಗಳ ರಕ್ತವನ್ನು ತೆಗೆದುಕೊಂಡು ನಮಗೋಸ್ಕರ ನಿತ್ಯ ವಿಮೋಚನೆಯನ್ನು ಸಂಪಾದಿಸಿಕೊಂಡವನಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದನು.**

ಕ್ರಿಸ್ತನು ನಮಗಾಗಿ ಗಳಿಸಿದ ವಿಮೋಚನೆಯು ನಿತ್ಯತ್ವದಾಗಿದೆ. ಎಲ್ಲಾ ಸಮಯಕ್ಕೂ ಸಾಕಾಗುವ ಮತ್ತು ಸಂಪೂರ್ಣವಾದ ಒಂದು ಬೆಲೆಯನ್ನು ಆತನು ಪಾವತಿಸಿದ್ದಾನೆ. ನಾವು ಆನಂದಿಸುವಂತಹ ವಿಮೋಚನೆಯು ನಿತ್ಯವಾದುದಾಗಿದೆ. ನಾವು ರಕ್ಷಣೆ ಹೊಂದಿದ ಕ್ಷಣದಿಂದ ಮತ್ತು ನಿತ್ಯತ್ವದ ಮೂಲಕವಾಗಿ ಕ್ರಿಸ್ತನಲ್ಲಿ ನಾವು ಹೊಂದಿರುವ ವಿಮೋಚನೆಯ ಲಾಭಗಳನ್ನು ನಾವು ಆನಂದಿಸಬಹುದು. ಇದಕ್ಕೆ ಸೇರಿಸಲೂ ನಾವು ಏನು ಮಾಡಲಾಗುವುದಿಲ್ಲ ನಾವುಗಳು ಅಜ್ಞಾನದಿಂದ ಅಥವಾ ಚಿತ್ತಪೂರ್ವಕವಾಗಿ ದುರಾತ್ಮನಿಗೆ ಒಪ್ಪಿಸಿದ ಹೊರತು, ದುರಾತ್ಮನು ಅವನ ಸೆರೆಯಾಳುಗಳು ನಮ್ಮನ್ನು ಕಾನೂನು ಬದ್ಧವಾಗಿ ಹಿಡಿಯಲು ಸಾಧ್ಯವಿಲ್ಲ.

ನಮ್ಮ ವಿಮೋಚನೆಯನ್ನು ಸಂರಕ್ಷಿಸಿದ ರಕ್ತವು ಪರಲೋಕದಲ್ಲಿನ ಅತೀ ಪವಿತ್ರ ಸ್ಥಳದಲ್ಲಿ ಪ್ರಸ್ತುತಪಡಿಸಲಾಗಿದೆ ಬೆಲೆಯು ಇನ್ನೂ ಸಹ ದಾಖಲೆಗಳಲ್ಲದೆ. ಪಾವತಿಸಲ್ಪಟ್ಟಂತಹ ವಿಮೋಚನೆಯ ಬೆಲೆಗೆ ಶಾಶ್ವತವಾದ ಸ್ಮರಣೆಯಿದೆ. ಒದಗಿಸಿದಂತಹ ವಿಮೋಚನೆಯ ನಿತ್ಯತ್ವದ ದಾಖಲೆಯಿದೆ. ಆ ದಾಖಲೆಯನ್ನು ಬದಲಾಯಿಸಲೂ ದುರಾತ್ಮ ಮಾಡುವಂತದ್ದು ಯಾವುದು ಇಲ್ಲ.

ನಮ್ಮನ್ನು ವಿಮೋಚನೆಗೊಳಿಸಿದಾತನು, ಸ್ವತಃ ತಾನೇ ನಮ್ಮ ಮಹಾಯಾಜಕನಾಗಿ ತಂದೆಯ ಪ್ರಸನ್ನತೆಯಲ್ಲಿದ್ದಾನೆ. ''ಜೀವಿಸುವವನೂ ಆಗಿದ್ದೇನೆ. ಸತ್ತವನಾದೆನು ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ'' (ಪ್ರಕಟನೆ 1:18) ರಲ್ಲಿ ಆತನು ಹೇಳುತ್ತಾನೆ. ನಮ್ಮ ವಿಮೋಚನೆಯು ಹೆಚ್ಚು ನೈಜ, ಹೆಚ್ಚು ಸುರಕ್ಷಿತ ಅಥವಾ ಹೆಚ್ಚು ಶಾಶ್ವತವಾಗಲು ಸಾಧ್ಯವಿಲ್ಲ. ಬದಲು, ''ಆತನಲ್ಲಿ, ನಾವು ವಿಮೋಚನೆ ಹೊಂದಿದ್ದೇವೆ.''

## ''ಕರ್ತನ ವಿಮೋಚನೆಯುಳ್ಳವರಾಗಿ'' ಜೀವಿಸುವುದು

ಜಯಿಸಿ ಮತ್ತು ಸೋಲಿಸಲ್ಪಟ್ಟರೂ, ದುರಾತ್ಮನು ಭೂಮಿಯ ಮೇಲೆ ತನ್ನ ದುಷ್ಟ ಯೋಜನೆಗಳನ್ನು ಸ್ವಲ್ಪ ಸಮಯದವರೆಗೂ ಮುಂದುವರೆಯಲು ಅನುಮತಿಸಿದಾಗಲೂ, ಇದು ಶಾಶ್ವತವಾದುದಲ್ಲ ಎಂಬುದು ನಮಗೆ ತಿಳಿದಿದೆ. ಆದಾಗ್ಯೂ ನಾವು ಭೂಮಿಯ ಮೇಲಿರುವಾಗ ವೈರಿಯು ತನ್ನ ದುಷ್ಟಕೂಟದವರು ದೈನಂದಿನ ನಮ್ಮನ್ನು ಮರಳಿ ಪಡೆಯಲು ಪ್ರಯತ್ನಿಸುವುದನ್ನು ನಾವು ಎದುರಿಸುತ್ತೇವೆ. ನಮ್ಮ ನೈತಿಕ ನಡವಳಿಕೆಯಾದ ನಮ್ಮ ಅಸ್ತಿತ್ವ ಅಥವಾ ನಮ್ಮ ಮಾನಸಿಕ/ಭಾವಾನಾತ್ಮಕ ಕ್ಷೇತ್ರ, ಹಣಕಾಸಿನ, ದೈಹಿಕವಾಗಿ (ದೇಹ), ಸಂಬಂಧಾತ್ಮಕ (ಮದುವೆ, ಕುಟುಂಬ ಮತ್ತು ಸಂಬಂಧಗಳು) ಸೇವೆ ಅಥವಾ ಆತ್ಮಿಕತೆ (ಕರ್ತನೊಂದಿಗಿನ ನಮ್ಮ ನಡೆ) ಇವುಗಳಲ್ಲಿ ದುರಾತ್ಮನು ಪ್ರವೇಶ ಪಡೆಯಲು ಪಟ್ಟು ಬಿಡದೆ ಪ್ರಯತ್ನಿಸುತ್ತಾನೆ ಮತ್ತು ನಮ್ಮ ಜೀವಿತಗಳಲ್ಲಿ ಜಾಗವನ್ನು ಸೆರೆಹಿಡಿಯಲು ಯತ್ನಿಸುತ್ತಾನೆ. ಅಂತಹ ಪ್ರಯತ್ನಗಳನ್ನು ಯಶಸ್ವಿಯಾಗಿ ಎದುರಿಸಿ ಸೋಲಿಸುವಂತದ್ದು ಮತ್ತು ಕ್ರಿಸ್ತನು ನಮಗೆ ಒದಗಿಸಿರುವ ವಿಮೋಚನೆಯ ಪ್ರಯೋಜಗಳಲ್ಲಿ ನಡೆಯುವುದು ನಾವು ಎದುರಿಸುತ್ತಿರುವಂತಹ ಸವಾಲು ಆಗಿದೆ.

ಕ್ರಿಸ್ತನಲ್ಲಿ ನಾವು ಹೊಂದಿರುವ ವಿಮೋಚನೆಯು ಪ್ರಯೋಜನಗಳನ್ನು ತರುತ್ತದೆ, ಕೆಲವುಗಳನ್ನು ನಮ್ಮ ಜೀವಿತದಲ್ಲಿ ಅನುಭವಿಸಬಹುದು ಮತ್ತು ಆನಂದಿಸಬಹುದು ಮತ್ತು ನಾವು ಆತನ ಸ್ವಾರೂಪ್ಯಕ್ಕೆ ಬದಲಾದಾಗ ನಾವು ಆನಂದಿಸುತ್ತೇವೆ. ನಾವು ಭೂಮಿಯ ಮೇಲಿರುವಾಗ ತಾನೇ ಕ್ರಯಕ್ಕೆ ಕೊಳ್ಳಲ್ಪಟ್ಟು ಮತ್ತು ಕರ್ತನು ವಿಮೋಚನೆಗೊಳಿಸಿದಂತಹ ಜನರಾಗಿ ನಾವು ಜೀವಿಸಲು ಏನನ್ನು ಮಾಡಬೇಕು? ಕ್ರಿಸ್ತನಲ್ಲಿರುವ ವಿಮೋಚನೆಯ ಸಿರಿವಂತ ಆಶೀರ್ವಾದಗಳೊಡನೆ ನಮ್ಮ ಜೀವಿತಗಳು ತುಂಬಲ್ಪಡುವುದು ಹೇಗೆ? ಪ್ರಪಂಚದಾದ್ಯಂತ ಹರಡಿರುವ ವೈಯಕ್ತಿಕವಾದ ಅಥವಾ ಸಮುದಾಯಗಳ ವಿಶ್ವಾಸಿಗಳಾಗಿ ಕರ್ತನಿಂದ ವಿಮೋಚನೆ ಹೊಂದಿದವರಂತೆ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ನಾವು ಜೀವಿಸಬೇಕು.

## ಪ್ರತಿಫಲನ

1. ವಿಮೋಚನೆಯು ವರ್ತಮಾನ-ಕಾಲದ ನಿಜಸ್ಥಿತಿಯ ಅಥವಾ ನಾವು ನಿರೀಕ್ಷಿಸುತ್ತೀರುವ ವಿಷಯವೇ?
2. ನಮ್ಮ ವಿಮೋಚನೆಗಾಗಿ ಪಾವತಿಸಲಾದ ಬೆಲೆಯು ರಕ್ತವಾಗಿದೆ ಎಂಬ ವಾಸ್ತವ ಸಂಗತಿಯ ಬೆಳಕಿನಲ್ಲಿ ಯೇಸುವಿನ ರಕ್ತದ ಬಲವನ್ನು ಕುರಿತು ಚರ್ಚಿಸಿರಿ.

3. ಒಬ್ಬ ವಿಶ್ವಾಸಿಯ ಮೇಲೆ ದುರಾತ್ಮನು ಎಷ್ಟು ಅಧಿಕಾರ ಅಥವಾ ಹಕ್ಕು ಹೊಂದಿದ್ದಾನೆ? ಒಬ್ಬ ವಿಶ್ವಾಸಿಯ ಜೀವಿತದ ಎಲ್ಲಾ ಕ್ಷೇತ್ರಗಳು ಸೈತಾನನ ಹತೋಟಿಯಿಂದ ವಿಮೋಚನೆಗೊಂಡಿದೆಯಾ?

3

# ನಮ್ಮ ವಿಮೋಚನೆಯ ಪ್ರಯೋಜನಗಳು

ನಾವು ವಿಮೋಚನೆಯ ವಿಷಯದ ಮೇಲೆ ನಮ್ಮ ಅಧ್ಯಯನ ಮುಂದುವರೆಸುವಾಗ, ಧರ್ಮಶಾಸ್ತ್ರದಲ್ಲಿನ ವಿವಿಧ ಭಾಗಗಳಿಂದ ಹಲವಾರು ವಿಭಿನ್ನ ಆತ್ಮಿಕ ಸತ್ಯಗಳನ್ನು ಸಂಕ್ಷಿಪ್ತವಾಗಿ ಪ್ರಸ್ತುತಪಡಿಸಲಾಗಿದೆ. ನಿಮ್ಮ ಏಕಾಂತ ಸ್ಥಳದಲ್ಲಿ ಅವುಗಳನ್ನು ಧ್ಯಾನಿಸಲು ಸಮಯ ತೆಗೆದುಕೊಳ್ಳಿರಿ, ಇಂತಹ ಪ್ರತಿಯೊಂದು ಸತ್ಯವೇದದ ಸತ್ಯಗಳು ನಿಮ್ಮ ಜೀವಿತಕ್ಕೆ ಹೇಗೆ ಅನ್ವಯಿಸುತ್ತವೆಂಬುದನ್ನು ತೋರಿಸಲು ಪವಿತ್ರಾತ್ಮನಿಗೆ ಅವಕಾಶ ನೀಡಿರಿ.

## ಸೆರೆಯಾಳುಗಳಿಗೆ ಸ್ವಾತಂತ್ರ್ಯ

ಲೂಕ 4:18, 14

**ಕರ್ತನ ಆತ್ಮವು ನನ್ನ ಮೇಲೆ ಅದೆ ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವುದಕ್ಕೆ ಅಭಿಷೇಕಿಸಿದನು. ಸೆರೆಯವರಿಗೆ ಬಿಡುಗಡೆಯಾಗುವುದನ್ನು ಮತ್ತು ಕುರುಡರಿಗೆ ಕಣ್ಣು ಬರುವುದನ್ನು ಪ್ರಸಿದ್ಧಿ ಪಡಿಸುವುದಕ್ಕೂ ಮನಮುರಿದವರನ್ನು ಬಿಡಿಸಿ. ಕಳುಹಿಸುವುದಕ್ಕೂ ಕರ್ತನು ನೇಮಿಸಿರುವ ಶುಭ ವರ್ತಮಾನವನ್ನು ಪ್ರಚುರ ಪಡಿಸುವುದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ ಎಂಬುದು.**

ಯಾಜಕಕಾಂಡ 25:10,13

**ನೀವು ಐವತ್ತನೆ ವರುಷವನ್ನು ದೇವರಿಗೆ ಮೀಸಲಾದ ವರುಷವೆಂದು ಭಾವಿಸಿ ಅದರಲ್ಲಿ ದೇಶದ ನಿವಾಸಿಗಳೆಲ್ಲರಿಗೂ ಬಿಡುಗಡೆಯಾಯಿತೆಂಬುದಾಗಿ ಸಾರಬೇಕು ಅದು ಜೂಬಿಲಿ ಸಂವತ್ಸರವಾದದರಿಂದ ನೀವೆಲ್ಲರೂ ನಿಮ್ಮ ನಿಮ್ಮ ಸ್ವಂತ ಭೂಮಿಗಳಿಗೂ ಸ್ವಜನರ ಬಳಿಗೂ ಹೋಗಿ ಇರಬಹುದು.**

ಆತನ ಭೂಲೋಕದ ಸೇವೆಯ ಆರಂಭದಲ್ಲಿ ಕರ್ತನಾದ ಯೇಸುವು ''ಸೆರೆಯವರಿಗೆ ಬಿಡುಗಡೆಯಾಗುವುದನ್ನು ಸಾರುವುದಕ್ಕೆ'' ಮತ್ತು ''ಮನ ಮುರಿದವರನ್ನು ಬಿಡಿಸಿ ಕಳುಹಿಸುವುದಕ್ಕೂ'' ಆತನು ಬಂದನು ಎಂಬುದಾಗಿ

ಹೇಳಿದ್ದಾನೆ. ಇದನ್ನು ವಿಶ್ಲೇಷಿಸುವಾಗ, ಆತನು ಒದಗಿಸಲು ಬಂದಂತಹ ''ಸ್ವಾತಂತ್ರ್ಯವು'' ಸಾಮಾಜಿಕ ರಾಜಕೀಯ ಅಥವಾ ಸಾಂಸ್ಕೃತಿಕವಾದುದಲ್ಲ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಎಲ್ಲಡೆ ಜನರು ಇದ್ದರು ಮತ್ತು ಈಗಲೂ ಇದ್ದಾರೆ– ಅಗೋಚರವಾದ ಸೈತಾನ ಅವನ ದುರಾತ್ಮಗಳ ಸಮೂಹವನ್ನು ಒಳಗೊಂಡಿರುವ ರಾಜ್ಯದಿಂದ ಆತ್ಮಿಕವಾಗಿ ಶೋಷಣೆಗೆ ಒಳಗಾಗಿದ್ದಾರೆ ಮತ್ತು ಬಂಧಿತ ಕೈದಿಗಳಾಗಿದ್ದಾರೆ.

ಯೇಸುವು ಒದಗಿಸುವಂತಹ ಆತ್ಮಿಕ ''ಸ್ವಾತಂತ್ರ್ಯ'' ಮತ್ತು ''ಬಿಡುಗೆಯು'' ವಿಮೋಚನೆ ಎಂಬುದಾಗಿ ನಾವು ಕರೆಯುವಂತದ್ದಾಗಿದೆ. ಶಿಲುಬೆಯ ಮೇಲೆ ಕ್ರಿಸ್ತನ ಮರಣದ ಮೂಲಕವಾಗಿ ಮತ್ತು ಆತನ ವಿಜಯಶಾಲಿ ಪುನರುತ್ಥಾನದ ಮೂಲಕವಾಗಿ ವಿಮೋಚನೆಯು ಸಾಧ್ಯಕರವಾಗುವಂತೆ ಮಾಡಿದ್ದಾನೆ. ಕ್ರಿಸ್ತನಲ್ಲಿ ವೈಯಕ್ತಿಕವಾದ ನಂಬಿಕೆಯ ಮೂಲಕವಾಗಿ ಮತ್ತು ಆತನು ಒದಗಿಸಿದಂತಹ ಈ ಸ್ವಾತಂತ್ರ್ಯವನ್ನು ವ್ಯಕ್ತಿಗತವಾಗಿ ಅನುಭವಿಸಬಹುದು ಮತ್ತು ಈ ವಿಮೋಚನೆಯನ್ನು ಬಿಡುಗಡೆ ಮಾಡಬಹುದು. ವಿಮೋಚನೆಯು ಪ್ರಾಥಮಿಕವಾಗಿ ಆತ್ಮಿಕವಾದದು. ಇದು ಆತ್ಮದಲ್ಲಿ ಪ್ರಾರಂಭಗೊಳ್ಳುತ್ತದೆ ಮತ್ತು ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕತೆಯನ್ನು ಒಳಗೊಂಡಿರುವ ಮಾನವನ ಅಸ್ತಿತ್ವದ ಎಲ್ಲಾ ಕ್ಷೇತ್ರಗಳಲ್ಲಿ ಇದರ ಪ್ರಭಾವ ಬೀರುತ್ತದೆ.

ಲೂಕ 4:18,19ರಲ್ಲಿ ಸೇವೆಯ ಉಲ್ಲೇಖನವು ಜೂಬಿಲಿ ವರ್ಷದ ಹಳೇಒಡಂಬಡಿಯ ಕಾನೂನಿನ ಹಿನ್ನೆಲೆಯಲ್ಲಿ ಪ್ರಸ್ತುತ ಪಡಿಸಲಾಗಿದೆ ಎಂಬುದಾಗಿ ಸತ್ಯವೇದದ ವಿಧ್ವಾಂಸರುಗಳು ನಮಗೆ ಹೇಳುತ್ತಾರೆ. ಪ್ರತಿ ಐವತ್ತನೆಯ ವರುಷವನ್ನು ಜೂಬಿಲಿಯ ವರ್ಷವೆಂದು ಭಾವಿಸಬೇಕು ಮತ್ತು ಘೋಷಿಸಬೇಕೆಂಬುದಾಗಿ ಇಸ್ರಾಯೇಲ ಜನರಿಗೆ ಹಳೇ ಒಡಂಬಡಿಕೆಯ ಭಾಗವಾಗಿ ದೇವರು ಸಂಯೋಜಿಸಿದನು.

ಎಲ್ಲಾ ದಾಸರುಗಳಿಗೆ ಸ್ವಾತಂತ್ರ್ಯವು ಕೊಡಲ್ಪಟ್ಟಂತಹ ವರ್ಷವು ಇದೆ ಆಗಿದೆ. ದಾಸರುಗಳು ಅವರ ಸ್ವಂತ ಜನರ ಬಳಿಗೂ ಮತ್ತು ಸ್ವಾಧೀನತೆಗೂ ಹಿಂದಿರುಗಿ ಹೋಗಲೂ ವಿಮುಕ್ತಗೊಂಡರು. ಸಾಲಗಳು ತೀರಿಹೋದವು ಮತ್ತು ಭೂಮಿಯು ಅವರ ಮೂಲ ಮಾಲೀಕರುಗಳಿಗೆ ಹಿಂತಿರುಗಿಸಲಾಯಿತು. ಇದನ್ನು ಸಮಾನಾಂತರವಾಗಿ ಚಿತ್ರಿಸುವುದಾದರೆ, ಯೇಸುವು ಒದಗಿಸುವಂತಹ ವಿಮೋಚನೆಯು – ಆತ್ಮಿಕ ಸಾಲವನ್ನು ತೀರಿಸುವಂತಹ ಫಲಿತಾಂಶ ನೀಡಿದೆ – ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ, ನಮ್ಮ ಮೂಲ ಆತ್ಮಿಕ ಸ್ಥಿತಿಗೆ ಮತ್ತು ಇನ್ನೂ ಅಧಿಕವಾದ ಸ್ಥಿತಿಗೆ ನಾವು ಪುನಃ ಕಟ್ಟಲ್ಪಟ್ಟಿದ್ದೇವೆ.

## ಒಳಗೆ ತರಲ್ಪಡುವವರಾಗಿರಲೂ ಹೊರಗೆ ತರಲಾಗಿದೆ

ಧರ್ಮೋಪದೇಶಕಾಂಡ 4:20

**ನಿಮ್ಮನ್ನಾದರೋ ಯೆಹೋವನು ತನಗೆ ಸ್ವಕೀಯ ಜನರನ್ನಾಗಿ ಮಾಡಿಕೊಳ್ಳಬೇಕೆಂದು ಸಂಕಲ್ಪಿಸಿ ಕಬ್ಬಿಣವನ್ನು, ಕರಗಿಸುವ ಕುಲಿಮೆಯೋಪಾದಿಯಲ್ಲಿದ್ದ ಐಗುಪ್ತದೇಶದಿಂದ ತಪ್ಪಿಸಿದನು ಆ ಸಂಕಲ್ಪವು ಈ ನೆರವೇರಿತಲ್ಲಾ.**

ಧರ್ಮೋಪದೇಶಕಾಂಡ 6:21–23

**ನೀವು ಅವರಿಗೆ – ನಾವು ಐಗುಪ್ತದೇಶದಲ್ಲಿ ಫರೋಹನಿಗೆ ದಾಸರಾಗಿದ್ದಾಗ ಯೆಹೋವನು ತನ್ನ ಭುಜಬಲದಿಂದ ನಮ್ಮನ್ನು ಬಿಡುಗಡೆ ಮಾಡಿದನು ಆತನು ಐಗುಪ್ತ್ಯರನ್ನೂ ಫರೋಹನನ್ನೂ ಅವನ ಮನೆಯವರನ್ನೂ ಬಾಧಕವಾದ ದೊಡ್ಡ ಮಹತ್ಕಾರ್ಯಗಳಿಂದಲೂ ಉತ್ಪಾತಳಿಂದಲೂ ನಮ್ಮ ಕಣ್ಣೆದುರಿನಲ್ಲಿ ಶಿಕ್ಷಿಸಿ ತಾನು ನಮ್ಮ ಪಿತೃಗಳಿಗೆ ಪ್ರಮಾಣ ಮಾಡಿಕೊಟ್ಟ ದೇಶದಲ್ಲಿ ನಮ್ಮನ್ನು ಸೇರಿಸುವುದಕ್ಕಾಗಿ ಐಗುಪ್ತದೇಶದೊಳಗಿಂದ ಬರ ಮಾಡಿದನು.**

ಹಿಂದಿನ ಅಧ್ಯಾಯದಲ್ಲಿ, ಹಳೇ ಒಡಂಬಡಿಕೆಯಲ್ಲಿ ಇಸ್ರಾಯೇಲ ಜನರಿಗೆ ಜರುಗಿದೇನೆಂಬುದನ್ನು ಹೊಸ ಒಡಂಬಡಿಕೆಯಲ್ಲಿ ಸಭೆಯ ಆತ್ಮಿಕ ಸತ್ಯಕ್ಕೆ ಸಮಾನಾಂತರವಾಗಿ ಪ್ರಸ್ತುತ ಪಡಿಸಲಾಗಿರುವುದನ್ನು ನಾವು ಅಧ್ಯಯನ ಮಾಡಿದ್ದೇವೆ. ಐಗುಪ್ತದ ದಾಸತ್ವದಿಂದ ಆತನ ಜನರನ್ನು ದೇವರು ಹೊರತಂದಂತಹದ್ದು ದುರಾತ್ಮನ ಆತ್ಮಿಕ ಬಂಧನದಿಂದ ನಮ್ಮ ವಿಮೋಚನೆಯ ''ವಿಧವಾಗಿದೆ.'' ದೇವರು ಇಸ್ರಾಯೇಲ ಜನರನ್ನು ದಾಸತ್ವದಿಂದ ಹೊರತಂದನು ಆದ್ದರಿಂದ ಅವರನ್ನು ಆತನ ಸ್ವಾಸ್ಥ್ಯದ ಜನರಾಗಿರಲು–ಆತನ ಸ್ವಂತ ಜನರಾಗಿರಲು ಅವರನ್ನು ತೆಗೆದುಕೊಂಡಿದ್ದಾನೆ. ದೇವರು ಅವರನ್ನು ಅಲ್ಲಿಂದ ಹೊರಗೆ ತಂದನು. ಆದ್ದರಿಂದ ಅವರನ್ನು ವಾಗ್ದಾನದ ಭೂಮಿಗೆ ಆತನು ತರುವುದಾಗಿತ್ತು. ನಮ್ಮ ವಿಮೋಚನೆಯು, ಹೊರಗೆ ತರುವುದು ಮತ್ತು ಒಳಗೆ ತರುವುದನ್ನು ಒಳಗೊಂಡಿರುತ್ತದೆ.

- ಆತನಿಂದ ಪ್ರತ್ಯೇಕವಾಗಿರುವುದರಿಂದ ನಮ್ಮನ್ನು ಆತನು ಹೊರತಂದನು ಮತ್ತು ಆತನ ಸ್ವಂತ ಪುತ್ರರು ಮತ್ತು ಪುತ್ರಿಯರು ಆಗಿರುವುದಕ್ಕೆ ನಮ್ಮನ್ನು ಕರೆತಂದಿದ್ದಾನೆ.
- ಸೈತಾನನ ಬಂಧನದಿಂದ ನಮ್ಮನ್ನು ಆತನು ಹೊರಗೆ ತಂದನು ಮತ್ತು ಆತನ ಮಗನ ರಾಜ್ಯದಲ್ಲಿ ಸ್ವಾತಂತ್ರ್ಯತೆಗೆ ನಮ್ಮನ್ನು ಕರೆತಂದಿದ್ದಾನೆ.

- ಪಾಪದಿಂದ ನಮ್ಮನ್ನು ಆತನು ಹೊರಗಡೆ ತಂದಿದ್ದಾನೆ ಮತ್ತು ನೀತಿವಂತಿಕೆಗೆ ನಮ್ಮನ್ನು ಕರೆ ತಂದಿದ್ದಾನೆ.
- ಖಂಡನೆಯಿಂದ ನಮ್ಮನ್ನು ಆತನು ಹೊರಗಡೆ ತಂದಿದ್ದಾನೆ ಮತ್ತು ನ್ಯಾಯ ಸಮರ್ಥನೆಗೆ ನಮ್ಮನ್ನು ಕರೆತಂದಿದ್ದಾನೆ.
- ಪಾಪಿಗಳಾಗಿರುವುದರಿಂದ ನಮ್ಮನ್ನು ಆತನು ಹೊರಗಡೆ ತಂದಿದ್ದಾನೆ ಮತ್ತು ಆತನ ಮಹಾಯಾಜಕರಾಗಿರುವುದಕ್ಕೆ ನಮ್ಮನ್ನು ಕರೆತಂದಿದ್ದಾನೆ.
- ಗುಲಾಮರಾಗಿರುವುದರಿಂದ ನಮ್ಮನ್ನು ಆತನು ಹೊರಗಡೆ ತಂದಿದ್ದಾನೆ ಮತ್ತು ಜೀವಿತದಲ್ಲಿ ರಾಜ್ಯಭಾರಕ್ಕೆ ನಮ್ಮನ್ನು ಕರೆತಂದಿದ್ದಾನೆ.
- ಅನಾರೋಗ್ಯದಿಂದ ನಮ್ಮನ್ನು ಆತನು ಹೊರಗೆ ತಂದಿದ್ದಾನೆ ಮತ್ತು ಆರೋಗ್ಯದ ಒಳಕ್ಕೆ ಕರೆತಂದಿದ್ದಾನೆ.
- ದಬ್ಬಾಳಿಕೆ ಒಳಗಾಗಿರುವುದರಿಂದ ನಮ್ಮನ್ನು ಆತನು ಹೊರಗಡೆ ತಂದಿದ್ದಾನೆ ಮತ್ತು ದೇವರು ಕೊಡಲ್ಪಟ್ಟ ಅಧಿಕಾರದ ಒಳಕ್ಕೆ ನಮ್ಮನ್ನು ಕರೆತಂದಿದ್ದಾನೆ.
- ಆತನು ನಮ್ಮನ್ನು ಅಪಜಯದಿಂದ ಹೊರಗೆ ತಂದಿದ್ದಾನೆ ಮತ್ತು ವಿಜಯದ ಒಳಕ್ಕೆ ನಮ್ಮನ್ನು ಕರೆತಂದಿದ್ದಾನೆ.
- ಸೋಲಿನಿಂದ ನಮ್ಮನ್ನು ಆತನು ಹೊರಗೆ ತಂದಿದ್ದಾನೆ ಮತ್ತು ಯಶಸ್ಸಿನ ಒಳಕ್ಕೆ ನಮ್ಮನ್ನು ಕರೆ ತಂದಿದ್ದಾನೆ.
- ಆತನು ನಮ್ಮನ್ನು ಬಡತನ ಮತ್ತು ಕೊರತೆಯಿಂದ ಹೊರಗೆ ತಂದಿದ್ದಾನೆ ಮತ್ತು ಆತನ ಸಮೃದ್ಧವಾದ ಪೂರೈಕೆಯ ಒಳಕ್ಕೆ ಕರೆ ತಂದಿದ್ದಾನೆ.
- ಆತನು ನಮ್ಮನ್ನು ಹತಾಶೆಯಿಂದ ಹೊರಗೆ ತಂದಿದ್ದಾನೆ ಮತ್ತು ನಿತ್ಯತ್ವದ ನಿರೀಕ್ಷೆಯ ಒಳಕ್ಕೆ ನಮ್ಮನ್ನು ಕರೆ ತಂದಿದ್ದಾನೆ.
- ಆತನು ನಮ್ಮನ್ನು ನಿತ್ಯತ್ವದ ಮರಣದಿಂದ ಹೊರಗಡೆ ತಂದಿದ್ದಾನೆ ಮತ್ತು ನಿತ್ಯ ಜೀವದ ಒಳಕ್ಕೆ ನಮ್ಮನ್ನು ಕರೆ ತಂದಿದ್ದಾನೆ.

## ಇದರಿಂದ ವಿಮೋಚನೆ ಹೊಂದಿದ್ದೇವೆ.....

### ಪಾಪಗಳ ಬಲದಿಂದ ವಿಮೋಚನೆಗೊಂಡಿದ್ದೇವೆ

ತೀತನು 2:13, 14

**ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ ಆತನ ನಮ್ಮನ್ನು ಸಕಲ ಅಧರ್ಮದಿಂದ ವಿಮೋಚಿಸುವುದಕ್ಕೂ ಸತ್ಕ್ರಿಯೆಗಳಲ್ಲಿ ಆಸಕ್ತರಾದ**

**ಸ್ವಕೀಯ ಜನರನ್ನು ತನಗಾಗಿ ಪರಿಶುದ್ಧ ಮಾಡುವುದಕ್ಕೂ ನಮಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟನು.**

ರೋಮಾಪುರದವರಿಗೆ 6:14

**ಯಾಕೆಂದರೆ ಪಾಪವು ನಿಮ್ಮ ಮೇಲೆ ಅಧಿಕಾರ ನಡಿಸದು ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೆ.**

ಯೇಸುವು ''ಎಲ್ಲಾ ದುಷ್ಟತನದಿಂದ ನಮ್ಮನ್ನು ವಿಮೋಚನೆಗೊಳಿಸಲು'' ಅಥವಾ ''ಪ್ರತಿಯೊಂದು ಕಾನೂನು ಬಾಹಿರ ಕೃತ್ಯಗಳಿಂದ ಬಿಡಿಸಲು'' ಬಂದಿದ್ದಾನೆ. ಬಿಡಿಸು ಎಂಬ ಪದಕ್ಕೆ ಗ್ರೀಕ್‌ನಲ್ಲಿ ''ಲುಟ್ರೋ'' (Lutro) ಎಂಬ ಪದದಿಂದ ಬಂದಿದೆ. ಮೊದಲೇ ವ್ಯಾಖ್ಯಾನಿಸಿದಂತೆ, ಒಂದು ಬಂಧಿ ಬಿಡುಗಡೆಯ ಶುಲ್ಕವನ್ನು ಪಾವತಿಸುವುದರಿಂದ ಸೆರೆಯಾಳುವನ್ನು ಸ್ವತಂತ್ರಗೊಳಿಸುವ ವ್ಯವಸ್ಥೆಯನ್ನು ಉಲ್ಲೇಖಿಸುತ್ತದೆ. ಆದ್ದರಿಂದ ಇಲ್ಲಿ ಪ್ರಸ್ತುತ ಪಡಿಸಲಾಗದ ಸತ್ಯವು ನಮ್ಮನ್ನು ಸೆರೆಯಾಳುಗಳಾಗಿ ಹಿಡಿದಿಟ್ಟುಕೊಳ್ಳುವಂತಹ ಪ್ರತಿಯೊಂದು ಪಾಪಯುತ ಕೃತ್ಯಗಳಿಂದ ಯೇಸುವು ವಿಮುಕ್ತಗೊಳಿಸಿದ್ದಾನೆ.

ವೈಯಕ್ತಿಕವಾಗಿ, ವಿವಿಧ ಪಾಪಮಯ ಹವ್ಯಾಸಗಳಿಗೆ ನಾವು ಇನ್ನೂ ಸೆರೆಯಾಳುಗಳಾಗಿರಬಹುದು ಅಥವಾ ಇನ್ನೂ ಇರಬಹುದು. ಈ ಪುಸ್ತಕದಲ್ಲಿ ನಾವು ಇವುಗಳ ಪಟ್ಟಿಯನ್ನು ಪ್ರಸ್ತುತಪಡಿಸಬೇಕಾಗಿಲ್ಲ, ಏಕೆಂದರೆ ನಮ್ಮಲ್ಲಿ ಪ್ರತಿಯೊಬ್ಬರು ಅವುಗಳನ್ನು ನಮ್ಮ ಜೀವನದಲ್ಲಿ ಪ್ರತ್ಯೇಕವಾಗಿ ಗುರುತಿಸಬಹುದು. ಈಗ ನಾವು ಯೇಸುವಿನಲ್ಲಿ ಇದ್ದೇವೆ, ನಮಗೆ ಒದಗಿಸಿದಂತಹ ವಿಮೋಚನೆಯ ಭಾಗವಾಗಿ, ಪಾಪಮಯ ಕೃತ್ಯಗಳ ಬಂಧನಗಳಿಂದ ನಾವು ಸ್ವತಂತ್ರರಾಗಿದ್ದೇವೆ ಎಂಬುದನ್ನು ನಾವು ತಿಳಿಯುವುದು ಅವಶ್ಯಕವಾಗಿದೆ. ಪ್ರಪಂಚವು ನಿರ್ದಿಷ್ಟ ಪಾಪಮಯ ಕೃತ್ಯಗಳಿಗೆ ''ಅನುವಂಶಿಕ''ರಾಗಿರುವುದು ಅಥವಾ ಬೇರೆ ಯಾವುದಾದರೂ ಕಾರಣ ನೀಡಿ ದೂರವಾಗಿ ವಿವರಿಸಲು ಪ್ರಯತ್ನಿಸಿದೆ. ಆದರೆ ನಾವು ಪಾಪವನ್ನು ಪಾಪವೆಂಬುದಾಗಿ ಗುರುತಿಸಿದ್ದೇವೆ ಮತ್ತು ಕ್ರಿಸ್ತನಲ್ಲಿ ಅವುಗಳಿಂದ ನಾವು ಸ್ವತಂತ್ರರಾಗಿದ್ದೇವೆ. ನೀತಿವಂತಿಕೆಯಲ್ಲಿ ನಡೆಯಲು ಕಾತರದಿಂದ ಇರುವ ದೇವರ ಸ್ವಂತ ಜನರಂತೆ ನಾವು ಜೀವಿಸಬೇಕು.

## ಸೈತಾನನ ಕಾರ್ಯಗಳಿಂದ ವಿಮೋಚನೆಗೊಂಡಿದ್ದೇವೆ

ಕೊಲೊಸ್ಸೆಯವರಿಗೆ 1:13ಅ

**ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ.**

ಯೋಹಾನ 14:30 (ಆ್ಯಂಪ್ಲಿಫೈಡ್ ಬೈಬಲ್)

**ನಾನು ನಿಮ್ಮೊಂದಿಗೆ ಅಧಿಕವಾಗಿ ಮಾತಾನಾಡುವುದಿಲ್ಲ ಏಕೆಂದರೆ ಪ್ರಪಂಚದ ರಾಜಕುಮಾರನು (ದುಷ್ಟ, ಮಹಾಮೇಧಾವಿ, ಆಡಳಿತಗಾರ) ಬರುತ್ತಿದ್ದಾನೆ. ಅವನು ನನ್ನ ಮೇಲೆ ಯಾವುದೇ ಹಕ್ಕು ಹೊಂದಿಲ್ಲ (ಅವನಿಗೆ ನನ್ನೊಂದಿಗೆ ಸಾಮಾನ್ಯವಾದದ್ದೇನೂ ಇಲ್ಲ; ಅವನಿಗೆ ಸಂಬಂಧಪಟ್ಟಿರುವುದು ಯಾವುದೂ ನನ್ನಲ್ಲಿ ಇಲ್ಲ ಮತ್ತು ಅವನಿಗೆ ನನ್ನ ಮೇಲೆ ಅಧಿಕಾರವಿಲ್ಲ.**

1 ಯೋಹಾನನು 5:18

**ದೇವರಿಂದ ಹುಟ್ಟಿರುವವನು ಪಾಪ ಮಾಡುವವನಲ್ಲವೆಂಬುದು ನಮಗೆ ಗೊತ್ತದೆ. ದೇವರಿಂದ ಹುಟ್ಟಿದಾತನು ಅವನನ್ನು ಕಾಪಾಡುವನು.**

ಲೂಕ 10:19

**ನೋಡಿರಿ ಹಾವುಗಳನ್ನು ಚೇಳುಗಳನ್ನೂ ವೈರಿಯ ಸಮಸ್ತ ಬಲವನ್ನೂ ತುಳಿಯುವುದಕ್ಕೆ ನಿಮಗೆ ಅಧಿಕಾರ ಕೊಟ್ಟಿದ್ದೇನೆ ಯಾವುದೂ ನಿಮಗೆ ಕೇಡು ಮಾಡುವುದೇ ಇಲ್ಲ.**

ನಮ್ಮ ಜೀವಿತದ ಮೇಲಿರುವ ಸೈತಾನನ ಹತೋಟಿಯಿಂದ ನಾವು ವಿಮೋಚನೆಗೊಂಡಿದ್ದೇವೆ. ಯೋಹಾನ 14:30ರಲ್ಲಿ ಯೇಸುವು ಹೇಳಿದ್ದು ಆತನಿಂದ ವಿಮೋಚನೆ ಹೊಂದಿದ ನಮಗೂ ಈಗ ಹೇಳಲ್ಪಟ್ಟಿದೆ. ಪ್ರಪಂಚದ ಅಧಿಪತಿಯಾದ ಸೈತಾನನು ನಮ್ಮ ಮೇಲೆ ಯಾವುದು ಹಕ್ಕು ಹೊಂದಿಲ್ಲ ನಮ್ಮೊಂದಿಗೆ ಸಮಾನಾಂತರವಾಗಿ ಸಮಾನವಾಗಿರುವು ಯಾವುದು ಇಲ್ಲ, ಅವನಿಗೆ ಸಂಬಂಧಪಟ್ಟಂತಹದ್ದು ಯಾವುದು ನಮ್ಮಲಿಲ್ಲ ಮತ್ತು ನಮ್ಮ ಮೇಲೆ ಅವನಿಗೆ ಅಧಿಕಾರವಿಲ್ಲ, ನಮ್ಮನ್ನು ಆತನ ಸ್ವಂತದವರಾಗಿ ಮಾಡಿದಂತಹ ದೇವರಿಗೆ ಸಂಬಂಧಿಸಿದವರು ನಾವಾಗಿದ್ದೇವೆ. ಹಲ್ಲೆಲೂಯ!

ಯೇಸುವು, ದೇವರಿಂದ ಜನಿಸಿದವನು, ನಮ್ಮನ್ನು ಸುರಕ್ಷಿತವಾಗಿ ಇಟ್ಟಿದ್ದಾನೆ ಮತ್ತು ದುರಾತ್ಮನು ನಮಗೆ ಹಾನಿ ಮಾಡಲೂ ಸಾಧ್ಯವಿಲ್ಲ. ನಾವು ಸೈತಾನನ ದೊರೆತನದಿಂದ ಸ್ವತಂತ್ರರಾಗಿರುವುದು ಮಾತ್ರವಲ್ಲ ಅವನ ಮೇಲೆ ನಮಗೆ ಅಧಿಕಾರ ಕೊಡಲ್ಪಟ್ಟಿದೆ ಮತ್ತು ಅವನಿಂದ ಸಂಪೂರ್ಣ ಸಂರಕ್ಷಣೆ ಕೊಡಲ್ಪಟ್ಟಿದೆ. ಎಂತಹ ಮಹಿಮೆಯುಳ್ಳ ವಿಮೋಚನೆ! ಈಗ ನಮ್ಮ ವಿರೋಧವಾಗಿ ದುರಾತ್ಮನು ದುಷ್ಟ ತಂತ್ರೋಪಾಯಗಳನ್ನು ಮಾಡಲು ಪ್ರಯತ್ನಿಸಿದರೆ, ಅಂದರೆ ಮರಣಾಂತಿಕ ಕೆಲವು ರೋಗಗಳನ್ನು ತರಲು ಪ್ರಯತ್ನಿಸಿದರೆ, ಅಥವಾ ನಮ್ಮ ಕುಟುಂಬ ನಾಶ ಮಾಡಲು ಅಥವಾ ನಮ್ಮ ಮಕ್ಕಳನ್ನು ದಾರಿ ತಪ್ಪಿಸಿದ್ದರೆ ಅಥವಾ ನಮ್ಮ ವ್ಯಾಪಾರಗಳನ್ನು ಅಡ್ಡಿಪಡಿಸುತ್ತಿದ್ದರೆ ಅಥವಾ ಹಣಕಾಸಿನ ಕಠಿಣತೆಗಳನ್ನು ತರುತ್ತಿದ್ದರೆ ಅಥವಾ

ವಿಪತ್ತುಗಳನ್ನು ತರುತ್ತಿದ್ದರೆ ನಾವು ಅವನಿಗೆ ವಿರುದ್ಧವಾಗಿ ನಿಂತುಕೊಳ್ಳಬಹುದು ಮತ್ತು ವಿಜಯಶಾಲಿಯಾಗಿ ಅವನ ಕೃತ್ಯಗಳನ್ನು ಎದುರಿಸಿ ನಿಲ್ಲಬಹುದು. ಅವನ ಕೈಗಳಿಂದ ಬಾಧೆಪಡುವಂತಹ ಅವಶ್ಯಕತೆ ನಮಗಿಲ್ಲ.

## ಈ ಪ್ರಸ್ತುತ ದುಷ್ಟಯುಗದಿಂದ ವಿಮೋಚಿಸಲ್ಪಟ್ಟಿದ್ದೇವೆ.

ಗಲಾತ್ಯದವರಿಗೆ 1:3,4

**ತಂದೆಯಾದ ದೇವರಿಂದಲೂ ನಮ್ಮ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ ಈತನು ನಮ್ಮನ್ನು ಕೆಟ್ಟದ್ದಾಗಿರುವ ಈಗಿನ ದುಷ್ಟಯುಗದೊಳಗಿಂದ ಬಿಡಿಸಬೇಕೆಂದು ನಮ್ಮ ತಂದೆಯಾದ ದೇವರ ಚಿತ್ತಕ್ಕೆ ಅನುಸಾರವಾಗಿ ನಮ್ಮ ಪಾಪಗಳ ದೆಸೆಯಿಂದ ತನನ್ನು ಮರಣಕ್ಕೆ ಒಪ್ಪಿಸಿದನು.**

1 ಯೋಹಾನನು 5:1ಅ, 4

**ಯೇಸುವು ಕ್ರಿಸ್ತನೆಂದು ನಂಬುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನಾಗಿದ್ದಾನೆ. ಯಾಕೆಂದರೆ ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ**

ನಾನು ಮತ್ತು ನೀವು ''ಈ ಪ್ರಸ್ತುತ ದುಷ್ಟ ಯುಗದಿಂದ'' ಬಿಡುಗಡೆ ಹೊಂದಬೇಕೆಂಬುದು ತಂದೆಯ ಬಯಕೆಯಾಗಿದೆ. ಯೇಸುವು ಶಿಲುಬೆಯ ಮೇಲೆ ಆತನ ವಿಮೋಚನೆಯ ಕಾರ್ಯದ ಮೂಲಕವಾಗಿ ಇದನ್ನು ಸಾಧ್ಯಕರಗೊಳಿಸಿದ್ದಾನೆ. ''ಈಗಿನ ದುಷ್ಟ ಯುಗದೊಳಗಿಂದ'' ನಾವು ಸ್ವತಂತ್ರರಾಗಿದ್ದೇವೆ. ''ಯುಗ'' ಎಂಬ ಪದವು (ಗ್ರೀಕ್‌ನಲ್ಲಿ ''ಅಯಾನ್'' (Aion) ''ಒಂದು ಕಾಲಾವಧಿ'') ಸೈತಾನನು ''ಈಗಿನ ಯುಗದ ದೇವತೆಯಂತೆ'' (2 ಕೊರಿಂಥದವರಿಗೆ 4:4) ಕಾರ್ಯ ನಿರ್ವಹಿಸುತ್ತಿರುವಂತಹ ಪ್ರಸ್ತುತ ಸಮಯದ ಅವಧಿಯನ್ನು ಇದು ವ್ಯಾಖ್ಯಾನಿಸುತ್ತದೆ. ''ಬಿಡುಗಡೆ'' ಎಂಬುದಾಗಿ ಅನುವಾದಿಸಿದ ಪದವು ಗ್ರೀಕ್ ಪದವಾದ ''ಎಕ್ಸಾಯ್ರ್‌ರೊ'' (Exairco) ದಿಂದ ಬಂದಿದೆ. ''ಆಯ್ಕೆ ಮಾಡು'' ''ತನ್ನನ್ನೇ ಹೊರಗೆ ತೆಗೆಯುವುದು'' ಎಂಬ ಅರ್ಥವನ್ನು ವೈನ್ಸ್ ಡಿಕ್ಸನರಿಯ (ವೈನ್ಸ್ ಶಬ್ಧಕೋಶ) ಪ್ರಕಾರವಾಗಿದೆ. ತಂದೆಯು ನಮ್ಮನ್ನು ಈಗಿನ ದುಷ್ಟಯುಗದೊಳಗಿಂದ ತನಗಾಗಿ ಹೊರ ತರುವುದರಲ್ಲಿ ಒಂದು ವಿಶೇಷ ಆಸಕ್ತಿ ಮತ್ತು ಬಹಳ ಸಂತೋಷ ಹೊಂದಿದ್ದಾನೆ. ಈಗಿನ ದುಷ್ಟಯುಗದಿಂದ ನಾವು ಬಿಡುಗಡೆ ಹೊಂದಿರುವುದರಿಂದ, ಈಗಿನ ಯುಗದ ದೇವತೆಯ ಪ್ರಭಾವ ಮತ್ತು ಕಾರ್ಯಗಳಿಗೆ ಒಳಪಟ್ಟಿರುವುದು ಇನ್ನು ಮುಂದೆ ಅಗತ್ಯವಿಲ್ಲ. ಇನ್ನೊಂದು ಹೆಜ್ಜೆ ಮುಂದೆ ಹೇಳುವುದಾದರೆ, ಧರ್ಮಶಾಸ್ತ್ರದ

ವಚನಭಾಗವು ಪ್ರತಿಯೊಬ್ಬ ವಿಶ್ವಾಸಿಯು ಲೋಕವನ್ನು ಜಯಿಸಬಹುದು ಎಂಬುದಾಗಿ ಸಾರುತ್ತದೆ. ಪ್ರಪಂಚ (ಗ್ರೀಕ್‌ನಲ್ಲಿ ''ಕೊಸ್ಮೋಸ್''-"Kosmos") - ನಮ್ಮ ಸುತ್ತಲೂ ಕಾಣುವಂತಹ ''ವ್ಯವಸ್ಥೆ'' ಅಥವಾ ''ಆದೇಶ''ವನ್ನು ಸೂಚಿಸುತ್ತದೆ. ಇದು ದುಷ್ಟನ ವ್ಯವಸ್ಥೆ ಮತ್ತು ದೇವರ ಉದ್ದೇಶಗಳಿಗೆ ವಿರುದ್ಧವಾಗಿ ಪರಿಸ್ಥಿತೆಗಳನ್ನು, ಜನರನ್ನು ಹೊಂದಿಸುವುದು, ಸಮಾಜಗಳು ಸಂಸ್ಕೃತಿಗಳು ಮತ್ತು ದೇಶಗಳನ್ನು ವ್ಯಾಪಿಸಿರುವಂತಹ ಬಂಡಾಯವಾಗಿದೆ. ವಿಶ್ವಾಸಿಗಳು ದುಷ್ಟನ ವ್ಯವಸ್ಥೆಗೆ ಒಳಪಟ್ಟು ಮತ್ತು ಅವರ ಸುತ್ತಲೂ ಇರುವ ಪ್ರಪಂಚವನ್ನು ದೊರೆತನ ಮಾಡುವ ಮತ್ತು ಪ್ರಭಾವ ಬೀರುವ ಬಂಡಾಯಗಳಲ್ಲಿ ಜೀವಿಸುವ ಅಗತ್ಯವಿಲ್ಲ. ''ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟ ತನಕ್ಕೆ ತಪ್ಪಿಸಿಕೊಂಡು ದೈವ ಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ''..... (2 ಪೇತ್ರನು 1:4) ಈ ರೀತಿ ಇರಬೇಕೆಂಬುದಾಗಿ ವಾಕ್ಯವು ನಮಗೆ ಬೋಧಿಸುತ್ತದೆ. ಈಗಿನ ಯುಗವನ್ನು ಆಳುವ ದುಷ್ಟನಿಂದ ವಿಶ್ವಾಸಿಗಳು ಸ್ವತಂತ್ರರಾಗಿದ್ದಾರೆ ಮತ್ತು ದುಷ್ಟನ ವ್ಯವಸ್ಥೆ ಮತ್ತು ಪ್ರಪಂಚದಲ್ಲಿನ ಬಂಡಾಯದ ವಿರುದ್ಧವಾಗಿ ವಿಜಯಿಯಾಗಿ ನಡೆಯಬಹುದಾಗಿದೆ. ಕ್ರಿಸ್ತನ ವಿಮೋಚನೆಯ ಕಾರ್ಯದ ಮೂಲಕವಾಗಿ ಇದು ಸಾಧ್ಯವಾಗುತ್ತದೆ.

## ನಮಗೆ ಹಸ್ತಾಂತರಿಸಿದ ಖಾಲಿಯಾಗಿ ಜೀವಿಸುವ ವಿಧಾನದಿಂದ ವಿಮೋಚಿಸಲ್ಪಟ್ಟಿದ್ದೇವೆ.

1 ಪೇತ್ರನು 1:18,19

**ವ್ಯರ್ಥವಾದ ನಡವಳಿಕೆಯಿಂದ ನಿಮಗೆ ಬಿಡುಗಡೆಯಾದದ್ದು ಬೆಳ್ಳಿ-ಬಂಗಾರ ಮೊದಲಾದ ನಶಿಸಿಹೋಗುವ ವಸ್ತುಗಳಿಂದಲ್ಲ ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ಎಂದು ಬಲ್ಲಿರಲ್ಲವೇ.**

ಪೇತ್ರನು ಬರೆದ ಎರಡು ಪತ್ರಿಕೆಗಳಲ್ಲಿ ಮಧ್ಯ ಏಷ್ಯಾದ ವಿವಿಧ ಭಾಗಗಳಲ್ಲಿ ಜೀವಿಸುವಂತಹ ವಿಶ್ವಾಸಿಗಳು, ಹೆಚ್ಚಾಗಿ ರೂಪಾಂತರಗೊಂಡ ಅನ್ಯಜನರನ್ನು ಒಳಗೊಂಡಿದ್ದಂತಹ (ಯೆಹೂದಿ ಅಲ್ಲದ ಮೂಲದ ಜನರು) ಕ್ರೈಸ್ತರಿಗೆ ಉದ್ದೇಶಿಸಿ ಬರೆಯಲಾಗಿದೆ. ಅವರ ಹಿಂದಿನ ಜೀವಿತಗಳ ಗುಣಲಕ್ಷಣಗಳು ''ಬಂಡುತನ, ದುರಾಶೆ, ಕುಡಿಕತನ, ದುಂದೌತನ, ಮದ್ಯಪಾನಗೋಷ್ಠಿ ಅಸಹ್ಯವಾದ ವಿಗ್ರಹಾರಾಧನೆ ಈ ಮೊದಲಾದವುಗಳನ್ನು ನಡಿಸುವುದರಲ್ಲಿಯೂ'' (1 ಪೇತ್ರನು 4:3) ಇದ್ದರು. ಇಂತಹ ಜನರಿಗೆ, ಅವರ ಪೂರ್ವಿಕರಿಂದ ''ಸಂಪ್ರದಾಯದಿಂದ ಪಡೆದಂತಹ

ಗುರಿ ರಹಿತ ನಡವಳಿಕೆ'' ಯಿಂದ ಅವರು ವಿಮೋಚನೆಗೊಂಡಿದ್ದಾರೆಂದು ಪೇತ್ರನು ಘೋಷಿಸುತ್ತಾನೆ. ಪ್ರಪಂಚದಾದ್ಯಂತ ಇರುವ ಎಲ್ಲಾ ಜನರು, ಸಂಸ್ಕೃತಿ ಅಥವಾ ಜನಾಂಗವನ್ನು ಲೆಕ್ಕಿಸದೆ ಇಂತಹ ಸತ್ಯಕ್ಕೆ ಸಂಬಂಧಿಸಿಕೊಳ್ಳಬಹುದು. ವೈಯಕ್ತಿಕವಾಗಿ, ನಿರ್ದಿಷ್ಟ ಜೀವನ ಶೈಲಿಯ ಮಾದರಿಗಳು, ಇನ್ನೂ ಕೆಲವು ನಿರ್ದಿಷ್ಟ ಪಾಪದ ಮಾದರಿಗಳು, ಇವು ನಮ್ಮ ಪ್ರಾಚೀನ ತಲೆಮಾರಿನವರಿಂದಲೂ ಕೆಲವು ಸಮಯಗಳಲ್ಲಿ ನಮ್ಮ ತಂದೆ ತಾಯಿಯಿಂದ ನಮಗೆ ಹಸ್ತಾಂತರಿಸಲ್ಪಟ್ಟಂತಹ ಇವುಗಳಲ್ಲಿ ನಾವು ಸಿಕ್ಕಿ ಹಾಕಿಕೊಂಡಿರಬಹುದು. ಉದಾಹರಣೆಗೆ ತಂದೆ ತಾಯಿಗಳು ಅತಿಯಾಗಿ ಡ್ರಗ್ಸ್ ಅಥವಾ ಮದ್ಯಪಾನಕ್ಕೆ ವ್ಯಸನೆಗಳಾಗಿದ್ದರೆ, ಅವರು ಬೆಳೆಸುವಂತ ಮಕ್ಕಳಿಗೆ ಆ ಪಾಪದ ಮಾದರಿಯು ಹಾದು ಬರಬಹುದು. ಇತರ ಸಂದರ್ಭಗಳಲ್ಲಿ ತಲೆಮಾರಿನವರ ಮೂಲಕವಾಗಿ ಹಸ್ತಾಂತರಗೊಂಡ ಆರಾಧನೆಯ ಒಂದು ಧಾರ್ಮಿಕ ಪದ್ಧತಿಯಾಗಿರಬಹುದು. ನಮ್ಮನ್ನು ಗುರುತಿಸಿಕೊಳ್ಳುವಂತಹ ಜೀವನ ಶೈಲಿಯ ಮಾದರಿಗಳು ಮತ್ತು ಅಂತಹ ಪಾಪದಿಂದ ನಮ್ಮನ್ನು ಕ್ರಿಸ್ತನ ರಕ್ತವು ವಿಮೋಚಿಸಿದೆ ಎಂಬುದು ನಮಗೆ ಅರಿವಿದೆ. ಯೇಸುವಿನ ಬಿಡುಗಡೆಯ ರಕ್ತದ ಬಲದ ಮೂಲಕವಾಗಿ ಜನರಿಗೆ ಹಸ್ತಾಂತರಿಸಲ್ಪಟ್ಟಂತಹ ವ್ಯರ್ಥವದ ಜೀವನ ಮಾದರಿಯಿಂದ ಸ್ವತಂತ್ರವಾಗಿ ಅವರು ನಡೆಯುವುದನ್ನು ನೋಡುವುದು ಅದ್ಭುತಕರವಾಗಿದೆ. ಅನೇಕ ವರ್ಷಗಳ ವಿಗ್ರಹಾರಾಧನೆಯ ಕುಟುಂಬದಲ್ಲಿ ಬೆಳೆದವರು, ಬಿಡುಗಡೆಗೊಂಡು ಸತ್ಯವಾದ ವ್ಯಕ್ತಿಯಲ್ಲಿ ನೋಡುವುದು ಅಥವಾ ವ್ಯಭಿಚಾರ ಅಥವಾ ಲೈಂಗಿಕ ಅನೈತಿಕತೆಯ ಇತಿಹಾಸವಿರುವ ಕುಟುಂಬದಲ್ಲಿ ಬೆಳೆದ ಒಬ್ಬ ವ್ಯಕ್ತಿಯು ಇದರಿಂದ ಬಿಡುಗಡೆ ಹೊಂದಿ ನಡೆಯುವುದನ್ನು ನೋಡುವುದು ನಿಜಕ್ಕೂ ಅದ್ಭುತಕರವಾಗಿದೆ.!

## ಧರ್ಮಶಾಸ್ತ್ರದ ಶಾಪದಿಂದ ವಿಮೋಚಿಸಲ್ಪಟ್ಟಿದ್ದೇವೆ

ಗಲಾತ್ಯದವರಿಗೆ 3:13,14

**ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯ ಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನ ಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು ಮರಕ್ಕೆ ತೂಗಹಾಕಲ್ಪಟ್ಟ ಪ್ರತಿಯೊಬ್ಬರು ಶಾಪಗ್ರಸ್ತನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ.**

ಗಲಾತ್ಯದವರಿಗೆ 4:4,5

**ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು.**

ಧರ್ಮಶಾಸ್ತ್ರವು ಯೋಗಕ್ಷೇಮದ ಆಶೀರ್ವಾದಗಳು, ಸಮೃದ್ಧಿ, ಸಮಾಧಾನ ಮತ್ತು ವಿಧೇಯತೆಗಾಗಿ ದೇವರ ಪ್ರಸನ್ನತೆ ಮತ್ತು ಅನಾರೋಗ್ಯದ ಶಾಪಗಳು, ಬಡತನ, ವಿಪತ್ತು, ಸೋಲುಗಳು, ವೈಫಲ್ಯ ಮತ್ತು ಅವಿಧೇಯತೆಯಿಂದಾಗಿ ಇನ್ನು ಅಧಿಕವಾದವುಗಳನ್ನು ತಂದಿತ್ತು. (ಯಾಜಕಕಾಂಡ 26:ಧರ್ಮೋಪದೇಶಕಾಂಡ 28) ಪೂರ್ವ ನಿಯೋಜಿತವಾಗಿ, ನಮ್ಮ ಅವಿಧೇಯತೆಯ ನಿಮಿತ್ತದಿಂದ ಶಾಪಗಳು ನಮ್ಮ ಮೇಲೆ ಬಂದವು. ಆದರೂ ಕ್ರಿಸ್ತನು ಅದರೊಳಗೆ ಹೆಜ್ಜೆಯನ್ನಿಟ್ಟನು ಮತ್ತು ಧರ್ಮಶಾಸ್ತ್ರದ ಶಾಪದಿಂದ ನಮ್ಮನ್ನು ಬಿಡುಗಡೆಗೊಳಿಸಿದನು. ಆದ್ದರಿಂದ ಆಶೀರ್ವಾದಗಳನ್ನು ನಾವು ಆನಂದಿಸಬಹುದು. ಇದು ಈ ಕಾನೂನುಬದ್ಧವಾಗಿ ನಮ್ಮದಾಗಿವೆ. ಸಂಪೂರ್ಣ ಯೋಗಕ್ಷೇಮ ಸಮೃದ್ಧಿ, ಯಶಸ್ಸು, ದೇವರೊಂದಿಗೆ ಒಂದು ಹತ್ತಿರದ ಸಂಬಂಧ ಮತ್ತು ದೇವರ ಪ್ರಸನ್ನತೆಯನ್ನು ನಾವು ಆನಂದಿಸಬಹುದು. ವಿಶಾಲ ಅರ್ಥದಲ್ಲಿ, ಗಲಾತ್ಯದವರಿಗೆ ಪುಸ್ತಕದ ವಚನಗಳು

ನಾವು ಧರ್ಮಶಾಸ್ತ್ರದ ಧಾರ್ಮಿಕ ವ್ಯವಸ್ಥೆಯ (ಅಥವಾ ಆಧುನಿಕ ದಿನದ ಧಾರ್ಮಿಕ ಕರ್ಮಪ್ರಧಾನ್ಯವಾದ ಯಾವುದೇ ಪದ್ಧತಿ) ಅಧೀನತೆಯಲ್ಲಿ ಇನ್ನೂ ನಾವುಗಳಿಲ್ಲ. ಆದರೆ ಆತನ ಪುತ್ರರು ಮತ್ತು ಪುತ್ರಿಯರಂತೆ ಜೀವಿಸುವ ದೇವರ ಸೇವೆ ಮತ್ತು ಆರಾಧನೆ ಮಾಡುವುದರಲಿ ಸ್ವಾತಂತ್ರ್ಯದ ಒಂದು ಸ್ಥಾನಕ್ಕೆ ನಾವು ತರಲ್ಪಟ್ಟಿದ್ದೇವೆ ಎಂಬುದಾಗಿ ಈ ವಾಕ್ಯಗಳು ನಮಗೆ ಉಪದೇಶಿಸುತ್ತವೆ.

## ವಿಮೋಚನೆಯೊಳಗೆ

**ಉನ್ನತ ರಾಜ್ಯದೊಳಕ್ಕೆ ವಿಮೋಚನೆಗೊಂಡಿದ್ದೇವೆ.**

ಕೊಲೊಸ್ಸೆಯವರಿಗೆ 1:13

**ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು.**

ದೇವರ ಕುಮಾರನ ರಾಜ್ಯಕ್ಕೆ ನಾವು ಸೇರಿಸಲ್ಪಟ್ಟಿದ್ದೇವೆ. ಇದು ಉನ್ನತವಾದ ರಾಜ್ಯ – ಇತರೆ ಎಲ್ಲಾ ರಾಜ್ಯಗಳಿಗಿಂತಲೂ ಆಳ್ವಿಕೆಯ ರಾಜ್ಯವಾಗಿದೆ. ಈ ರಾಜ್ಯದ ತತ್ವಗಳು ಮತ್ತು ಕಾನೂನಿನ ಪ್ರಕಾರವಾಗಿ ಜೀವಿಸಬೇಕು. ಯೇಸುವಿನ ರಾಜ್ಯದ ಕಾನೂನುಗಳು ಸ್ವಾಭಾವಿಕ ಕಾನೂನುಗಳು ಮತ್ತು ಇಹಲೋಕದ ರಾಜ್ಯಗಳ ಕಾನೂನುಗಳನ್ನು ಹಿಂದೆ ಹಾಕುತ್ತದೆ. ಈ ರಾಜ್ಯದ ಜನರು ನಾವಾಗಿದ್ದೇವೆ. ಇದು ಒಂದು ನೀತಿವಂತಿಕೆ ಶಾಂತಿ, ಸಂತೋಷ, ಆಶೀರ್ವಾದ, ಅಧಿಕಾರ, ಬಲ ಮತ್ತು ಜಯದ ರಾಜ್ಯವಾಗಿದೆ. ದೇವರ ಮಗನ ರಾಜ್ಯದ ನಾಗರೀಕರಿಗೆ ಕೊಟ್ಟಂತಹ ಸವಲತ್ತುಗಳನ್ನು ಆನಂದಿಸಬಹುದು. ಉನ್ನತ ರಾಜ್ಯದ ಕಾನೂನುಗಳಿಂದ ಕಾರ್ಯಚರಣೆ ಮಾಡುವುದು – ಸ್ವಾಭಾವಿಕವಾದದ್ದಕ್ಕಿಂತ ಮೇಲಿರುವ ಅಸ್ವಾಭಾವಿಕವಾದದಲ್ಲಿ ನಡೆಯುವಂತೆ ನಮ್ಮನ್ನು ಶಕ್ತರನ್ನಾಗಿಸುತ್ತದೆ!

## ದೇವರೊಂದಿಗೆ ಸರಿಯಾಗಿ ನಿಂತುಕೊಳ್ಳಲು ವಿಮೋಚಿಸಲ್ಪಟ್ಟಿದ್ದೇವೆ

ರೋಮಾಪುರದವರಿಗೆ 3:23, 24

**ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. ಅವರು ನೀತಿವಂತರೆಂದು ನಿರ್ಣಯ ಹೊಂದುವುದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವುದು.**

ಯೇಸುಕ್ರಿಸ್ತನಿಂದ ಒದಗಿಸಲಾದ ವಿಮೋಚನೆಯು ನಮ್ಮ ನೀತಿವಂತರೆಂಬ ನಿರ್ಣಯಕ್ಕೆ ನಡೆಸುತ್ತದೆ. ನೀತಿವಂತರೆಂದು ''ನಿರ್ಣಯಿಸಲ್ಪಡುವುದು'' ಅಂದರೆ ಎಲ್ಲಾ ಆಪಾದನೆಗಳಿಂದ ಸ್ವತಂತ್ರರೆಂದು ನಿರ್ಣಯಿಸುವುದಾಗಿದೆ. ನಾವು ಎಂದಿಗೂ ಪಾಪ ಮಾಡಿಲ್ಲದವರಂತೆ ನಾವು ಮಾಡಲ್ಪಟ್ಟಿದ್ದೇವೆ. ಇದು ದೇವರೊಂದಿಗೆ ನಮ್ಮನ್ನು ''ಉತ್ತಮ ಸ್ಥಿತಿಯಲ್ಲಿ'' ಇರಿಸುತ್ತದೆ ಆದುದರಿಂದ ಯಾವುದೇ ಖಂಡನೆ ಇಲ್ಲದೆ ಮತ್ತು ತಪ್ಪಿಸ್ಥರೆಂಬ ಮನೋಭಾವನೆ ಇಲ್ಲದೆ ಸರ್ವಶಕ್ತನಾದ ದೇವರಿಗೆ ಸಂಬಂಧಿಸಿಕೊಳ್ಳಬಹುದು. ''ಕ್ರಿಸ್ತಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆತನ ಉಚಿತವಾದ ಕೃಪೆಯಿಂದಲೇ ನೀತಿವಂತರೆಂದು ನಿರ್ಣಯ ಹೊಂದಿದ್ದೇವೆ'' ಎಂಬುದಾಗಿ ನಾವು ಹೊಂದಿರುವ ಸತ್ಯದೊಡನೆ ಎದುರಾಳಿ, ದುರಾತ್ಮ ಮತ್ತು ಅವನ ಪಾಪದ ಆರೋಪಗಳನ್ನು ಎದುರಿಸಿ ನಿಲ್ಲಬಹುದು.

## ದೇವರ ಪುತ್ರರು ಮತ್ತು ಪುತ್ರಿಯರಾಗಿರಲು ವಿಮೋಚನೆಗೊಂಡಿದ್ದೇವೆ

ಗಲಾತ್ಯದವರಿಗೆ 4:4, 5

**ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು ಧರ್ಮ ಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು.**

ವಿಮೋಚನೆಯು ನಮಗೆ ನೀಡಲಾಗಿರುವ ಸ್ಥಾನಕ್ಕೆ ನಮ್ಮನ್ನು ಕರೆದೊಯ್ಯುತ್ತದೆ ಮತ್ತು ಸರ್ವಶಕ್ತ ದೇವರ ಮಕ್ಕಳು ಎಂಬ ಪೂರ್ಣ ಸವಲತ್ತುಗಳನ್ನು ಆನಂದಿಸಬಹುದು. ಆತನ ಸ್ವಂತವಾದವರ ಮೇಲೆ ವಿಶೇಷ ಕಾಳಜಿಯನ್ನು ದೇವರು ತೆಗೆದುಕೊಳ್ಳುತ್ತಾನೆ. ಕ್ರಿಸ್ತನಲ್ಲಿ ನಂಬಿಕೆಯಿಟ್ಟ ನಾವು ವಿಶೇಷ ಜನರಾಗಿದ್ದೇವೆ.

## ಅರಸರು ಮತ್ತು ಯಾಜಕರುಗಳಾಗಿರಲು ವಿಮೋಚಿಸಲ್ಪಟ್ಟಿದ್ದೇವೆ

ಪ್ರಕಟನೆ 5:9, 10

**ಅವರು ಹೊಸ ಹಾಡನ್ನು ಹಾಡುತ್ತಾ ನೀನು ಸುರುಳಿಯನ್ನು ತೆಗೆದುಕೊಂಡು ಅದರ ಮುದ್ರೆಗಳನ್ನು ಒಡೆಯುವುದಕ್ಕೆ ಯೋಗ್ಯನೇ ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ ಅವರನ್ನು ನಮ್ಮ ದೇವರಿಗೋಸ್ಕರ ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದಿ ಅವರು ಭೂಮಿಯ ಮೇಲೆ ಆಳುವರು.**

ರೋಮಾಪುರದವರಿಗೆ 5:17

**ಒಬ್ಬನು ಮಾಡಿದ ಅಪರಾಧದಿಂದ ಮರಣವು ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನುಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನೂ ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿತರಾಗಿ ಆಳುವುದು ಮತ್ತೂ ನಿಶ್ಚಯವಲ್ಲವೇ.**

ನಮ್ಮ ದೇವರ ಅರಸರು ಮತ್ತು ಯಾಜಕರುಗಳಾಗಿ ಕಂಡು ಬರಲು ನಾವು ವಿಮೋಚನೆಗೊಂಡಿದ್ದೇವೆ. ಅತ್ಯುನ್ನತ ದೇವರ ಯಾಜಕರುಗಳು ಮತ್ತು ರಾಜರುಗಳಾಗಿ ನಮಗೆ ಒಂದು ಪ್ರಸ್ತುತ ಮತ್ತು ಒಂದು ಭವಿಷ್ಯತ್ತಿನ ಇವೆರಡು ಸೇವೆಯನ್ನು ಹೊಂದಿದ್ದೇವೆ. ಇಂದು, ನಾವು ಭೂಮಿಯ ಮೇಲಿರುವಾಗ, ನಾವು ದೇವರಿಗೆ ಸೇವೆ ಮಾಡುತ್ತೇವೆ ಮತ್ತು ಕ್ರಿಸ್ತನಲ್ಲಿನ ಇತರೆ ಸಹೋದರರ ಪರವಾಗಿ ಮತ್ತು ಪ್ರಾರ್ಥನೆ ಮತ್ತು ಆರಾಧನೆಯ ಮೂಲಕವಾಗಿ ದೇವರ ಮುಂದೆ ಕಳೆದು ಹೋಗಿರುವ ಪ್ರಪಂಚದ

ಪರವಾಗಿ ನಾವು ಸೇವೆ ಸಲ್ಲಿಸುತ್ತೇವೆ. ಇಂದು, ನಮ್ಮ ವೈಯಕ್ತಿಕ ಜೀವಿತದಲ್ಲಿ, ನಾವು ಎದುರಿಸುತ್ತಿರುವಂತಹ ಪರಿಸ್ಥಿತಿಗಳ ಮೇಲೆ ಭೂಮಿಯ ಮೇಲೆ ನಮಗೆ ದೇವರಿಂದ-ಕೊಡಲ್ಪಟ್ಟ ಅಧಿಕಾರವನ್ನು ಉಪಯೋಗಿಸಿಕೊಂಡು ''ಜೀವಿತದಲ್ಲಿ ಆಳ್ವಿಕೆಯನ್ನು'' ನಾವು ಮಾಡುತ್ತೇವೆ.

## ಒಂದು ಒಡಂಬಡಿಕೆಯ ಆಶೀರ್ವಾದಕ್ಕೆ ವಿಮೋಚನೆಗೊಂಡಿದ್ದೇವೆ

ಗಲಾತ್ಯದವರಿಗೆ 3:14

**ಅಬ್ರಹಾಮನಿಗೆ ಉಂಟಾದ ಆಶೀರ್ವಾದವು ಕ್ರಿಸ್ತ ಯೇಸುವಿನಲ್ಲಿ ಅನ್ಯ ಜನರಿಗೆ ಉಂಟಾಗುವಂತೆಯೂ ದೇವರು ವಾಗ್ದಾನ ಮಾಡಿದ ಆತ್ಮನು ನಮಗೆ ನಂಬಿಕೆಯ ಮೂಲಕ ದೊರಕುವಂತೆಯೂ**

ಕ್ರಿಸ್ತನು ಒದಗಿಸಿದಂತಹ ವಿಮೋಚನೆಯು ಒಂದು ಒಡಂಬಡಿಕೆಯ ಆಶೀರ್ವಾದಕ್ಕೆ ನಮ್ಮನ್ನು ಕರೆತರುತ್ತದೆ. ಅಬ್ರಹಾಮನಿಗೆ ದೇವರು ವಾಗ್ದಾನ ಮಾಡಿದ ಆಶೀರ್ವಾದಗಳು ಈಗ ನಮ್ಮವುಗಳಾಗಿವೆ. ಅಬ್ರಹಾಮನಿಗೆ ಕೊಡಲ್ಪಟ್ಟಂತಹ ಆಶೀರ್ವಾದಗಳು ಆತ್ಮಿಕವಾದವು ಮತ್ತು ಭೌತಿಕವಾದವುಗಳೆರಡು ಆಗಿವೆ. ನಂಬಿಕೆಯ ಮೂಲಕವಾಗಿ ಅವನು ನೀತಿವಂತನಾಗಿ ಘೋಷಿಸಲಾಯಿತು; ಅವನು ದೇವರ ಸ್ನೇಹಿತನೆಂಬುದಾಗಿ ಕರೆಯಲ್ಪಟ್ಟನು; ಉತ್ತರಿಸಲ್ಪಟ್ಟ ಪ್ರಾರ್ಥನೆಯ ಆಶೀರ್ವಾದಗಳನ್ನು ಅವನು ಆನಂದಿಸಿದನು ಮತ್ತು ದೇವರು ಅವನನ್ನು ಭೌತಿಕವಾಗಿ, ಇತರ ವಿಷಯಗಳ ನಡುವೆ ದೇವರು ಸಮೃದ್ಧಿಗೊಳಿಸಿದನು. ದೇವರೊಂದಿಗಿನ ಒಂದು ಒಡಂಬಡಿಕೆಯ ಸಂಬಂಧವು ಅದರ ಸಂಗಡ ಇರುವ ಆಶೀರ್ವಾದಗಳೆಲ್ಲವೂ ನಮ್ಮದಾಗಿದೆ ಮತ್ತು ಕ್ರಿಸ್ತನಲ್ಲಿರುವ ವಿಮೋಚನೆಯಿಂದ ಇದು ಸಾಧ್ಯಕರವಾಗಿ ಮಾಡಲ್ಪಟ್ಟಿದೆ.

## ನಮ್ಮ ವಿಮೋಚನೆಯ ಪರಾಕಾಷ್ಟೆ

ಎಫೆಸದವರಿಗೆ 1:13,14

**ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ. ದೇವರು ಸಂಪಾದಿಸಿಕೊಂಡ ಜನರಿಗೆ ವಿಮೋಚನೆಯಾಗುವದೆಂಬುದಕ್ಕೆ ಪವಿತ್ರಾತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ. ಆ ವಿಮೋಚನೆಯು ದೇವರ ಮಹಿಮೆಗೆ ಎಷ್ಟೋ ಪ್ರಖ್ಯಾತಿಯನ್ನು ಉಂಟು ಮಾಡುವುದು.**

ಎಫೆಸದವರಿಗೆ 4:30

**ದೇವರ ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ.**

ರೋಮಾಪುರದವರಿಗೆ 8:22,23

**ಜಗತ್ತೆಲ್ಲಾ ಇಂದಿನವರೆಗೂ ನರಳುತ್ತಾ ಪ್ರಸವವೇದನೆ ಪಡುತ್ತಾ ಇರುತ್ತದೆಂದು ನಾವು ಬಲ್ಲೆವು ಇದು ಮಾತ್ರವಲ್ಲದೆ ಪ್ರಥಮ ಫಲವಾಗಿರುವ ಪವಿತ್ರಾತ್ಮ ವರವನ್ನು ಹೊಂದಿದ ನಾವಾದರೂ ದೇವ ಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರು ನೋಡುತ್ತಾ ನಮ್ಮೊಳಗೆ ನರಳುತ್ತೇವೆ.**

ನಾವು ಇನ್ನೂ ಆನಂದಿಸಬಹುದಾದಂತ ನಮ್ಮ ವಿಮೋಚನೆಯ ಭಾಗವಿದೆ. ನಮ್ಮ ವಿಮೋಚನೆಯ ದಿನದಲ್ಲಿ ನಮ್ಮ ದೇಹಗಳು ಅಮರತ್ವವನ್ನು ಧರಿಸಲೂ ರೂಪಾಂತರಗೊಳ್ಳುವಾಗ ಇದು ಜರುಗುತ್ತದೆ. ನಾವು ಲೌಕಿಕವಾದ ಮಾತು ತಾತ್ಕಾಲಿಕವಾದುದಿಂದ ತೆಗೆದು ಬಿಡಲ್ಪಡುತ್ತೇವೆ ಮತ್ತು ಆತ್ಮಿಕವಾದದ್ದಕ್ಕೆ ರೂಪಾಂತರಗೊಳ್ಳುತ್ತೇವೆ.

## ಪ್ರತಿಫಲನ

1. ''ಯಾವುದರಿಂದ ವಿಮೋಚನೆಗೊಂಡಿದ್ದೇವೆ'' ಎಂಬ ವಿಷಯಗಳು ಪಟ್ಟಿಯನ್ನು ಪುನರಾವರ್ತಿಸಿ ಮತ್ತು ನಮ್ಮ ದಿನನಿತ್ಯದ ಜೀವಿತಕ್ಕೆ ಇವು ಹೀಗೆ ಅನ್ವಯಿಸುತ್ತವೆ ಎಂಬುದನ್ನು ಚರ್ಚಿಸಿರಿ.
2. ''ಯಾವುದಕ್ಕೆ ವಿಮೋಚನೆಗೊಂಡಿದ್ದೇವೆ'' ಎಂಬ ವಿಷಯಗಳ ಪಟ್ಟಿಯನ್ನು ಪುನರಾವರ್ತಿಸಿ ಮತ್ತು ನಮ್ಮ ದಿನನಿತ್ಯದ ಜೀವಿತಕ್ಕೆ ಅವು ಯಾವ ಮೌಲ್ಯಗಳನ್ನು ತರುತ್ತವೆಂಬುದನ್ನು ಚರ್ಚಿಸಿರಿ.

# 4

# ನಮ್ಮ ವಿಮೋಚನೆಯ ಪ್ರಯೋಜನಗಳನ್ನು ಸ್ವಾಧೀನಪಡಿಸಿಕೊಳ್ಳುವುದು

ದೇವರು ಉಂಟುಮಾಡಿದ ಪ್ರಪಂಚವು ಕ್ರಮ ಮತ್ತು ಉದ್ದೇಶವುಳ್ಳ ಪ್ರಪಂಚವಾಗಿತ್ತು. ಆತನು ಸೃಷ್ಟಿಸಿದವರೆಲ್ಲರಿಗೂ ಧರ್ಮಶಾಸ್ತ್ರವು (ಕಾನೂನುಗಳು ಅಥವಾ ತತ್ವಗಳು) ಆಧಿಪತ್ಯ ನಡೆಸಲು ಇತ್ತು. ಇಂತಹ ನಿಬಂಧನೆಗಳ ಅಸ್ತಿತ್ವವು ದೇವರ ಸೃಷ್ಟಿಯನ್ನು ಕ್ರಮದಲ್ಲಿರಿಸಿತ್ತು. ವಿದ್ಯುಚ್ಛಕ್ತಿ ಕಾನೂನುಗಳಿವೆ, ವ್ಯವಸಾಯದ ನಿಯಮಗಳಿವೆ, ಗುರುತ್ವಾಕರ್ಷಣೆ ನಿಯಮಗಳಿವೆ ಇನ್ನು ಮುಂತಾದವು. ನಮ್ಮ ಸ್ವಾಭಾವಿಕವಾಗಿ ಈ ಗ್ರಹದ ಮೇಲಿನ ಜೀವಿತವು ದೇವರು ಇಟ್ಟಿರುವಂತಹ ಕಾನೂನುಗಳನ್ನು ಉಪಯೋಗಿಸುತ್ತದೆ. ಆದರೂ ಒಂದು ನಿಬಂಧನೆಯಿಂದ ನಾವು ಜೀವಿಸುವುದಿಲ್ಲ, ಇಂತಹ ಕಾನೂನುಗಳ ಸ್ವಭಾವದ ಅನೇಕ ಪ್ರಯೋಜನಗಳನ್ನು ನಾವು ತೆಗೆದುಕೊಂಡಾಗ ನಮ್ಮ ಸ್ವಭಾವಿಕ ಅಸ್ತಿತ್ವವು ಸಾಧ್ಯವಾಗುತ್ತದೆ.

ಆತ್ಮಿಕ ಪ್ರಪಂಚದ-ಅಗೋಚರ ಕ್ಷೇತ್ರದಲ್ಲಿ ಸಂಗತಿಗಳು ಬಹಳ ವಿಭಿನ್ನವಾಗಿರುವುದಿಲ್ಲ. ವಾಸ್ತವವಾಗಿ, ದೊಡ್ಡ ಮಟ್ಟಕ್ಕೆ ಈ ಎರಡು ಪ್ರಪಂಚಗಳು ಸಮಾನಾಂತರವಾಗಿವೆ. ನೈಸರ್ಗಿಕ ಪ್ರಪಂಚವು ಆತ್ಮಿಕ ಪ್ರಪಂಚವನ್ನು ಪ್ರಕಟಿಸುತ್ತದೆ. (ರೋಮಾಪುರದವರಿಗೆ 1:20). ಆದ್ದರಿಂದ ನಿರ್ದಿಷ್ಟವಾಗಿ ಆತ್ಮಿಕ ನಿಬಂಧನೆಗಳಿಂದ (ತತ್ವಗಳು) ದೇವರ ರಾಜ್ಯವು ಆಡಳಿತ ನಡೆಸಲ್ಪಟ್ಟಿದೆ ಎಂಬುದನ್ನು ಸಾಮಾನ್ಯವಾಗಿ ಆತ್ಮಿಕ ಪ್ರಪಂಚದಲ್ಲಿ ನಾವು ಅರಿತುಕೊಳ್ಳಬಹುದು. ನೈಸರ್ಗಿಕ ಪ್ರಪಂಚದಲ್ಲಿ ಕಾನೂನಿನ ಅಧೀನದಲ್ಲಿ ಎಲ್ಲವೂ ಇರುವಂತೆಯೇ, ಆತ್ಮಿಕ ಪ್ರಪಂಚದಲ್ಲಿ ದೇವರು ಸೃಷ್ಟಿಸಿದ ಎಲ್ಲವೂ ದೇವರು ನಿಯೋಜಿಸಿದ ಆತ್ಮಿಕ ನಿಬಂಧನೆಗಳ ಅಧೀನದಲ್ಲಿವೆ.

ಕ್ರಿಸ್ತನಲ್ಲಿ ನಾವುಗಳು ಆತ್ಮಿಕ ಕ್ಷೇತ್ರದಲ್ಲಿ ಎಲ್ಲ ಆತ್ಮಿಕ ಆಶೀರ್ವಾದಗಳೊಡನೆ ಆಶೀರ್ವದಿಸಲ್ಪಟ್ಟಿದ್ದೇವೆ. (ಎಫೆಸದವರಿಗೆ 1:3) ವಿಮೋಚನೆಯ ಅದ್ಭುತವಾದ ಆಶೀರ್ವಾದವು ಇವುಗಳಲ್ಲಿ ಒಂದು. ನಾವು ಕರ್ತನ ವಿಮೋಚನೆಗೊಂಡವರಾಗಿದ್ದೇವೆ.

ವಿಮೋಚನೆಯು ಆತ್ಮಿಕ ಕ್ಷೇತ್ರದಲ್ಲಿ (ಬಹುಶಃ ಸ್ಪಷ್ಟವಾಗಿ ವಿವರಿಸುವುದಾದರೆ, ನಮ್ಮ ಆತ್ಮಿಕವಾದ ''ಬ್ಯಾಂಕ್ ಖಾತೆಗೆ'' ದೇವರು ಇರಿಸಿರುವಂತಹ ಒಂದು ''ಠೇವಣಿ'' ಎಂದು ಹೇಳಬಹುದು ಮತ್ತು ಅದನ್ನು ''ಉಚಿತವಾಗಿ ಹಿಂದೆಗೆಯಬಹುದು.'' ಆನಂದಿಸಲು ಅದು ನಮ್ಮದಾಗಿರುತ್ತದೆ) ನಮಗೆ ಕೊಡಲ್ಪಟ್ಟ ಒಂದು ಆತ್ಮಿಕ ಆಶೀರ್ವಾದವಾಗಿದೆ. ಈ ವಿಷಯದ ಕುರಿತು ನಾವು ಅಧ್ಯಯನ ಮಾಡಿದ್ದೇವೆ ಮತ್ತು ವಿಮೋಚನೆಯು ಏನು ಎಂಬುದನ್ನು ಅರ್ಥ ಮಾಡಿಕೊಂಡಿದ್ದೇವೆ ಮತ್ತು ಆಶೀರ್ವಾದಗಳು ನಮ್ಮವುಗಳಾಗಿವೆ. ನೈಸರ್ಗಿಕ ಕ್ಷೇತ್ರದಲ್ಲಿ ನಮ್ಮ ಆತ್ಮಿಕ ಆಶೀರ್ವಾದಗಳು ತೋರ್ಪಡಿಸುವುದನ್ನು ಅರ್ಥ ಮಾಡಿಕೊಳ್ಳುವುದು ನಮ್ಮ ಸವಾಲು ಆಗಿದೆ ನಮ್ಮ ಭೂಲೋಕದ ಜೀವಿತಗಳನ್ನು ನಾವು ಇನ್ನೂ ಜೀವಿಸುವಾಗ ದೇವರು ನಮಗೆ ಕೊಡಲ್ಪಟ್ಟ ಆಶೀರ್ವಾದಗಳನ್ನು ನಾವು ಹೇಗೆ ಅನುಭವಿಸಬಹುದು.

ಆತ್ಮಿಕ ಮತ್ತು ನೈಸರ್ಗಿಕ ಕ್ಷೇತ್ರಗಳೆರಡನ್ನು ಕಾರ್ಯ ನಿರ್ವಹಣೆ ಮಾಡುವವರಾಗಿದ್ದಾರೆ. ಆದುದರಿಂದ ಆತ್ಮಿಕವಾದದು ಯಾವುದೆಂದು ತೆಗೆದುಕೊಳ್ಳಲೂ ಮತ್ತು ಅದನ್ನು ತೋರ್ಪಡಿಸಲು ಮತ್ತು ನೈಸರ್ಗಿಕದಲ್ಲಿ ಅದನ್ನು ಅನುಭವಿಸಲು ನಾವು ಶಕ್ತರಾಗಿದ್ದೇವೆ.

ಉದಾಹರಣೆಗೆ, ದೈವಿಕ ಸ್ವಸ್ಥತೆ ಮತ್ತು ಆರೋಗ್ಯವು ಆತ್ಮಿಕ ಆಶೀರ್ವಾದಗಳಾಗಿವೆ – ಇವು ದೇವರಿಂದ ಬಂದ ಆಶೀರ್ವಾದಗಳಾಗಿವೆ. ನಾವು ಆತ್ಮಿಕ ಆಶೀರ್ವಾದವನ್ನು ಸ್ವಾಧೀನಪಡಿಸಿಕೊಳ್ಳಲೂ ಶಕ್ತರಾಗಿದ್ದೇವೆ ಮತ್ತು ನಮ್ಮ ಶಾರೀರಿಕ ದೇಹಗಳಲ್ಲಿ ಆರೋಗ್ಯ ಮತ್ತು ಸ್ವಸ್ಥತೆ ಅನುಭವಿಸುತ್ತೇವೆ. ಆದರೂ, ನೈಸರ್ಗಿಕವಾಗಿ ತೋರ್ಪಡಿಸುವಂತಹವುಗಳಾಗಿ ಕಂಡುಬರುವ ಆತ್ಮಿಕ ಆಶೀರ್ವಾದಗಳಿಂದ ಪ್ರಕ್ರಿಯೆಯನ್ನು ಆಳ್ವಿಕೆ ಮಾಡಲೂ ದೇವರು ಇರಿಸಿದಂತಹ ಇರುವ ನಿಬಂಧನೆಗಳು (ತತ್ವಗಳು) ಇವೆ, ಆದ್ದರಿಂದ ಅವುಗಳನ್ನು ಸ್ಪರ್ಶಿಸುವ ಮಾರ್ಗದಲ್ಲಿ ನಾವು ಆನಂದಿಸಬಹುದು.

## ಪ್ರಕಟನೆ ಜ್ಞಾನದ ಸಂಚಿಕೆ

ಯೋಹಾನ 8:31, 32

**ಆಗ ಯೇಸು ತನ್ನನ್ನು ನಂಬಿದ ಯೆಹೂದ್ಯರಿಗೆ ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿದ್ದು ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು ಎಂದು ಹೇಳಿದನು.**

ನಿಯುಮವುದಂತೆ, ಆತ್ಮಿಕ ಸತ್ಯಗಳು ಅನುಭವಿಸುವುದಕ್ಕೆ ಮೊದಲು ತಿಳಿದವುಗಳಾಗಿರಬೇಕು (ವಿನಾಯಿತಿಗಳು ಇರಬಹುದು). ಪ್ರಪಂಚದಾದ್ಯಂತ ಅನೇಕ ಸಭೆಗಳಲ್ಲಿನ ತೊಂದರೆಯು ಅನೇಕ ಸಮಯಗಳಲ್ಲಿನ ತೊಂದರೆಯು ಅನೇಕ ಸಮಯಗಳಲ್ಲಿ ಸತ್ಯಗಳು ಜನರಿಗೆ ತಿಳಿದಿರುವಂತೆ ಮಾಡದೇ ಇರುವುದಾಗಿದೆ. ಅನೇಕ ಸಂದೇಶಕರು ಅವರ ಸಂಘ ಸಂಸ್ಥಾ ಸಂದೇಶ ಪ್ರಸಂಗಿಸುತ್ತಾರೆ. ಅನೇಕ ಸಮಯಗಳಲ್ಲಿ ನಾವು ತುಂಬಾ ''ಬೌದ್ಧಿಕವಾಗಿರುತ್ತೆವೆ'' ನಾವು ಸತ್ಯವನ್ನು ದೂರವಿಡುತ್ತೇವೆ ಮತ್ತು ವಿವೇಚನೆಯುಕ್ತ ಅಥವಾ ಸಮಂಜಸವಾಗಿ ಕಾಣುವಂತಹವುಗಳನ್ನು ಪ್ರಸ್ತುತ ಪಡಿಸುತ್ತಾರೆ. ಅದು ಶುದ್ಧ ಅಜ್ಞಾನವಾಗಲಿ ಅಥವಾ ಮಾರ್ಗ ತಪ್ಪಿದ ಬೌದ್ಧಿಕತೆಯಾಗಲಿ, ಜನರು ಸತ್ಯವನ್ನು ತಿಳಿದುಕೊಳ್ಳುವುದಕ್ಕೆ ಅಡ್ಡಿಪಡಿಸುತ್ತಿದ್ದರೆ, ದೇವರು ಅವರಿಗೆ ಒದಗಿಸಿರುವ ಎಲ್ಲವನ್ನು ಜನರು ಅನುಭವಿಸುವುದನ್ನು ತಡೆಯುತ್ತದೆ. ಕ್ರೈಸ್ತರುಗಳಾಗಿ, ಸತ್ಯವನ್ನು ತಿಳಿದುಕೊಳ್ಳುವುದು ನಮ್ಮ ಬಯಕೆಯಾಗಿದೆ ಯಾಕೆಂದರೆ ಸತ್ಯವನ್ನು ತಿಳಿದುಕೊಳ್ಳುವುದು ಅದನ್ನು ಅನುಭವಿಸುವುದರ ಕಡೆಗೆ ಮೊದಲ ಹೆಜ್ಜೆಯಾಗಿದೆ.

## ಜ್ಞಾನದ ಕೊರತೆ

ಹೋಶೇಯ 4:6ಅ

**ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ.**

ಜ್ಞಾನದ ಕೊರತೆಯು ನಮ್ಮದಾಗಿರುವಂತಹ ಆತ್ಮಿಕ ಆಶೀರ್ವಾದಗಳನ್ನು ನಾವು ಅನುಭವಿಸುವುದನ್ನು ಅಡ್ಡಿ ಪಡಿಸುತ್ತದೆ. ವಾಸ್ತವವಾಗಿ, ನಾವು ಕಳೆದು ಕೊಂಡಿರುವುದನ್ನು ನಾವು ತಿಳಿದಿರುವುದಿಲ್ಲ! ವಿಮೋಚನೆಯ ಕುರಿತ ಸತ್ಯವನ್ನು ನಾವು ತಿಳಿದುಕೊಳ್ಳದವರಾಗಿದ್ದರೆ, ದುರಾತ್ಮನು ನಮ್ಮ ಅಜ್ಞಾನದ ಅನುಕೂಲತೆಯನ್ನು ತೆಗೆದುಕೊಳ್ಳುತ್ತಾನೆ ಮತ್ತು ಬಂಧನದಲ್ಲಿ ನಮ್ಮನ್ನು ಇಟ್ಟುಕೊಳ್ಳುತ್ತಾನೆ. ನಾವು ಸ್ವತಂತ್ರರಾಗಬಹುದೆಂಬುದು ಸಹ ನಮಗೆ ತಿಳಿದಿರುವುದಿಲ್ಲ. ಇದಕ್ಕಾಗಿ ನಾವು ಸತ್ಯವನ್ನು ತಿಳಿಯುವುದು ಅವಶ್ಯವಾಗಿದೆ.

## ಪ್ರಕಟನೆಯ ಕೊರತೆ

ಎಫೆಸದವರಿಗೆ 1:17–19

**ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ಪ್ರಭಾವ ಸ್ವರೂಪನಾದ ತಂದೆಯೂ ಆಗಿರುವಾತನು ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು**

**ಪ್ರಾರ್ಥಿಸುತ್ತೇನೆ ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ಕರಿಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬದನ್ನೂ ದೇವ ಜನರೆಂಬ ಆತನ ಸ್ವಾಸ್ಥ್ಯದ ಮಹಿಮಾತಿಶಯವು ಎಂಥದೆಂಬದನ್ನೂ ನಂಬುವವರಾದ ನಮ್ಮಲ್ಲಿ ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದದ್ದೆಂಬುದನ್ನೂ ನೀವು ತಿಳುಕೊಳ್ಳುವಂತೆ ಅನುಗ್ರಹಿಸಲಿ.**

ಆತ್ಮಿಕ ಜ್ಞಾನವು ಆತ್ಮಿಕ ಜ್ಞಾನೋದಯದ ಮೂಲಕ ಬರುತ್ತದೆ ಇದು ಸಿಹಿಯಾದ ಪವಿತ್ರಾತ್ಮನು-ಜ್ಞಾನದ ಆತ್ಮನು ಮತ್ತು ಪ್ರಕಟನೆಯ ಆತ್ಮನು-ಆತ್ಮಿಕ ಅರ್ಥ ಮಾಡಿಕೊಳ್ಳಲೂ ನಮಗೆ ಜ್ಞಾನೋದಯ ನೀಡುತ್ತಾನೆ.

ನೈಸರ್ಗಿಕ ಮನಸ್ಸು ನೈಸರ್ಗಿಕ ಸಾಮರ್ಥ್ಯದೊಡನೆ ಕಾರಣ ಮತ್ತು ಯೋಚನೆಯು ಪವಿತ್ರಾತ್ಮದಿಂದ ಪ್ರಕಾಶಿತವಾಗಿರಬೇಕು. ಪವಿತ್ರಾತ್ಮನು ಆತನ ಜ್ಞಾನ ಮತ್ತು ಪ್ರಕಟನೆಯ (ಪ್ರಕಟನೆ=ಸತ್ಯದ ಬಯಲು ಮಾಡುವಿಕೆ) ಪಾಲನ್ನು ನಮ್ಮ ಹೃದಯಗಳಿಗೆ (ಆತ್ಮಗಳಿಗೆ) ನೀಡುತ್ತಾನೆ.

ಈ ಜ್ಞಾನ ಮತ್ತು ಪ್ರಕಟನೆಯು ನಮ್ಮ ಪ್ರಾಣಾತ್ಮಗಳಿಂದ ಹೊರ ಮುಂದುವರೆಯಬಹುದು ಮತ್ತು ನಮ್ಮ ಮನಸ್ಸುಗಳ ತಿಳುವಳಿಕೆ ಮತ್ತು ತಾರ್ಕಿಕ ಕ್ರಿಯೆಯನ್ನು ಮಾರ್ಗದರ್ಶಿಸುತ್ತದೆ. ಹೀಗೆ ನಮ್ಮ ಹೃದಯದ ಕಣ್ಣುಗಳು ಜ್ಞಾನೋದಯಗೊಳ್ಳುತ್ತವೆ ಮತ್ತು ನಾವು ಅರಿತುಕೊಳ್ಳಲೂ ಶಕ್ತರಾಗುತ್ತೇವೆ ಮತ್ತು ಆತನನ್ನು ತಿಳಿಯುತ್ತೇವೆ ಮತ್ತು ನಮಗಾಗಿ ಆತನು ಒದಗಿಸಿದ್ದನ್ನು ಅರಿಯುತ್ತೇವೆ.

ನಮ್ಮ ನೈಸರ್ಗಿಕ ಸಾಮರ್ಥ್ಯದ ನಮ್ಮ ಮನಸ್ಸು ತರ್ಕಿಸಲು ಮತ್ತು ಪವಿತ್ರಾತ್ಮನ ಕೆಲಸದ ಪ್ರಕಾಶತೆ ಇಲ್ಲದೇ ಆತ್ಮಿಕ ಸತ್ಯಗಳನ್ನು ನಾವು ಉಪಯೋಗಿಸಲು ಪ್ರಯತ್ನಿಸಿದರೆ ತೊಂದರೆಯು ಉದ್ಭವಿಸುತ್ತದೆ. ಸಾಮಾನ್ಯವಾಗಿ ಸತ್ಯವನ್ನು ದೂರಮಾಡಿ ಹೊರತೆಗೆಯಲ್ಪಟ್ಟಂತಹ ಜ್ಞಾನದಲ್ಲಿ ನಾವು ಕೊನೆಗೊಳ್ಳುತ್ತೇವೆ. ಅಂತಹ ಜ್ಞಾನವು ನೈಸರ್ಗಿಕ ಮನಸ್ಸಿಗೆ ಮೇಲ್ಮನವಿಯಂತೆ ಕಂಡರೂ ಜನರನ್ನು ಸ್ವತಂತ್ರಗೊಳಿಸುವುದಿಲ್ಲ. ದೇವರ ಅದ್ಭುತಕರವಾದ ಬಲವನ್ನು ಅನುಭವಿಸಲು ಜನರಿಗೆ ಇದು ಸಹಾಯ ಮಾಡುವುದಿಲ್ಲ.

## ಮನುಷ್ಯರ ಸಂಪ್ರದಾಯಗಳು

ಮಾರ್ಕ 7:8,9,13

**ನೀವು ದೇವರ ಆಜ್ಞೆಯನ್ನು ಬಿಟ್ಟು ಮನುಷ್ಯರು ಕಲ್ಪಿಸಿದ ಸಂಪ್ರದಾಯವನ್ನು ಹಿಡಿದಿದ್ದೀರಿ ಎಂದು ಹೇಳಿದನು ಆತನು ಇನ್ನೂ ಅವರಿಗೆ ನೀವು ನಿಮ್ಮ ಸಂಪ್ರದಾಯವನ್ನು ಹಿಡಿದು ನಡಿಸುವುದಕ್ಕಾಗಿ ದೇವರ ಆಜ್ಞೆಯನ್ನು ವ್ಯರ್ಥ ಮಾಡುತ್ತೀರಿ. ಹೀಗೆ ನೀವು ಕಲಿಸುತ್ತಾ ಬಂದಿರುವ ಸಂಪ್ರದಾಯದಿಂದ ದೇವರ ವಾಕ್ಯವನ್ನು ನಿರರ್ಥಕ ಮಾಡುತ್ತೀರಿ ಮತ್ತು ಇಂಥ ಕಾರ್ಯಗಳನ್ನು ಇನ್ನೂ ಎಷ್ಟೋ ಮಾಡುತ್ತೀರಿ ಎಂದು ಹೇಳಿದನು**

ಕೊಲೊಸ್ಸೆಯವರಿಗೆ 2:8

**ಕ್ರಿಸ್ತನನ್ನು ಅನುಸರಿಸದೆ ಮನುಷ್ಯರ ಸಂಪ್ರದಾಯಗಳನ್ನೂ ಪ್ರಾಪಂಚಿಕ ಬಾಲಬೋಧೆಯನ್ನೂ ಅನುಸರಿಸುವವರು ನಿಮ್ಮಲ್ಲಿ ಬಂದು ಮೋಸವಾದ ನಿರರ್ಥಕ ತತ್ವಜ್ಞಾನ ಬೋಧನೆಯಿಂದ ನಿಮ್ಮ ಮನಸ್ಸನ್ನು ಕೆಡಿಸಿ ನಿಮ್ಮನ್ನು ವಶಮಾಡಿಕೊಂಡಾರು, ಎಚ್ಚರಿಕೆಯಾಗಿರ್ರಿ.**

ಸಂಪ್ರದಾಯಗಳು, ಸ್ವತಃ ತಪ್ಪಾದವುಗಳಲ್ಲ. ಒಳ್ಳೆಯ ಸಂಪ್ರದಾಯಗಳಿವೆ. ನಮಗೆ ಹಸ್ತಾಂತರಿಸಲಾದಂತಹ ಬೋಧನೆಗಳು/ಅಭ್ಯಾಸಗಳಿವೆ-ಅವುಗಳನ್ನು ನಾವು ಮುಂದುವರೆಸಬೇಕು. ಅಪೊಸ್ತಲನಾದ ಪೌಲನು ಥೆಸಲೋನಿಕದವರಿಗೆ ಹೀಗೆ ಹೇಳಿದ್ದಾನೆ, ''ನಿಮಗೆ ತಿಳಿಸಿದ ಬೋಧನೆಗಳನ್ನು ನೀವು ಭದ್ರವಾಗಿ ಹಿಡಿದುಕೊಂಡಿರ್ರಿ'' (2 ಥೆಸಲೋನಿಕದವರಿಗೆ 2:15) ಪೌಲನು ಹೀಗೆ ಅವರನ್ನು ಹುರಿದುಂಬಿಸಿದನು ''ಸಹೋದರರರೇ ನಮ್ಮಿಂದ ಹೊಂದಿದ ಬೋಧನೆಯನ್ನು ಅನುಸರಿಸದೆ ಅಕ್ರಮವಾಗಿ ನಡೆಯುವ ಪ್ರತಿ ಸಹೋದರನಿಗೆ ನೀವು ದೂರವಾಗಿರಬೇಕೆಂದು'' (2 ಥೆಸಲೋನಿಕದವರಿಗೆ 3:6) ಆದರೂ ನಾವು ಏನನ್ನು ಮಾಡುತ್ತಿದ್ದೇವೆ ಮತ್ತು ಕಲಿಸುತ್ತಿದ್ದೇವೆ ಎಂಬುದರು ತಿಳುವಳಿಕೆ/ಒಂದು ವೈಯಕ್ತಿಕ ಪ್ರಕಟನೆ ಹೊಂದಿರುವುದು ನಮಗೆ ಪ್ರಾಮುಖ್ಯವಾಗಿದೆ. ಇದು ದೈವಿಕ ಸಂಪ್ರದಾಯಗಳಲ್ಲಿ ಜೀವಿತ ಮತ್ತು ಬಲವನ್ನು ಪಾಲಿಸುತ್ತವೆ.

ಇನ್ನೊಂದು ಕಡೆಯಲ್ಲಿ ''ಮನುಷ್ಯರ ಸಂಪ್ರದಾಯಗಳ'' ಸಾಕಷ್ಟು ಬೋಧನೆಗಳು ಮತ್ತು ಅಭ್ಯಾಸಗಳು ದೇವರ ವಾಕ್ಯದ ಬಲವನ್ನು ಇಲ್ಲದಾಗಿಸುವಂತಹವುಗಳಿವೆ. ಅವುಗಳು ಪಂಗಡಗಳ ಬೋಧನೆಗಳು / ಅಭ್ಯಾಸಗಳು, ಸಾಂಸ್ಕೃತಿಕ ತತ್ವಶಾಸ್ತ್ರಗಳು/ ಅಭ್ಯಾಸಗಳು ಇನ್ನೂ ಮುಂತಾದವುಗಳು ಸಭೆಗಳ ಒಳನುಸುಳಿದೆ ಮತ್ತು ದೇವರ ಜನರನ್ನು ಸೆರೆಯಾಳುಗಳನ್ನಾಗಿಸಿವೆ. ಅಂತಹ ಸಂಪ್ರದಾಯಗಳನ್ನು ಹರಿದು ಹಾಕುವ

ಮತ್ತು ಕ್ರಿಸ್ತನ ಸತ್ಯದಲ್ಲಿ ಜನರು ನಡೆಯುವಂತೆ ಸಹಾಯ ಮಾಡುವ, ವಾಕ್ಯದ ಸತ್ಯವನ್ನು ಪ್ರಸ್ತುತಪಡಿಸುವಂತಹ ಜವಾಬ್ದಾರಿಯನ್ನು ಸೇವಕರುಗಳು ಹೊಂದಿದ್ದಾರೆ. ಕ್ರೈಸ್ತರಾಗಿ, ನಮ್ಮ ಸಂಪ್ರದಾಯಗಳಿಗಿಂತ ಮೇಲಾಗಿ ಇವುಗಳು ನಮಗೆ ಎಷ್ಟು ಪ್ರಿಯವಾಗಿದ್ದರೂ ಸಹ ಸತ್ಯವನ್ನು ಮೇಲೆರಿಸುವಂತಹ ಆಯ್ಕೆ ನಾವು ಮಾಡಬೇಕು.

## ಸತ್ಯವನ್ನು ಆರಿಸಿಕೊಳ್ಳುವುದು

ನಮ್ಮ ವಿಮೋಚನೆಯ ಲಾಭಗಳನ್ನು ಪಡೆದುಕೊಳ್ಳಲೂ ಮೊದಲ ಹೆಜ್ಜೆಯು, ಸತ್ಯವನ್ನು ಹುಡುಕುವುದು, ತಿಳಿಯುವುದು ಮತ್ತು ಅಂಗೀಕರಿಸುವುದಾಗಿದೆ. ನಮ್ಮ ವಿಮೋಚನೆಯ ಸಂಪೂರ್ಣ ಲಾಭಗಳ ಕುರಿತು ಸತ್ಯವನ್ನು ನಾವು ತಿಳಿಯದಿದ್ದರೆ ಇದನ್ನು ನಾವು ಅನುಭವಿಸಲು ಸಾಧ್ಯವಿಲ್ಲ. ಪವಿತ್ರಾತ್ಮನ ಪ್ರಕಾಶಮಯ ಕಾರ್ಯದ ಮೂಲಕವಾಗಿ ಸತ್ಯದ ಜ್ಞಾನವು ಬರುತ್ತದೆ. ಆದುದರಿಂದ ಆತನ ಸೇವೆಯನ್ನು ನಮ್ಮ ಜೀವಿತದಲ್ಲಿ ಹುಡುಕಬೇಕು. ನಮ್ಮ ಪಂಗಡ ಅಥವಾ ಸಾಂಸ್ಕೃತಿಕ ಸಂಪ್ರದಾಯಗಳು ವಾಕ್ಯದ ಸತ್ಯಕ್ಕೆ ವಿರುದ್ಧವಾಗಿದ್ದರ ಆಮೇಲೆ ಅಂತಹ ಸಂಪ್ರದಾಯಗಳನ್ನು ತ್ಯಜಿಸುವಂತಹ ಆಯ್ಕೆ ಮಾಡಬೇಕು.

## ದೇವರೊಂದಿಗೆ ಅನ್ಯೋನ್ಯತೆಯಲ್ಲಿ ನಡೆಯುವುದು

ಕೀರ್ತನೆಗಳು 91:1

**ಪರಾತ್ಪರನ ಮರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು.**

ನಾವು ದೇವರ ಪ್ರಸನ್ನತೆಯಲ್ಲಿ ನಡೆಯುವಾಗ ಮಾತ್ರವೇ, ದೇವರ ವಾಗ್ದಾನಗಳು ನೆರವೇರುವವು ಎಂಬುದಾಗಿ ನಾವು ಭರವಸೆ ಹೊಂದಿದ್ದೇವೆ. ಮಹೋನ್ನತವಾದ ಆಶ್ರಯದ ರಹಸ್ಯ ಸ್ಥಳವು-ದೇವರ ವಾಸಸ್ಥಳವಾಗಿದೆ. ಇಲ್ಲಿ ದೇವರ ಪ್ರಸನ್ನತೆಯಿರುತ್ತದೆ. ಇದು ದೇವರೊಂದಿಗಿನ ಅನ್ಯೋನ್ಯತೆಯ ಸ್ಥಳವಾಗಿದೆ. ದೇವರ ಪ್ರಸನ್ನತೆಯಲ್ಲಿ ವಾಸಿಸುವಂತಹ ವ್ಯಕ್ತಿಯು (ನಿರಂತರವಾಗಿ ಜೀವಿಸುವುದು) ಅದು ದೇವರೊಡನೆ ಅನ್ಯೋನ್ಯತೆಯಲ್ಲಿ ನಿರಂತರವಾಗಿ ನಡೆಯುವಂತಹವನು, ಸರ್ವಶಕ್ತನಾದ ದೇವರ ಮೇಲ್ವಿಚಾರಣೆ, ಸಂಪೂರ್ಣ ಸಂರಕ್ಷಣೆ, ನೆರಳಿನ ಹೊದಿಕೆಯ ಅಡಿಯಲ್ಲಿ ಈ ವ್ಯಕ್ತಿ ವಿಶ್ರಮಿಸುತ್ತಾನೆ. ಅಂತಹ ವ್ಯಕ್ತಿಯು ಕೀರ್ತನೆಗಳು 91ರಲ್ಲಿ ವ್ಯಾಖ್ಯಾನಿಸಿದಂತಹ ಮಹತ್ತಾದ ಆಶೀರ್ವಾದಗಳನ್ನು ಅನುಭವಿಸಲು ಶಕ್ತನಾಗುತ್ತಾನೆ. ಇವು ನಮ್ಮ ವಿಮೋಚನೆಯ ಲಾಭಗಳಲ್ಲಿ ಇರುವವುಗಳಾಗಿದೆ. ಆತನು ನಮಗಾಗಿ ಒದಗಿಸಿದಂತಹ ವಿಮೋಚನೆಯ ಸಂಪೂರ್ಣ ಅನುಕೂಲತೆಗಳನ್ನು ಆನಂದಿಸಲು

ಮತ್ತು ಆತನ ವಾಗ್ದಾನಗಳನ್ನು ಅನುಭವಿಸಬೇಕಾದರೆ ನಾವು ದೇವರೊಂದಿಗೆ ಅನ್ಯೋನ್ಯತೆಯಲ್ಲಿ ನಡೆಯುವುದು ಅವಶ್ಯಕವಾಗಿದೆ.

## ನೀತಿವಂತಿಕೆಯಲ್ಲಿ ನಡೆಯುವುದು

1ಯೋಹಾನ 5:18

**ದೇವರಿಂದ ಹುಟ್ಟಿರುವವನು ಪಾಪ ಮಾಡುವವನಲ್ಲವೆಂಬುದು ನಮಗೆ ಗೊತ್ತದೆ ದೇವರಿಂದ ಹುಟ್ಟಿದಾತನು ಅವನನ್ನು ಕಾಪಾಡುವನು ಕೆಡುಕನು ಅವನನ್ನು ಹಿಡಿಯುವುದಿಲ್ಲ.**

ಆದಿಕಾಂಡ 4:6,7

**ಆಗ ಯೆಹೋವನು ಅವನಿಗೆ ಯಾಕೆ ಕೋಪಿಸಿಕೊಂಡಿ? ನಿನ್ನ ತಲೆ ಯಾಕೆ ಬೊಗ್ಗಿತು? ಒಳ್ಳೇ ಕೆಲಸ ಮಾಡಿದರೆ ನಿನ್ನ ತಲೆ ಎತ್ತಲ್ಪಡುವುದಲ್ಲವೇ ಅಲ್ಲದಿದ್ದರೆ ಪಾಪವು ನಿನ್ನನ್ನು ಹಿಡಿಯಬೇಕೆಂದು ಬಾಗಿಲಲ್ಲಿ ಹೊಂಚಿಕೊಂಡಿರುವುದು ಆದರೂ ನೀನು ಅದನ್ನು ವಶಮಾಡಿಕೊಳ್ಳಬೇಕು ಎಂದು ಹೇಳಿದನು.**

ದೈವಿಕವಾದ ಒಂದು ಜೀವಿತವನ್ನು ಜೀವಿಸುವುದು ನಮ್ಮ ಜೀವಿತಗಳ ಮೇಲೆ ದೇವರ ಸಂರಕ್ಷಣೆಯ ಕ್ಷೇತ್ರ-ದೇವರ ''ನೆರಳಿನ'' ಕ್ಷೇತ್ರದೊಳಗೆ ನಮ್ಮನ್ನು ಇರಿಸುತ್ತದೆ. ಕರ್ತನಾದ ಯೇಸುವು ನಮ್ಮನ್ನು ಸುರಕ್ಷಿತವಾಗಿರಿಸುತ್ತಾನೆ ದುರಾತ್ಮನು ನಮಗೆ ಕೇಡು ಮಾಡಲಾಗುವುದಿಲ್ಲ. ನಾವು ಪಾಪ ಮಾಡಿದರೆ ಮತ್ತು ಅದರಲ್ಲಿಯೇ ಮುಂದುವರೆದರೆ, ಇದು ದುರಾತ್ಮನ ಕಾರ್ಯಕ್ಕೆ ನಮ್ಮನ್ನು ಗುರಿ ಮಾಡುತ್ತದೆ. ಕರ್ತನು ಕಾಯಿನನಿಗೆ ಹೇಳಿದ್ದರಿಂದ ನೋಡಿದರೆ ನಮ್ಮ ಜೀವಿತಗಳಿಗೆ ಪ್ರವೇಶಿಸಲು ಪಾಪವು ಬಹಳ ಆತುರದಿಂದ, ಮಲಗಿರುವ ಅಥವಾ ಎನ್.ಐ.ವಿ ಬೈಬಲ್ ಹೇಳುವಂತೆ ಬಾಗಿಲಿನ ಬಳಿ ''ಮುದುಡಿಕೊಂಡಿದೆ'' ಎಂಬ ರೀತಿಯಲ್ಲಿ ಅದು ಇರುವುದಾಗಿದೆ ಎಂಬುದಾಗಿ ವಿವರಿಸಲಾಗಿದೆ. ಹಾಗಿದ್ದರೂ, ಸರಿಯಾದದ್ದನ್ನು ಮಾಡುವುದರಿಂದ ಬಾಗಿಲುಗಳನ್ನು ಮುಚ್ಚಿಕೊಳ್ಳುವ ದೇವರಿಂದ-ಕೊಡಲ್ಪಟ್ಟ ಸಾಮರ್ಥ್ಯ ನಾವು ಹೊಂದಿದ್ದೇವೆ.

## ದೇವರಲ್ಲಿ ನಂಬಿಕೆಯನ್ನು ಅಭ್ಯಾಸಿಸುವುದು

ಯಾಕೋಬನು 1:5-7

**ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ. ಅದು ಅವನಿಗೆ ದೊರಕುವುದು ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ**

**ಕೊಡುವವನಾಗಿದ್ದಾನೆ ಸ್ವಲ್ಪವೂ ಸಂದೇಹಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳಬೇಕು. ಸಂದೇಹ ಪಡುವವನೋ ಗಾಳಿಯಿಂದ ಬಡಿಯಲ್ಪಟ್ಟು ಸಮುದ್ರದ ತೆರೆಯಂತೆ ಅಲೆಯುತ್ತಿರುವನು ಆ ಮನುಷ್ಯನು ತಾನು ಕರ್ತನಿಂದ ಏನಾದರೂ ಹೊಂದುವೆನೆಂದು ಭಾವಿಸದೆ ಇರಲಿ.**

ನಮ್ಮ ವಿಮೋಚನೆಯ ಸತ್ಯವನ್ನು ನಾವು ಅರಿತುಕೊಂಡಾಗ ಅದರಲ್ಲಿ ಇರುವಂತದ್ದು ಮತ್ತು ಆಶೀರ್ವಾದಗಳು ನಮ್ಮದಾಗುತ್ತವೆ ಮತ್ತು ನಾವು ದೇವರೊಂದಿಗೆ ಅನ್ಯೋನ್ಯತೆಯಲ್ಲಿ ಮತ್ತು ನೀತಿವಂತಿಕೆಯಲ್ಲಿ ನಡೆಯುವಾಗ ಆತನ ವಾಕ್ಯವು ನಿಜ ಸ್ಥಿತಿಯಲ್ಲಿ ತೋರ್ಪಡಿಸಲು ದೇವರಲ್ಲಿನ ನಂಬಿಕೆಯಲ್ಲಿ ವಿಸ್ತಾರಗೊಳ್ಳಬೇಕು. ನಂಬಿಕೆಯಿಂದಲೇ ದೇವರಿಂದ ನಾವು ಪಡೆದುಕೊಳ್ಳತ್ತೇವೆ. ಆತ್ಮಿಕ ಕ್ಷೇತ್ರದಲ್ಲಿ ನಮಗೆ ದೇವರು ಕೊಟ್ಟಿರುವುದನ್ನು ನಂಬಿಕೆಯಿಂದ ತೆಗೆದುಕೊಳ್ಳುತ್ತೇವೆ ಮತ್ತು ಅದನ್ನು ನೈಸರ್ಗಿಕ ಕ್ಷೇತ್ರಕ್ಕೆ ಜಾರಿಗೊಳಿಸುತ್ತೇವೆ. ನಂಬಿಕೆಯ ಕಾರ್ಯ ವೈಖರಿಗಳನ್ನು ಆಧಿಪತ್ಯ ನಡೆಸುವಂತಹ ತತ್ವಗಳಿವೆ. ನಂಬಿಕೆಯು ದೇವರ ವಾಕ್ಯದಿಂದ ಜನಿಸುತ್ತದೆ. ನಮ್ಮ ಹೃದಯದಲ್ಲಿ ನಂಬಿಕೆಯೊಡನೆ ನಮ್ಮ ಜೀವಿತದ ಪರಿಸ್ಥಿತಿಗಳ ಮೇಲೆ ಅಧಿಕಾರಯುಕ್ತವಾಗಿ ಮಾತಾಡಬಹುದು ಮತ್ತು ಅವುಗಳು ದೇವರ ವಾಕ್ಯದೊಡನೆ ಜೋಡಣೆ ಗೊಳಲೂ ಆದೇಶಿಸಬಹುದು. ನಮ್ಮ ಹೃದಯದಲ್ಲಿ ನಂಬಿಕೆಯೊಡನೆ, ಅನಾರೋಗ್ಯಕ್ಕೆ ಮಾತಾನಾಡಿ ಅದು ಬಿಟ್ಟು ಹೋಗಲೂ ಆಜ್ಞಾಪಿಸಬಹುದು ಯಾಕೆಂದರೆ ಯೇಸುವು ನಮ್ಮ ಅನಾರೋಗ್ಯ ಮತ್ತು ಅಸ್ವಸ್ಥತೆಗಳನ್ನು ವಿಮೋಚನೆಗೊಳಿಸಿದ್ದಾನೆ.

ದೇವರ ವಾಗ್ದಾನದಲ್ಲಿನ ನಂಬಿಕೆಯೊಡನೆ ಸಂಪತ್ತನ್ನು ಗಳಿಸಲು ಬಲವನ್ನು ನಮಗೆ ಕೊಡುವಾತನು ಆತನಾಗಿದ್ದಾನೆ. (ಧರ್ಮೋಪದೇಶಕಾಂಡ 8:18), ನಮ್ಮ ಹಣವನ್ನು ಸಂಪಾದಿಸಲು ಮತ್ತು ನಾವು ಕೆಲಸ ಮಾಡಲೂ ಸರಿಯಾದ ಕೆಲಸಗಳನ್ನು ''ಅಸ್ತಿತ್ವಕ್ಕೆ ಬರುವಂತೆ ಕರೆಯಬಹುದು''. ನಮ್ಮ ಹೃದಯದಲ್ಲಿನ ನಂಬಿಕೆಯೊಡನೆ ನಮ್ಮ ಕುಟುಂಬಗಳು ಮತ್ತು ಮನೆಗಳಲ್ಲಿ ಶಾಂತಿ ಮತ್ತು ಸಹಬಾಳ್ವೆ ಜಾರಿಗೊಳಿಸಬಹುದು ವಾಸ್ತವವಾಗಿ ಯೇಸು ಹೀಗೆ ಹೇಳಿದ್ದಾರೆ ''ನೀವು ನಂಬಿಕೆ ಇಟ್ಟಿದ್ದರೆ.... ಯಾವುದು ನಿಮಗೆ ಅಸಾಧ್ಯಕರವಲ್ಲ'' (ಮತ್ತಾಯ 17:20) ಇನ್ನೊಂದು ಕಡೆಯಲ್ಲಿ ದೇವರ ವಾಕ್ಯವು ಹೇಳುವುದೇನೆಂದರೆ, ದೇವರಲ್ಲಿ ನಂಬಿಕೆಯಿಡದೆ ಯಾವುದನ್ನು ಪಡೆದುಕೊಳ್ಳುವುದು ಅಸಾಧ್ಯಕರವಾಗಿದೆ. ನಮಗೆ ಬೋಧಿಸಲ್ಪಟ್ಟಂತಹ ಸತ್ಯದಲ್ಲಿನ ನಂಬಿಕೆಯಲ್ಲಿ ಅಭ್ಯಾಸಿಸದಿದ್ದರೆ ನಾವು ಸತ್ಯವನ್ನು ಅದನ್ನು ಅನುಭವಿಸುವುದರಿಂದ ನಮ್ಮನ್ನು ತಡೆಗಟ್ಟುತ್ತದೆ.

## ವೈರಿಯನ್ನು ಎದುರಿಸುವುದು

1 ಪೇತ್ರನು 5:8,9

**ಸ್ವಸ್ಥ ಚಿತ್ತರಾಗಿರಿ ಎಚ್ಚರವಾಗಿರಿ ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ ನೀವು ನಂಬಿಕೆಯಲ್ಲಿ ದೃಢವಾಗಿದ್ದು ಅವನನ್ನು ಎದುರಿಸಲಿ ಲೋಕದಲ್ಲಿರುವ ನಿಮ್ಮ ಸಹೋದರರೂ ಅಂಥ ಬಾಧೆಗಳನ್ನೇ ಅನುಭವಿಸುತ್ತಿದ್ದಾರೆಂದು ನಿಮಗೆ ತಿಳಿದದೆಯಲ್ಲಾ.**

ಎಫೆಸದವರಿಗೆ 4:27

**ಸೈತಾನನಿಗೆ ಅವಕಾಶ ಕೊಡಬೇಡಿರಿ.**

ನಾವು ಈ ಲೋಕದಲ್ಲಿ ಇರುವವರೆಗೂ, ದುರಾತ್ಮನಿಗೆ ವಿರುದ್ಧವಾಗಿ ಯಾವಾಗಲೂ ನಮ್ಮನ್ನು ಸಂರಕ್ಷಣೆ ಮಾಡಿಕೊಳ್ಳಬೇಕು. ನಮ್ಮ ವಿಮೋಚನೆಯನ್ನು ನಾವು ಅನುಭವಿಸುವುದರಿಂದ ದೂರವಿಡುವ ಮತ್ತು ದೇವರ ಆಶೀರ್ವಾದಗಳನ್ನು ಕದ್ದುಕೊಳ್ಳುವ ಪ್ರಯತ್ನವನ್ನು ದುರಾತ್ಮನು ಮಾಡುತ್ತಾನೆ. ಅವನು ನಮ್ಮನ್ನು ಕೆಲವು ಭಕ್ತಿಹೀನ ಹವ್ಯಾಸಕ್ಕೆ ಪ್ರಲೋಭಿಸಲು ಪ್ರಯತ್ನಿಸುತ್ತಾನೆ ಅದು ನಮ್ಮನ್ನು ಶೋಚನೀಯವಾಗಿರುತ್ತದೆ ಮತ್ತು ಬಹುಶಃ ಇತರೆ ಕ್ಷೇತ್ರಗಳಲ್ಲಿ ಹಾಳಾಗಲೂ ಕಾರಣವಾಗುತ್ತದೆ ಅಥವಾ ನಮ್ಮ ದೇಹಗಳನ್ನು ಅನಾರೋಗ್ಯ ಮತ್ತು ಅಸ್ವಸ್ಥತೆಗಳ ಮೂಲಕ ನಾಶಮಾಡಲೂ ಪ್ರಯತ್ನಿಸುತ್ತಾನೆ ಅಥವಾ ನಾವು ಮಾಡಬೇಕೆಂಬುದಾಗಿ ದೇವರ ಅಪೇಕ್ಷಿಸುವ ಕಾರ್ಯಗಳನ್ನು ನಾವು ಮಾಡದಂತೆ ತಡೆದು ಹಣಕಾಸಿನ ಕರಾರಿನೊಳಗೆ ಬಂಧಿಸಿ ಇರಿಸುವುದು ಅಥವಾ ಪಾಪದ ಮೂಲಕವಾಗಿ ನಮ್ಮ ಕುಟುಂಬಗಳನ್ನು ನಾಶ ಮಾಡುವುದು ಅಥವಾ ನಮಗೆ ವಿರೋಧವಾಗಿ ಹಿಂಸೆಯನ್ನು ಕಳುಹಿಸುವುದು ಮತ್ತು ನಮ್ಮ ವಿರುದ್ಧ ವಿರೋಧವನ್ನೆಬ್ಬಿಸುವ ಇನ್ನೂ ಮುಂತಾದ ಕಾರ್ಯಗಳು. ನಮಗೆ ಎದುರಾಗಿ ವೈರಿಯ ಬರಲು ಯಾವ ದಾರಿಯನ್ನು ಆರಿಸಿಕೊಂಡಿದ್ದಾನೆಂಬುದು ಮುಖ್ಯವಲ್ಲ ''ನಂಬಿಕೆಯಲ್ಲ ಸ್ವಸ್ಥಚಿತ್ತರಾಗಿದ್ದು ಅವನನ್ನು ಎದುರಿಸುವವರು'' ನಾವಾಗಿರಬೇಕು. ನಮ್ಮ ಜೀವಿತದಲ್ಲಿ ದುರಾತ್ಮನು ಯಾವುದೇ ಹೆಜ್ಜೆಯನ್ನಿಡಲೂ ಅವಕಾಶ ನೀಡಬಾರದು ಭಯವುಳ್ಳವರಾಗಿ ಕಂಡು ಬರುವ ಬದಲಾಗಿ ದೇವರಲ್ಲಿ ಮತ್ತು ಆತನ ವಾಕ್ಯದಲ್ಲಿನ ನಿಮ್ಮ ನಂಬಿಕೆಯಲ್ಲಿ ದೃಢವಾಗಿ ನಿಂತುಕೊಳ್ಳಿರಿ. ಜನರಿಗೆ ವಿರುದ್ಧವಾಗಿ ಕಹಿ ಮತ್ತು ಕೋಪಗೊಳ್ಳುವುದರ ಬದಲಾಗಿ ಸಂದರ್ಭಗಳು ಮತ್ತು ಪರಿಸ್ಥಿತಿಗಳ ಮೇಲೆ ದೇವರ ವಾಕ್ಯಗಳನ್ನು ನುಡಿಯಿರಿ. ನಮ್ಮ ಬಾಯಿಂದ ಮಾತಾಡಿದಂತಹ ದೇವರ ವಾಕ್ಯಗಳಾದ, ಆತ್ಮನ ಆಯುಧಗಳನ್ನು ಉಪಯೋಗಿಸಿ ಮತ್ತು ಹಿಂದಿರುಗಿ ಹೋರಾಡಬೇಕು.

ಅನೇಕ ಕ್ರೈಸ್ತರು ಬಿದ್ದು ಹೋಗುವಂತಹ ಕ್ಷೇತ್ರವು ಇದಾಗಿದೆ. ಅವರಿಗೆ ವಿರುದ್ಧವಾಗಿ ವೈರಿಯು ಬರುವಂತಹ ಕೂಡಲೇ ಅವರು ಶಾಂತರಾಗುತ್ತಾರೆ. ನಮ್ಮ ವಿಮೋಚನೆಯ ಆಶೀರ್ವಾದದಲ್ಲಿ ನಡೆಯಲು ಸಾಧ್ಯವಿಲ್ಲ ಎಂಬುದಾಗಿ ಯೋಚಿಸುತ್ತಾರೆ. ಬಹುಶಃ ನಾವು ಆಶೀರ್ವಾದ ಹೊಂದಬಾರದು ಎಂಬುದಾಗಿ ದೇವರು ಆಶಿಸುತ್ತಾನೆ ಎಂಬುದಾಗಿ ಅವರು ಯೋಚಿಸುತ್ತಾರೆ. ಇದರ ಬದಲಿಗೆ, ನಾವು ವೈರಿಯನ್ನು ಎದುರಿಸಬೇಕು ಮತ್ತು ಯೇಸುಕ್ರಿಸ್ತನು ನಮಗೆ ಒದಗಿಸಲೂ ಮರಣ ಹೊಂದಿದ್ದನ್ನು ಸ್ವಾಧೀನ ಪಡಿಸಿಕೊಳ್ಳಬೇಕು.

## ಆಕ್ರಮಣಕಾರಿಯಾಗಿ ಮತ್ತು ತಾಳ್ಮೆಯಿಂದ ಪ್ರಯೋಜನಗಳನ್ನು ಸ್ವಾಧೀನಪಡಿಸಿಕೊಳ್ಳುವುದು

ಮತ್ತಾಯ 11:12

**ಇದಲ್ಲದೆ ಸ್ನಾನಿಕನಾದ ಯೋಹಾನನ ಕಾಲದಿಂದ ಈವರೆಗೂ ಪರಲೋಕ ರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ ಬಲತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನ ಮಾಡಿಕೊಳ್ಳುತ್ತಾರೆ.**

ಇಬ್ರಿಯರಿಗೆ 6:12

**ನೀವು ಮಂದಗತಿಗಳಾಗಿರದೆ ಯಾರು ವಾಗ್ದಾನಗಳನ್ನು ನಂಬಿ ಅವುಗಳ ಫಲಕ್ಕೋಸ್ಕರ ಬಹು ದಿವಸಗಳವರೆಗೂ ಕಾದಿದ್ದು ಆ ಫಲವನ್ನು ಹೊಂದುತ್ತಾರೋ ಅವರನ್ನು ಅನುಸರಿಸುವವರಾಗಬೇಕೆಂದು ಕೋರುತ್ತೇನೆ.**

ಇಬ್ರಿಯರಿಗೆ 10:35,36

**ಹಾಗಾದರೆ ನಿಮ್ಮ ಧೈರ್ಯವನ್ನು ಬಿಟ್ಟು ಬಿಡಬೇಡಿರಿ ಅದಕ್ಕೆ ಮಹಾಪ್ರತಿಫಲ ಉಂಟು ದೇವರ ಚಿತ್ತವನ್ನು ನೆರವೇರಿಸಿ ವಾಗ್ದಾನದ ಫಲವನ್ನು ಹೊಂದಬೇಕಾದರೆ ನಿಮಗೆ ತಾಳ್ಮೆಬೇಕು.**

ದೇವರ ಆಶೀರ್ವಾದವು ಉಚಿತವಾಗಿ ಕೊಡಲ್ಪಟ್ಟಿವೆ ಆದಾಗ್ಯೂ ಅವು ಅಗ್ಗವಾಗಿಲ್ಲ; ಆತ್ಮಿಕವಾಗಿ ಸೋಮಾರಿಯಾದ ಜಗರಿಗೆ ಅಲ್ಲ. ಅವುಗಳು ಒಂದು ದೊಡ್ಡ ಮೊತ್ತದಿಂಡ ಒದಗಿಸಲ್ಪಟ್ಟಿವೆ – ಕಲ್ವಾರಿ ಶಿಲುಬೆಯ ಮೇಲೆ ದೇವರ ಸ್ವಂತ ಮಗನ ಮರಣ ಮತ್ತು ಆತನ ವಿಜಯಶಾಲಿಯಾದ ಪುನರುತ್ಥಾನದ ಮೂಲಕ ಒದಗಿಸಲ್ಪಟ್ಟಿವೆ. ವಾಗ್ದಾನಗಳನ್ನು ಬಾಧ್ಯವಾಗಿ ಪಡೆಯುವ ನಮ್ಮ ಭಾಗದಲ್ಲಿ ಇದು ತಾಳ್ಮೆಯನ್ನು ಮತ್ತು ಆಕ್ರಮಣಕಾರಿಯನ್ನು ತೆಗೆದುಕೊಳ್ಳುತ್ತದೆ. ವಿಮೋಚನೆಯ ಕುರಿತು ಸತ್ಯವನ್ನು

ಕಂಡು ಹಿಡಿಯುವುದು ಮತ್ತು ದೇವರೊಂದಿಗೆ ಅನ್ಯೋನ್ಯತೆಯಲ್ಲಿ ಜೀವನ ಪ್ರಾರಂಭಿಸುವುದು ಮತ್ತು ಪವಿತ್ರವಾದ ಜೀವಿತ ಜೀವಿಸುವುದರಿಂದ ಪ್ರಯಾಣ ಪ್ರಾರಂಭಿಸಲೂ ಸಾಕಾಗುವುದಿಲ್ಲ. ಇದು ನಾವು ಹೊಂದಿಕೊಂಡಿರುವ ಸತ್ಯದಲ್ಲಿ ನಂಬಿಕೆಯ ಸ್ಥಿರವಾದ ಅಭ್ಯಾಸದಿಂದ ಅನುಸರಿಸುವಂತದ್ದಾಗಿರಬೇಕು. ದಿನದಿಂದ ದಿನಕ್ಕೆ, ವರ್ಷದಿಂದ ವರ್ಷಕ್ಕೆ ಅದರಲ್ಲಿ ಮುಂದುವರೆಯುತ್ತಿರಬೇಕು. ವಿಶೇಷವಾಗಿ ರಾತ್ರೋರಾತ್ರಿ ವಿಷಯಗಳು ಬದಲಾಗುವುದಿಲ್ಲವಾದ್ದರಿಂದ ನಾವು ಸತತವಾಗಿ ಪ್ರಯತ್ನಿಸಬೇಕು. ನೀವು ಒಂದು ನಿರ್ದಿಷ್ಟವಾದ ಕಾಯಿಲೆಯಿಂದ ಸ್ವಸ್ಥತೆ ಹೊಂದಲೂ ದೇವರನ್ನು ನಂಬುತ್ತೀರಬಹುದು ಆದರೆ ಒಂದು ದಿನ ಅಥವಾ ಎರಡನೇ ದಿನದಲ್ಲಿ ಸ್ವಸ್ಥತೆಯು ಉಂಟಾಗುವುದಿಲ್ಲ. ಬಿಟ್ಟು ಕೊಡುವುದಕ್ಕೆ ಇದು ಸಮಯವಲ್ಲ. ಒಮ್ಮೆ ನೀವು ದೇವರ ಚಿತ್ತವನ್ನು ಮಾಡಿದಾಗ, ಅದನ್ನು ಮಾಡುತ್ತಲೇ ಇರಬೇಕು. ಸತತವಾಗಿ ಪ್ರಯತ್ನಿಸುತ್ತೀರಿ. ಆತನು ವಾಗ್ದಾನ ಮಾಡಿದ್ದನ್ನು ನೀವು ಪಡೆದುಕೊಳ್ಳುತ್ತೀರಿ.

## ದೇವರು ಕೊಟ್ಟಂತಹ ತತ್ವಗಳನ್ನು ಬಳಸುವುದು

ಯೆಹೋಶುವ 1:7

**ನನ್ನ ಸೇವಕನಾದ ಮೋಶೆ ನಿನಗೆ ಬೋಧಿಸಿದ ಧರ್ಮೋಪದೇಶವನ್ನೆಲ್ಲಾ ಕೈಕೊಂಡು ನಡೆಯುವುದರಲ್ಲಿ ಸ್ಥಿರಚಿತ್ತನಾಗಿರು. ಪೂರ್ಣ ಧೈರ್ಯದಿಂದಿರು ಅದನ್ನು ಬಿಟ್ಟು ಎಡಕ್ಕಾದರೂ ಬಲಕ್ಕಾದರೂ ಹೋಗಬೇಡ. ಆಗ ನೀನು ಎಲ್ಲಿ ಹೋದರೂ ಕೃತಾರ್ಥನಾಗುವಿ.**

ದೇವರು ಆತ್ಮಿಕ ತತ್ವಗಳನ್ನು ಆತನ ವಾಕ್ಯದಲ್ಲಿ ಪ್ರಕಟಿಸಿದ್ದಾನೆ. ಅವುಗಳಲ್ಲಿ ಕೆಲವನ್ನು ನಾವು ಪರಿಗಣಿಸಿದ್ದೇವೆ. ನಮ್ಮ ಜೀವಿತದ ನಿರ್ದಿಷ್ಟ ಕ್ಷೇತ್ರಗಳಿಗೆ ಸಂಬಂಧಿಸುವ ಇತರೆ ತತ್ವಗಳಿವೆ. ಉದಾಹರಣೆಗೆ ದೇವರ ಕೆಲಸಕ್ಕಾಗಿ ನಮ್ಮ ಆದಾಯದಲ್ಲಿ ಹತ್ತನೆಯ ಭಾಗವನ್ನು ಕೊಡುವಂತಹ ದಶಮಾಂಶದ ತತ್ವವಾಗಿದೆ (ಮಲಾಕಿಯ 3:10-12) ಹಣಕಾಸಿನಲ್ಲಿ ದೇವರ ಆಶೀರ್ವಾದಗಳನ್ನು ನಾವು ಅನುಭವಿಸಲು ಈ ತತ್ವಕ್ಕೆ ನಾವು ವಿಧೇಯರಾಗಬೇಕು.

ಸಂಬಂಧಗಳನ್ನು ನಿಯಂತ್ರಿಸುವ ಪರಸ್ಪರ ಪ್ರೀತಿಸುವ, ಕ್ಷಮಿಸುವ ಮತ್ತು ಸಮರ್ಪಿಸುವ ಕಾನೂನುಗಳಿವೆ. ದೇವರ ತತ್ವಗಳು ಪರಸ್ಪರ ಹೆಣೆದುಕೊಂಡಿವೆ. ಅವು ಪರಸ್ಪರ ಅವಲಂಬಿತವಾಗಿವೆ. ಅವೆಲ್ಲವುಗಳಿಗೆ ನಾವು ವಿಧೇಯರಾಗಬೇಕು. ಅವುಗಳಿಂದ ಎಡಕ್ಕಾದರೂ ಅಥವಾ ಬಲಕ್ಕಾದರೂ ಹೋಗಬಾರದು ಮತ್ತು ನಮ್ಮ

ಜೀವಿತಗಳಿಗೆ ಅವುಗಳನ್ನು ಅನ್ವಯಿಸಿಕೊಳ್ಳಬೇಕು. ನಾವು ಆಶೀರ್ವಾದಗಳನ್ನು ಅನುಭವಿಸುತ್ತೇವೆ!

## ಪ್ರತಿಫಲನ

1. ವಿಶ್ವಾಸಿಗಳು ಅವರ ವಿಮೋಚನೆಯ ಅನುಕೂಲತೆಗಳನ್ನು ಆನಂದಿಸುವುದರಿಂದ ದೂರವಿಡುವ ಕೆಲವು ಸಂಗತಿಗಳು ಯಾವುವು?
2. ವಿಮೋಚನೆಯು ನಿಜವಾದದ್ದು, ಆದಾಗ್ಯೂ ನಮ್ಮ ವಿಮೋಚನೆಯ ಆಶೀರ್ವಾದಗಳನ್ನು ಅನುಭವಿಸಲು ನಾವು ವಿಧೇಯರಾಗಬೇಕಾದಂತಹ ದೇವರಿಂದ-ಕೊಡಲ್ಪಟ್ಟ ತತ್ವಗಳಿವೆ. ಈ ಒಂದು ಅಧ್ಯಾಯದಲ್ಲಿ ವಿವರಿಸಲಾದ ಇವುಗಳಲ್ಲಿ ಕೆಲವು ತತ್ವಗಳನ್ನು ವಿಮರ್ಶಿಸಿರಿ ಮತ್ತು ಅವುಗಳನ್ನು ಅನ್ವಯಿಸಿಕೊಳ್ಳುವುದರಲ್ಲಿ ಸೋತು ಹೋದರೆ ಅದು ಹೇಗೆ ನಮ್ಮ ವಿಮೋಚನೆಯ ಆಶೀರ್ವಾದಗಳನ್ನೂ ಅನುಭವಿಸುವುದರಿಂದ ದೂರವಿರಿಸುತ್ತದೆಂಬುದನ್ನು ಚರ್ಚಿಸಿರಿ.

# ನೀವು ಹೊಂದಿಕೊಳ್ಳಲು ಮಾದರಿಗಳು

ಆಲ್ ಪೀಪಲ್ಸ್ ಸಭೆಯು ಉಚಿತವಾಗಿ ವಿದ್ಯುನ್ಮಾನ ಪ್ರತಿಗಳನ್ನು(ಮೈಕ್ರೋಸಾಫ್ಟ್ ಪದ ದಾಖಲೆಗಳನ್ನು) ಯಾವುದಾದರೂ ಅಥವಾ ನಾವು ಉಪಯೋಗಿಸುವಂತಹ ಕೆಳಕಂಡ ದಾಖಲೆಗಳನ್ನು ಒದಗಿಸಲು ಸಂತೋಷವುಳ್ಳವರಾಗಿದ್ದೇವೆ.

ಸಭಾ ಸಿಬ್ಬಂದಿ ಮಾರ್ಗದರ್ಶಿ

ಸಭಾ ಸಿಬ್ಬಂದಿ ಕಾರ್ಯ ನಿರ್ವಹಣೆ ವಿಮರ್ಶೆ ದಾಖಲೆ

ಸಭಾ ಸ್ವಯಂ ಸೇವಕ ಮಾರ್ಗದರ್ಶಿ

ಲೈಫ್‌ಗ್ರೂಪ್ ನಾಯಕರುಗಳು ತರಬೇತಿ ಕೈಪಿಡಿ

ಸಭಾ ಸದಸತ್ವ ಕಿರುಪುಸ್ತಕ

ಮಾರ್ಗದರ್ಶನದ ಮಾರ್ಗದರ್ಶಿ

ಪಾತ್ರ ವಿವರಣೆಯ ಮಾದರಿ

contact@apcwo.orgಗೆ ನೀವು ಇ-ಮೇಲ್ ಕಳುಹಿಸುವ ಮೂಲಕವಾಗಿ ವಿನಂತಿಸಿ-ಕೊಳ್ಳಬಹುದಾಗಿದೆ.

ನಿಮ್ಮ ಸೇವೆಗೆ ಮತ್ತು ಸಭೆಗೆ ಸರಿ ಹೊಂದುತ್ತಿರುವಂತೆ ಉಪಯೋಗಿಸಿ ಮತ್ತು ಮಾರ್ಪಡಿಸಿಕೊಳ್ಳಲು ನೀವು ಸ್ವತಂತ್ರವಾಗಿ ಮಾಡಿರಿ ಉಪಯೋಗಿಸಿರಿ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ

ನಿನ್ನ ಕರೆಯನ್ನು ಕಡೆಗಣಿಸದಿರು

ನಿರೀಕ್ಷೆಯನ್ನು ಕಳೆದುಕೊಳ್ಳಬೇಡ

ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು

ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ದೇವರ ರಾಜ್ಯ ಕಟ್ಟುವವರು

ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು

ಬೇರುಗಳಿಗೆ ಕೊಡಲಿ ಹಾಕುವುದು

ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

ಉಜ್ಜೀವನದಲ್ಲಿ ಒಂದು ಸಭೆ

ದೇವರ ಪ್ರಸನ್ನತೆ

ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ

ಅಸ್ತಿವಾರಗಳು ಭಾಗ – 1

ತೆರೆದ ಪರಲೋಕಗಳು

ಜೀವನದ ರಾತ್ರಿಯ ಸಮಯಗಳು

ಪ್ರಾಮಾಣಿಕತೆ

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ

ಪರಿವರ್ತನೆ

ಗೌರವದ ಸಂಕೇತ

ದೇವರ ಮನೆ

ಮದುವೆ ಮತ್ತು ಕುಟುಂಬ

ದೈವಿಕ ದಯೆ

ದೈವಿಕ ಕ್ರಮ – ನಗರ ವ್ಯಾಪ್ತಿ ಸಭೆಗಳಲ್ಲಿ

ಶುದ್ಧೀಕರಿಸುವ ಬೆಂಕಿ

ಬದ್ಧತೆಯ ಬಲ

ಜಗಳರಹಿತವಾದ ಜೀವಿತ ಜೀವಿಸುವುದು

ಕೆಲಸ ಮತ್ತು ಅದರ ಮೂಲ ವಿನ್ಯಾಸ

ನಾವು ವಿಭಿನ್ನರು

ತಂದೆಯ ಪ್ರೀತಿ

ನಮ್ಮ ವಿಮೋಚನೆ

ಆತ್ಮಿಕವಾಗಿ ಮನಸುಳ್ಳವರಾಗಿರುವುದು ಲೌಕಿಕ ಜ್ಞಾನವಂತರಾಗಿರುವುದು

ದೇವರ ಮಾರ್ಗದರ್ಶನ ಪಡೆದುಕೊಳ್ಳುವುದು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ

ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ

ಶ್! ಹರಟೆ ಬೇಡ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

ಉಚಿತ ಆಡಿಯೋ, ವೀಡಿಯೋ ಸಂದೇಶಗಳು, ಪ್ರಸಂಗದ ಟಿಪ್ಪಣಿಗಳಿಗಾಗಿ ನಮ್ಮ ವೆಬ್‌ಸೈಟನ್ನು ಸಂಪರ್ಕಿಸಿ (apcwo.org/sermons) ಮತ್ತು ಇತರೆ ಅನೇಕ ಅಧ್ಯಯನ ಸಂಗ್ರಹ ಬಳಸಹುದು.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಆಲ್‌ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್‌ಸೈಟ್‌ನ್ನು ಸಂಪರ್ಕಿಸಿರಿ. www. apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು "ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ" ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು"** (ಅಪೊಸ್ತಲರ ಕೃತ್ಯ 10:43)

**"ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ"** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, "ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ" ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

## DOWNLOAD THE FREE APP!

*Search for*
**"All Peoples Church Bangalore"**
**in the App or Google play stores.**

Available on the App Store

ANDROID APP ON Google play




***A daily 5-minute video devotional.***
***A daily Bible reading and prayer guide.***
***5-minute Sermon summary.***
***Toolkit with Scriptures on various topics to build faith and information to share the Gospel.***
***Resources with sermons, sermon notes, TV programs, books, music and more.***

***IF YOU LOVE IT, TELL OTHERS ABOUT IT!***

ಸತ್ಯವೇದ ಶಾಲೆ
ಮತ್ತು ಸೇವಾತರಬೇತಿಕೇಂದ್ರ

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು - ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿಸುವುದನ್ನು ನಾವು ನಂಬುತ್ತೇವೆ.

ಏ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನು ನೀಡುತ್ತೇವೆ:

ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ(D.Th.)
ಮೂರು ವರ್ಷದ ಬ್ಯಾಚುಲರ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮಧ್ಯಾಹ್ನ 2 ರಿಂದ 5ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ವಿದ್ಯಾರ್ಥಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾತ್ಯಂದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಟ್ಟಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಲು **apcwo.org/biblecollege** ಅನ್ನು ಸಂಪರ್ಕಿಸಿರಿ.

APC-BC is accredited by the
Nations Association for Theological
Accreditation (NATA).

ಪ್ರತಿಯೊಬ್ಬ ಕ್ರೈಸ್ತನು ವಿಮೋಚಿಸಿದ ವ್ಯಕ್ತಿಯಾಗಿದ್ದಾನೆ. ದುರಾತ್ಮನ ಬಂಧನದಲ್ಲಿರುವರಾಗಿರುವುದರಿಂದ ಹೊರಗೆ ತರಲ್ಪಟ್ಟವರ ನಾವು ಆಗಿದ್ದೇವೆ ಎಂಬುದು ಇದರ ಅರ್ಥವಾಗಿದೆ. ಸೈತಾನನು ಒಬ್ಬ ವಿಶ್ವಾಸಿಯನ್ನು ಸೈತಾನನು ಅವನ ದುಷ್ಟ ಕಾರ್ಯಗಳೊಡನೆ ಕಾನೂನುಬದ್ಧವಾಗಿ ದಬ್ಬಾಳಿಕೆ ಮಾಡಲು ಸಾಧ್ಯವಿಲ್ಲ. ನಾವು ಒಮ್ಮೆ ಬಂಧನದಲ್ಲಿದ್ದೆವು ಆದರೆ ಈಗ ನಾವು ಸ್ವತಂತ್ರರಾಗಿದ್ದೇವೆ. ಒಮ್ಮೆ ಅಂಧಕಾರದ ರಾಜ್ಯದಲ್ಲಿ ನಾವಿದ್ದೇವು ಆದರೆ ನಾವು ಈಗ ಬೆಳಕಿನ ರಾಜ್ಯದಲ್ಲಿ ಇದ್ದೇವೆ.

ನಮ್ಮ ವಿಮೋಚನೆಯು ವರ್ತಮಾನ ಕಾಲದ ನಿಜಸ್ಥಿತಿಯಾಗಿದೆ. ಭವಿಷ್ಯದಲ್ಲಿ ಕೆಲವೊಮ್ಮೆ ಸೈತಾನನ ದೊರೆತನದಿಂದ ವಿಮೋಚಿಸಲ್ಪಡುತ್ತೇವೆ ಎಂಬುದಾಗಿ ನಿರೀಕ್ಷಿಸಿಕೊಂಡಿರುವಂತಿಲ್ಲ. ಇದಕ್ಕಾಗಿ ಈಗಾಗಲೇ ಬೆಲೆಯು ಪಾವತಿಸಲ್ಪಟ್ಟಿದೆ. ನಾವು ಸ್ವತಂತ್ರರಾಗಿದ್ದೇವೆ ಇಲ್ಲಿ ಮತ್ತು ಈಗ – ಈ ಜೀವನದ ಮೂಲಕವಾಗಿ ನಾವು ಪ್ರಯಾಣಿಸುವಾಗ ಕ್ರಿಸ್ತನಲ್ಲಿರುವ ನಮ್ಮ ವಿಮೋಚನೆಯನ್ನು ನಾವು ಆನಂದಿಸಬಹುದು. ವೈರಿಯು ಅವನ ಕಾರ್ಯಗಳೊಡನೆ – ಪಾಪಯುತ ಬಂಧನಗಳು ಅನಾರೋಗ್ಯಗಳು, ಕೊರತೆ, ವಿರೋಧಗಳು ಮುಂತಾದವುಗಳಿಂದ ನಮಗೆ ವಿರುದ್ಧವಾಗಿ ಬರಲು ಪ್ರಯತ್ನಿಸುತ್ತಿರುವಾಗ – ನಮ್ಮ ವಿಮೋಚನೆ ಸಾರಬಹುದು ಮತ್ತು ಕರ್ತನ ವಿಮೋಚನೆ ಹೊಂದಿದವರಾಗಿ ನಾವು ಅಂಧಕಾರದ ಕಾರ್ಯಗಳನ್ನು ವಿರೋಧಿಸಬಹುದು.

ಆಶೀಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org